
ಕಲ್ಯಾಣ ಕಿರಣ



ಬೆಲೆ ರೂ. 2

ಆಗಸ್ಟ್ 1987

ಕಲ್ಯಾಣ ಕಿರಣ

ಆಗಸ್ಟ್, ೧೯೮೭ ಮಾಸ ಪತ್ರಿಕೆ ಬಿಡಿ ಸಂಚಿಕೆ ೨ ರೂ.

ಸಂಪುಟ : ೧೬ ಸಂಚಿಕೆ : ೪ ಬಸವ ಶಕೆ ೮೮೧

ವಾರ್ಷಿಕ ಚಂದಾ ೨೦ ರೂ. ಆಜೀವ ಸದಸ್ಯತ್ವ ೨೦೦ ರೂ.

ಕಿರಣಗನ್ನಡಿ

ಮುಖ ಪುಟ : ಮಹಾನಂದಿ ಕ್ಷೇತ್ರ (ಆಂಧ್ರ ಪ್ರದೇಶ) ದಲ್ಲಿರುವ ಸುಂದರ ಕೊಳಗಳು. ಛಾಯಾ ಚಿತ್ರ—ವಿ. ಗೋಪಾಲ

ಹೊದ್ದಿಕೆಯ ನಾಲ್ಕನೆಯ ಪುಟ : "ಕ್ರಾಂತಿಯೋಗಿ ಬಸವಣ್ಣ"ದಲ್ಲಿ ಬಿಜ್ಜಳನ ಪಾತ್ರದಲ್ಲಿ ಶ್ರೀನಿವಾಸಮೂರ್ತಿ.

ಕಲ್ಯಾಣ ಕಿರಣ

ಸಂಪುಟ : 16 ಸಂಚಿಕೆ : 4 ಬಸವ ಶಕೆ : 881 ಆಗಸ್ಟ್ : 1987

ಶರಣ ಗೀತೆ

—ಮುಪ್ಪಿನ ಷಡಕ್ಷರಿಗಳು

ಮನದ ಬಲುಮೆ

ಎಡರು ಕಂಟಕಗಳು ಬಂದು ತೊಡರಿ ಕಾಡುವಲ್ಲಿ ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ॥ಪ॥

ಹಸಿವು ತೃಷೆಗಳಡಸಿ ತನುವ ಹೊಸೆದು ಹುಸಿಯ ಮಾಡುತಿರಲು
ಬಿಸಿಲು ಕಾದು ಬೆಂಕಿ ಹತ್ತಿ ನೆತ್ತಿಯುಡರಲು
ಕುಸಿದು ಕುಗ್ಗಿ ಧರೆಗೆ ಬಿದ್ದು ಅಸುವನಳಿವ ಸಮಯದಲ್ಲಿ
ಸಸಿನೆ ಬಿಡದೆ ಶಿವನ ನೆನೆವುದೆಂದಿಗಪ್ಪುದೊ ॥೧॥

ಶಿರವು ಹರಿದು ತುಂಡುಮಾಗಿ ಧರಗೆ ಉರುಳಿ ಬಿದ್ದ ಬಳಿಕ
ಗುರುವೆ ಹರ ನಮಃಶಿವಾಯ ಎನಲಿ ನಾಲಿಗೆ
ಮರಳಿಯಾಚೆ ಕಡೆಯು ಮುಂಡು ಹೊರಳಿ ಶಿವನ ಕಡೆಗೆ ಮುಗುಚಿ
ಕರವ ಮುಗಿವ ಮನದ ಬಲುಮೆಯೆಂದಿಗಪ್ಪುದೊ ॥೨॥

ಅಡವಿಯೊಳಗೆ ಸೊಕ್ಕಿದಾನೆ ತೊಡರಿ ಬಂದು ಅಡ್ಡಗಟ್ಟಿ
ಕೆಡಹಿ ಕಾಲಿನಿಂದ ಮೆಟ್ಟಿ ಸುಂಡಿಲಿಂದಲಿ
ಹಿಡಿದು ಸೀಳಿ ಹೋಳನೆರಡ ತೊಡಹಿ ಬೀಸುತಿರಲು ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ॥೩॥

ಓತು ನಿದ್ರೆ ಗೈಯುತಿರಲು ಭೀತಿ ಹಿಡಿಸಿ ಸ್ವಪ್ನದಲ್ಲಿ
ಭೂತಬೇತಳಂಗಳೈದಿ ಭೀಷ್ಮರೂಪಿನಿಂ
ಘಾತಿಸುತ್ತಿರಲು ಮನವು ಯಾತಕಂಜದಂತೆ ಭೂತ
ನಾಥನಡಿಯ ನೆನೆವ ಬಲುಮೆಯೆಂದಿಗಪ್ಪುದೋ ॥೪॥

ಅಡವಿಯಲ್ಲಿ ಬರುವ ಪಥದಿ ಸುಡತ ಬಂದ ಕಾಡ ಬೇಗೆ
ಅಡರಿ ತನುವನೆಲ್ಲ ಮುಸುಕಿ ಹೋಹುವಾಗಲು
ಕೆಡೆದು ಉರುಳಿ ತನುವು ಪ್ರಾಣಬಿಡುವ ಸಮಯದಲ್ಲಿ ಶಿವನ
ಬಿಡದೆ ನೆನೆವ ಮನದ ಬಲುಮೆಯೆಂದಿಗಪ್ಪುದೋ ॥೫॥

ಜ್ವರಗಳಡಸಿ ತನುವ ಸುಟ್ಟು ಕರಿಯ ಮುರಿಯ ಮಾಡುತಿರಲು
ಬಿರಿದು ತನುವು ಬಾಹು ಭಗದಳಂಗಳಿಂದಲಿ
ಚರಿಸದಂತೆ ಏಳದಂತೆ ಉರುಳದಂತೆ ಮಾಡುವಾಗ
ಹರನ ನೆನೆವ ಮನವ ಬಲುಮೆಯೆಂದಿಗಪ್ಪುದೋ ॥೬॥

ನಡೆವ ನುಡಿವ ಕೊಡುವ ಕೊಂಬ ಉಡುವ ತೊಡುವ ನಿದ್ರೆ, ಪ್ರಾಣ
ಬಿಡುವ ಸಮಯದಲ್ಲಿ ಶಿವನ ನೆನೆವ ಮನವನು
ಮೃಡಷಡಕ್ಷರಾಂಕ ನಿಮ್ಮ ಬಿಡದೆ ಬೇಡುತಿಹೆನು ನಾನು
ಕೆಡುವ ಸಕಲವಾದ ಪದಗಳನ್ನು ಒಲ್ಲೆನು ॥೭॥

ಶರಣಗೀತೆ—ವ್ಯಾಖ್ಯಾನ

—ಮಾತಾಜಿ

(ಜುಲೈ ಸಂಚಿಕೆಯಿಂದ ಮುಂದುವರಿಯುವುದು)

ಪರಮಾತ್ಮನ ನಾಮಸ್ಮರಣೆ ಆಧ್ಯಾತ್ಮ ಜೀವಿಗೆ ಬಲು ಆವಶ್ಯಕ ಅದು ಬಹಳ ಶಕ್ತಿಶಾಲಿಯೂ ಅಹುದು. ಕೆಲವರು ಅದೇ ಉದ್ದೇಶದಿಂದ ಕುಳಿತು ಧ್ಯಾನ-ಜಪ ಮಾಡುವರಾದರೂ ಆಕಸ್ಮಿಕಗಳು ಒದಗಿದಾಗ, ದುಃಖಕರ, ಭಯಾನಕ ಪ್ರಸಂಗಗಳು ಎದುರಾದಾಗ ಮಂತ್ರಧ್ಯಾನವನ್ನು ಮರೆಯುವರು. ಜಾಗ್ರತ-ಸ್ವಪ್ನ-ಸುಷುಪ್ತಿ ಅವಸ್ಥೆಗಳಲ್ಲಿಯೂ, ಸುಖ ದುಃಖಗಳ ಪ್ರಸಂಗ ಒದಗಿದಾಗಲೂ ಅವನ ನಾಮಸ್ಮರಣೆ ಮಾಡುವುದು ಅತ್ಯಂತ ಅವಶ್ಯಕವಿದೆ. ಅಂಥ ಮನಸ್ಥಿತಿ ಪಡೆಯಲು ಷಡಕ್ಷರಿಗಳು ಹಂಬಲಿಸುತ್ತಾರೆ.

ಪಲ್ಲವಿ : ತೋಂದರೆ ತಾಪತ್ರಯ ವಿಘ್ನಗಳು ಬಂದು ಮುಸುಕಿದಾಗ ದೇವನನ್ನು ಬಿಡದೆ ನೆನೆಯುವಂತಹ ಉತ್ತುಂಗ ಮನಸ್ಥಿತಿ ನನಗೆ ಯಾವಾಗ ಬರುವುದೋ?

ಪದ್ಯ ೧ : ಹಸಿವು, ಬಾಯಾರಿಕೆಗಳು ದೇಹವನ್ನು ಆಕ್ರಮಿಸುತ್ತ ಶರೀರವನ್ನು ನಿಸ್ಸತ್ವಗೊಳಿಸುತ್ತವೆಂದು ಭಾವಿಸೋಣ. ಅಥವಾ ಬಿಸಿಲು ಸಿಕ್ಕಾಪಟ್ಟೆ ಏರಿ, ಸೂರ್ಯನ ತಾಪ ಬೆಂಕಿ ಹತ್ತಿದಂತೆ ಬೇಯಿಸುತ್ತಿರಲು ಮೈಯಲ್ಲಿ ಶಕ್ತಿ ಇಲ್ಲದೆ ಕುಸಿದು ಬಿದ್ದು ಸಂಕಟಪಡುವಾಗ 'ಅಯ್ಯೋ ಅಪ್ಪೋ ಯಾರಾದರೂ ಉಳಿಸಿರಿ ...' ಎಂದು ಚೀರಾಡದೆ. ಶಾಂತ ಮನಸ್ಸಿನಿಂದ ಶಿವಧ್ಯಾನ ಮಾಡುವ ಮಾನಸಿಕ ಸ್ಥೈರ್ಯ ಎಂದು ಬರುತ್ತದೋ ?

ಪದ್ಯ ೨ : ಯಾರಾದರೂ ಕೊಂದು ಹಾಕಿದಾಗ ಶಿರವು ಹರಿದು ತುಂಡಾಗಿ ಭೂಮಿಗೆ ಬಿದ್ದಿತು ಎಂದುಕೊಳ್ಳೋಣ. ಆಗ ಸಹಿತ ಶಿರವು ನಮಃಶಿವಾಯ ಗುರುವೆ ಎಂದು ಅನ್ನುತ್ತಲಿರಬೇಕು.

ಪದ್ಯ ೩ : ಕಾಡಿನಲ್ಲಿ ಒಂದು ಉನ್ಮತ್ತವಾಗಿ ತಿರುಗಾಡುವ ಆನೆ ಬಂದು ಎದುರು ನಿಂತು ಅಡ್ಡಗಟ್ಟಿ, ಕೆಡವಿ ನನ್ನನ್ನು ಕಾಲಿನಿಂದ ಮೆಟ್ಟಿ ಸೊಂಡಿಲಿನಿಂದ ಹಿಡಿದು, ಸೀಳಿ ಎರಡು ತುಂಡು ಮಾಡಿ ಬೀಸುತ್ತಿದೆ ಎಂದುಕೊಳ್ಳೋಣ. ಆಗ ಸಹ ನನ್ನ ಮನಸ್ಸು ಶಿವಧ್ಯಾನ ಮಾಡುವಂಥ ಸ್ಥಿತಿ ಹೊಂದಿರಬೇಕು.

ಪದ್ಯ ೪ : ಸುಖವಾದ ನಿದ್ರಾನಂದದಲ್ಲಿ ನಾನಿರುವಾಗ, ಭಯಾನಕವಾದ ಸ್ವಪ್ನವು ಬೀಳುತ್ತದೆ ಎಂದುಕೊಳ್ಳೋಣ. ಆ ಸ್ವಪ್ನದಲ್ಲಿ ಭೂತ-ಭೇತಾಳಂಗಳು ಬಂದು ಹೆದರಿಸುತ್ತಿವೆ ಎಂದುಕೊಂಡರೂ ಸ್ವಲ್ಪವೂ ಅಂಜದಂತೆ ಪರಮಾತ್ಮನ ನಾಮಸ್ಮರಣೆ ಮಾಡುವಸ್ಥೈರ್ಯ ಎಂದು ನನಗೆ ಒದಗುವುದೋ ?

ಪಧ್ಯ ೫ : ಕಾಡಿನಲ್ಲಿ ಬರುತ್ತ ಇರುವಾಗ ಕಾಡ್ಗಿಚ್ಚು ಬಂದು ಶರೀರವನ್ನು ದಹಿಸುವಾಗ, ಶರೀರವು ಬೆಂದು ಉರುಳುವಾಗ ದೇವನ ನೆನೆಯುವಂತಹ ಮನಸ್‌ಸ್ಥಿತಿ ನನಗೆಂದು ಬರುವುದೋ ?

ಪಧ್ಯ ೬ : ಜ್ವರವೆಂಬುವ ಕಿಚ್ಚು ಮೇಲೆರಗಿ ಶರೀರವನ್ನು ಕರುಕಾಗಿ ಮಾಡಿ, ಶರೀರದಲ್ಲಿ ಸಿಡಿಯುವಂತಹ ಅನುಭವವಾಗುತ್ತಿರುವಾಗ, ಮೇಲೇಳಲು ಆಗದಂತಹ, ಹೊರಳದಂತಹ, ಉರುಳಾಡಲೂ ಸಾಧ್ಯವಿಲ್ಲದ ಸ್ಥಿತಿ ಒದಗಿದಾಗ ಶಿವನ ನೆನೆಯುವಂತಹ ಆತ್ಮಸ್ಥೈರ್ಯ ಎಂದಿಗೆ ನನ್ನ ಮನಸ್ಸಿಗೆ ಬರುವುದೊ ?

ಪಧ್ಯ : ೭ ನಡೆಯುವಾಗ, ನುಡಿಯುವಾಗ, ಏನನ್ನಾದರೂ ಇತರರಿಗೆ ಕೊಡುವಾಗ ಊಟ ಮಾಡುವಾಗ, ವಸ್ತ್ರಗಳನ್ನು ಉಡುವಾಗ, ಶಿವಾಭರಣಗಳನ್ನು ತೊಡುವಾಗ ನಿದ್ರೆ ಮಾಡುವಾಗ ಪ್ರಾಣವನ್ನು ಬಿಡುವ ಸಮಯದಲ್ಲಿಯೂ ಶಿವನನ್ನು ನೆನೆಯುವಂತಹ ಮನಸ್ಸನ್ನೇ ಕೊಡು ಎಂದು ಪರಮಾತ್ಮ ನಿನ್ನನ್ನು ಬೇಡುತ್ತೇನೆ. ವ್ಯಕ್ತಿಯನ್ನು ಕೆಡಿಸುವ ಇನ್ನು ಯಾವ ವರಗಳನ್ನು ಪದವಿಗಳನ್ನೂ ನಾನು ಒಲ್ಲೆನು.

ಮನುಷ್ಯನು ಏನು ತಿಂದಿದ್ದಾನೆ ಎಂಬುದು ಅವನ ತೇಗಿನಲ್ಲಿ ವ್ಯಕ್ತವಾಗುವಂತೆ, ಅವನ ಆಂತರಂಗಿಕ ವ್ಯಕ್ತಿತ್ವ ಅವನ ನಡೆನುಡಿಗಳಲ್ಲಿ ವ್ಯಕ್ತವಾಗುವುದು. ಆಕಸ್ಮಿಕವಾಗಿ ಜರುಗುವ ಕೆಲವು ಘಟನೆಗಳಲ್ಲಿ, ಎಡಹುವಿಕೆ, ಕಾಯಿಲೆ, ನರಳಾಟಗಳಲ್ಲಿ, ಆಕಸ್ಮಿಕ ಉದ್ಗಾರಗಳಲ್ಲಿ ಅವನ ಅಂತರಂಗ ಸ್ಫುಟವಾಗುವುದು. ಅಯ್ಯೋ, ಯಪ್ಪಾ, ನಾನು ಸತ್ತೆ, ಅವನ ಮನೆ ಹಾಳಾಗಿಗ್ಹೋಗ್ಲಿ, ಅವನು ಮಣ್ಣು ಮುಕ್ಕಲಿ ಹೀಗೆಲ್ಲ ಕೆಟ್ಟಕೆಟ್ಟ ಮಾತನಾಡುವುದನ್ನು, ಅಮ್ಮಾ ಅಪ್ಪಾ ಎಂದು ನರಳಾಡುವುದನ್ನು ನಾವು ಲೌಕಿಕರಲ್ಲಿ ಕಾಣುತ್ತೇವೆ. ಇಷ್ಟೇ ಅಲ್ಲ ಸಾಯುವ ಸನ್ನಿವೇಶ ಒದಗಿದಾಗಲೂ ದೇವನ ಸ್ಮರಣೆ ಮಾಡದೆ ಹೆಂಡತಿ-ಮಕ್ಕಳು-ಮೊಮ್ಮಕ್ಕಳನ್ನು ಕೂಗಿ ಕೂಗಿ ಕರೆಯುವುದನ್ನು ನೋಡುತ್ತೇವೆ. ತೆಂಗಿನ ಕಾಯಿ ಎಳೆಯದಿದ್ದಾಗ ಕಾಯಿಯು ಚಿಪ್ಪಿಗೆ ಬಲವಾಗಿ ಅಂಟಿಕೊಂಡಿರುತ್ತದೆ. ಅದನ್ನು ತುರಿದು ತುರಿದು ತೆಗೆಯಬೇಕಾಗುತ್ತದೆ, ಗಿಟುಕಾಗಿದ್ದರೆ ಒಡೆಯುವುದೇ ತಡ ಫಳಾರ್ ಎಂದು ಸುಲಭವಾಗಿ ಕಳಚುತ್ತದೆ. ಹಾಗೆ

ಮನಸ್ಸು ಪಕ್ವವಾಗಿದ್ದರೆ ಸಾವಿನಲ್ಲಿ ಸುಲಭವಾಗಿ ದೇವನನ್ನು ನೆನೆಯುತ್ತದೆ; ನಗು ನಗುತ್ತ ಸಾವನ್ನು ಎದರಿಸುತ್ತದೆ. ಇಲ್ಲವಾದರೆ ಜೀವವು ಹೋಗಲಾರದೆ ಒದ್ದಾಡುತ್ತಿರುತ್ತದೆ.

ಮಂತ್ರಧ್ಯಾನವು ಭವಬಂಧನದಿಂದ ಬಿಡಿಸುವುದಷ್ಟೇ ಅಲ್ಲ ನಿರ್ಲಿಪ್ತತೆಯನ್ನು ತಂದುಕೊಡುವುದು ಮಾತ್ರವಲ್ಲ ಮನಸ್ಸನ್ನು ಸಂತೈಸುತ್ತದೆ; ಉದ್ವಿಗ್ನತೆಯನ್ನು ಕಮ್ಮಿ ಮಾಡುತ್ತದೆ. ನೋವಿನ ಉತ್ಕಟತೆಯನ್ನು ಸಹ ಕಮ್ಮಿ ಮಾಡುತ್ತದೆ. ಉದ್ವಿಗ್ನಗೊಂಡಾಗ, ರಕ್ತದೊತ್ತಡ ಏರಿದಾಗ ಶವಾಸನದಲ್ಲಿ ಮಲಗಿ ನಿಧಾನವಾಗಿ ಉಸಿರಾಡುತ್ತ ಮಂತ್ರದ ಅನುಸಂಧಾನದಲ್ಲಿ ತೊಡಗಿದರೆ ಉದ್ವಿಗ್ನತೆ ಕಮ್ಮಿಯಾಗುವುದು; ರಕ್ತದೊತ್ತಡ ಇಳಿಯುವುದು.

ಕೆಲವು ಸಲ ಏನಾದರೂ ಅವಗಡಗಳೊದಗಿದಾಗ ವಿನಾ ಕಾರಣ ಗಾಬರಿಗೊಂಡು, ಭೀತಿಗೊಂಡು ವ್ಯಕ್ತಿಯು ಮುಂದಾಲೋಚನೆ ಮಾಡುವ, ತ್ವರಿತ ನಿರ್ಧಾರ ತೆಗೆದುಕೊಳ್ಳುವ ಶಕ್ತಿಯನ್ನೇ ಕಳೆದುಕೊಳ್ಳುವನು. ಅದರ ಬದಲು ಪರಮಾತ್ಮನ ನಾಮಸ್ಮರಣೆ ಮಾಡುತ್ತ, "ದೇವಾ... ಎಲ್ಲವೂ ನಿನ್ನ ಸಂಕಲ್ಪದಂತೆ ನಡೆಯುವುದು. ಮಾಡುವ ಪ್ರಯತ್ನವು ಪ್ರಾಮಾಣಿಕವಾಗಿ ನಿಷ್ಠಾಯುಕ್ತವಾಗಿರಬೇಕಾದ್ದು ನಮ್ಮ ಪಾಲಿನದು." ಎಂಬ ತಿಳುವಳಿಕೆಯಿದ್ದರೆ, ಶರಣಾಗತಭಾವವಿದ್ದರೆ ಸಕಾಲದಲ್ಲಿ ಧೈರ್ಯವೊದಗುವುದು, ಮುಂದಿನ ಮಾರ್ಗ ತೋರುವುದು.

ಇದನ್ನೆಲ್ಲ ಮನಸ್ಸಿನಲ್ಲಿಟ್ಟುಕೊಂಡು ಷಡಕ್ಷರಿಗಳು ಹೇಳುವರು : "ಹಸಿವು-ತೃಷೆಗಳು, ರೋಗ-ರುಜಿನಗಳು ಕಾಡುವಾಗಲಾಗಲೀ ಭಯಾತ್ಮಕ ಸನ್ನಿವೇಶ ಒದಗಿದಾಗಲಾಗಲೀ ನನ್ನ ಮನಸ್ಸು ಎದೆಗೆಡದೆ, ಅನ್ಯಚಿಂತೆ ಮಾಡದೆ ನಿನ್ನನ್ನೇ ನೆನೆಯಬೇಕು. ಇದರಿಂದ ಅಧಿಭೌತಿಕವಾದ ತೊಂದರೆ ಬರವು ಬಂದರೂ ಹೆದರಿಸಿ ನಿಸ್ಸತ್ವಗೊಳಿಸವು. ಅಧಿ ದೈವಿಕ, ಆಂತರಂಗಿಕ ಯಾವುದೇ ವಿಘ್ನಗಳು ಎರಗವು; ಎರಗಿದರೂ ಧೈರ್ಯಗೆಡಿಸವು ಅಂಥ ಮನಃಸ್ಥಿತಿಯನ್ನೇ ನೀನು ನನಗೆ ಕರುಣಿಸು."

❋

ವಿಶ್ವಕಲ್ಯಾಣ ಮಿಷನ್ನಿಗೆ ಕಾಣಿಕೆ

ದಿ. 19-8-1987 ರಂದು ಗೃಹಪ್ರವೇಶ ಮಾಡಿ ಶ್ರೀಮತಿ ವಿಮಲಾಂಬ ಮತ್ತು ಶ್ರೀ ಪರಶಿವಮೂರ್ತಿ ದಂಪತಿಗಳು, ಅದೇ ಸನ್ನಿವೇಶದಲ್ಲಿ ಪಾದಪೂಜೆ ನೆರವೇರಿಸಿ ೧೦೦೧-೦೦ ರೂಗಳನ್ನು ವಿಶ್ವಕಲ್ಯಾಣ ಮಿಷನ್ನಿಗೆ ಕಾಣಿಕೆಯಾಗಿ ಸಲ್ಲಿಸಿದ್ದಾರೆ. ಬೆಂಗಳೂರಿನ ಬಸವೇಶ್ವರ ನಗರದ ನಿವಾಸಿಗಳಾದ ಈ ಶರಣ ದಂಪತಿಗಳಿಗೆ, ಅವರ ಇಬ್ಬರು ಮಕ್ಕಳಿಗೆ, ಅವರ ಬಂಧು ಬಳಗಕ್ಕೆ ಗುರು ಬಸವಣ್ಣನವರ ದಿವ್ಯ ರಕ್ಷೆ ಸದಾ ಇರಲೆಂದು, ಪರಮಾತ್ಮನು ಆಯುರಾರೋಗ್ಯ ಭಾಗ್ಯ ಸಕಲ ಸಂಪದವನ್ನು ಅವರಿಗೆ ಕರುಣಿಸಲೆಂದು ಹಾರೈಸುವೆ,

—ಮಾತಾಜಿ

ಮಾತೃಹರಕೆ

ಸಾಮೂಹಿಕ ಪ್ರಾರ್ಥನೆ—ಆವಶ್ಯಕತೆ

೧. ಕರ್ಮವೆಂಬಂಕದೊಡನೆ ತೊಡರಿದೆ
ಬಿನ್ನಪವನವಧಾರು; ನಿಮ್ಮಾಳಿನ ಭಾಷೆಯು
ಕಡೆಗಳಕ್ಕೆ ನೂಕುವೆ, ಕೆಡಹುವೆನಂಕವ;
ಕರೆದರೋಸರಿಸಿದರೆ ನಿಮ್ಮಾಳಲ್ಲ
ಶಿವಶರಣೆಂಬ ದಂಡೆಯ ಹೂಡಿ
ಗಣ ಮೇಳಾಪವೆಂಬಲಗಿನಿಂದಿರಿವೆ, ಕೂಡಲಸಂಗಮದೇವಾ.

೨. ಮಡಿಕೆಯ ಮಾಡುವೊಡೆ ಮಣ್ಣೇ ಮೊದಲು
ತೊಡಿಗೆಯ ಮಾಡುವೊಡೆ ಹೊನ್ನೇ ಮೊದಲು
ಶಿವಪಥವನರಿವೊಡೆ ಗುರು ಪಥವೆ ಮೊದಲು
ಕೂಡಲ ಸಂಗಮ ದೇವರನರಿವೊಡೆ ಶರಣರ ಸಂಗವೆ ಮೊದಲು

ಇಂತಹ ವಚನಗಳು ನೂರಾರು. ಸ್ವಭಾವತಃ ಹೋರಾಟಗಾರರಾದ ಕ್ರಾಂತಿ ಪುರುಷ ಬಸವಣ್ಣನವರಿಗೆ ಬದುಕೊಂದು ಸಮರಾಂಗಣ. 'ಅಂಕ ಓಡಿದರೆ ತೆತ್ತಿಗಂಗೆ ಭಂಗ', 'ಓಡುವಾತ ಲೆಂಕನಲ್ಲ.' 'ಎಲ್ಲರೂ ವೀರರು ಎಲ್ಲರೂ ಧೀರರು; ಕಾಳಗದ ಮುಖದಲ್ಲಿ ಕಾಣಲಾಗದು ಓಡುವ ಮುಖದಲ್ಲಿ ಕಾಣಬಹುದು', ಈ ಎಲ್ಲ ಹೋಲಿಕೆಗಳು ಅದನ್ನೇ ಸ್ಥಿರಪಡಿಸುತ್ತವೆ.

ಮೇಲೆ ಕಾಣಿಸಿದ ವಚನದಲ್ಲಿ ಇರುವುದು ಆಧ್ಯಾತ್ಮಿಕ ಯುದ್ಧ. ಕರ್ಮವೇ ಎದುರಾಳಿ. ಭಕ್ತನೆಂಬ ಯೋಧ ಕರ್ಮವೆಂಬ ಶತ್ರುವನ್ನು ಎದುರಿಸಲು ಸಿದ್ಧನಾಗಿದ್ದಾನೆ. ದೇವನಲ್ಲಿ ಶರಣಾಗತಿ ಎಂಬ ದಂಡೆಯನ್ನು ಹೂಡಿ ಗಣ ಮೇಳಾಪ (ಶರಣ ಗೋಷ್ಠಿ) ಎಂಬ ಅಲಗಿನ ಬಲದಿಂದ ಭವ ಬಂಧನದ ಶತ್ರುವನ್ನು ಗೆಲ್ಲುತ್ತಾನೆ. "ಗಣ ಮೇಳಾಪ" ಕರ್ಮದ ಅರಿಯನ್ನು ಗೆಲ್ಲಲು ಅತ್ಯಂತ ಅವಶ್ಯಕ.

ಮುಂದಿನ ವಚನದಲ್ಲಿ ಈ ಶರಣ ಸಂಗದ ಮಹತ್ವ ಇನ್ನಷ್ಟು ವ್ಯಕ್ತಗೊಳ್ಳುವುದು. ಮಡಿಕೆಯನ್ನು ಸಿದ್ಧಪಡಿಸಲು ಮಣ್ಣು ತೀರಾ ಅವಶ್ಯಕ, ಹಾಗೆ ಆಭರಣ ಸಿದ್ಧಪಡಿಸಲು ಹೊನ್ನು ಕೂಡ ಅವಶ್ಯಕ. ಸಾತ್ವಿಕವಾದ ಧರ್ಮಮಾರ್ಗವನ್ನು ಅರಿಯ

ಬೇಕಾದರೆ ಗುರುವು ಅತ್ಯವಶ್ಯಕ. ಸಮರ್ಥ ಗುರುವಿನ ಮಾರ್ಗದರ್ಶನವಿಲ್ಲದಿದ್ದರೆ ಸಾಧಕನಿಗೆ ಬಳಲಿಕೆಯೇ ಜಾಸ್ತಿ. ಗುರುವಿಲ್ಲದ ಮುಮುಕ್ಷು ತಾಯಿಯಿಲ್ಲದ ಅನಾಥ ಶಿಶುವಿನಂತೆ. ತಾಯಿಯಿದ್ದರೆ ಹಾವನ್ನು, ಕಿಚ್ಚನ್ನು ಹಿಡಿದು ಮಗುವು ಅಪಾಯವನ್ನು ಎದುರಿಸೀತು ಎಂದು ಆತಂಕದಿಂದ ಮಗುವಿನ ಬೆನ್ನ ಹಿಂದೆಯೇ ಸುತ್ತುವಳು. ಅನಾಥ ಮಗುವಾದರೆ ಅದನ್ನು ಯಾರು ಗಮನಿಸಬೇಕು ? ತಾನೇ ಜಾರಿ ಬೀಳಬೇಕು, ಏಳಬೇಕು. ಕಿಚ್ಚಿನಲ್ಲಿ ಕೈಯಿಟ್ಟು ಸುಟ್ಟುಕೊಂಡು ಬುದ್ಧಿ ಕಲಿಯಬೇಕು. ಗುರುವಿಲ್ಲದ ಸಾಧಕರ ಪರಿಸ್ಥಿತಿಯೂ ಹೀಗೆಯೆ.

ಗುರುವು ದಾರಿಯನ್ನು ಖಚಿತಪಡಿಸಿಕೊಂಡವನಾದ ಕಾರಣ ಯಾವುದೇ ಏಳುಬೀಳುಗಳಿಲ್ಲದೆ ಶಿಷ್ಯನು ಮುಂದುವರಿಯುವಂತೆ ಮಾರ್ಗವನ್ನು ತೋರಬಲ್ಲನು. ಸೂಕ್ತ ಗುರುವಿನ ಮಾರ್ಗದರ್ಶನದಿಂದ ಅನವಶ್ಯಕ ಕೋಟಲೆ ಇಲ್ಲವಾಗುತ್ತದೆ. ಆದರೆ ಪರಮಾತ್ಮನ ನಿಜ ಜ್ಞಾನ, ನಿಜಾನುಭವ ಬೇಕಾದರೆ ಶರಣ ಸಂಗವು ಅತ್ಯವಶ್ಯಕ. ಗುರುಕೃಪೆಯ ನಂತರ ನಿರಂತರವಾಗಿ ಪಡೆಯಬೇಕಾದ ಸಂಪತ್ತು ಶರಣರ ಸಂಗ. ಗುರುವು ದಾರಿ ತೋರುವ ಕೈಮರದಂತಿದ್ದರೆ ಶರಣರು ಪಥದಲ್ಲಿ ಜೊತೆಗೂಡಿ ನಡೆಯುವ ಸಹಪಥಿಕರಂತೆ.

ಭೂಮಿಯಲ್ಲಿ ಬೀಜವನ್ನು ಬಿತ್ತುತ್ತೇವೆ. ಮುಂದೆ ಬೀಜಗಳು ಮೊಳಕೆಯೊಡೆಯುತ್ತವೆ. ಕಾಲಕಾಲಕ್ಕೆ ಮೆಲ್ಲನೆ ತಲೆ ಎತ್ತುವ ಕಳೆಗಳನ್ನು ಸಕಾಲದಲ್ಲಿ ನಿರ್ಮೂಲನ ಮಾಡದಿದ್ದರೆ, ಬೆಳೆಗಿಂತಲೂ ಕಳೆಯೇ ಮೇಲೆದ್ದು, ಬೆಳೆಯನ್ನು ನುಂಗಿ ನೀರು ಕುಡಿದಿರುತ್ತದೆ. ಎಷ್ಟೋ ಬಾರಿ ಪ್ರವಚನವಾದಾಗ, ನಮ್ಮ ಪ್ರಾಯೋಗಿಕ ಅನುಭವದಂತೆ ನಾವು ಸಾಕಷ್ಟು ಬೌದ್ಧಿಕ ಕೃಷಿ ಮಾಡಿ ಬಸವ ತತ್ತ್ವದ ವೈಚಾರಿಕ ಬೀಜ ಬಿತ್ತುತ್ತೇವೆ. ಆ ನಂತರದ ಸಂಸ್ಕಾರ ಬಲವಾಗಿಲ್ಲದಿದ್ದರೆ ಬೆಳೆದ ಮೂಢನಂಬಿಕೆಯ ಕಳೆಯ ಮಧ್ಯೆ ಬಸವ ಭಕ್ತಿಯೂ ಕೊರಕೊರ ಅಂತ ಜೀವಿಸಿರುತ್ತದೆ ಇಲ್ಲವೇ ಸಂಪೂರ್ಣ ನಾಶವಾಗಿರುತ್ತದೆ. ಶುದ್ಧ ಬಸವ ತತ್ತ್ವಾನುಯಾಯಿ ವಿಚಾರ ಶೀಲ ಭಕ್ತನಾಗಬೇಕು ; ಕರ್ತನನ್ನು ಮಾತ್ರ ನಂಬಬೇಕು. ಹತ್ತು ಹಲವು ಮೂಢದಾರಿಗಳಿಗೆ ಎಳೆಸಬಾರದು. ದೇವರನ್ನು ತನ್ನಂತರಂಗದಲ್ಲಿ ಕಂಡುಕೊಳ್ಳಬೇಕೇ ವಿನಾ ಎಲ್ಲೆಲ್ಲೋ ಹುಡುಕಬಾರದು. ಈ ಬಗೆಯ ನಿಜವಾದ ತಿಳುವಳಿಕೆ ಕೇವಲ ಪ್ರವಚನದಿಂದ ಮನನವಾಗದು. ಶಸ್ತ್ರಚಿಕಿತ್ಸೆಯ ನಂತರ ಪೋಸ್ಟ್ ಆಪರೇಷನ್ ಕೇರ್ ಬಹಳ ಮುಖ್ಯವೆಂಬಂತೆ ಪ್ರವಚನ ಶ್ರವಣಾನಂತರ ಓದುವ ನಮ್ಮ ಸಾಹಿತ್ಯ ಮತ್ತು ಅದಕ್ಕಿಂತ ಮಿಗಿಲಾಗಿ ಸಾಮೂಹಿಕ ಪ್ರಾರ್ಥನೆ ವ್ಯಕ್ತಿಯ ಮಾರ್ಗವನ್ನು ಸ್ಪಷ್ಟಗೊಳಿಸುತ್ತವೆ.

ಕಣ್ಣುಕಟ್ಟಿಕೊಂಡು ಹುಡುಕುವ ಆಟದಂತೆ ಬಹುಪಾಲು ಹಿಂದುಗಳ ಭಕ್ತಿ ಸಾಧನೆ ಸಾಗಿರುತ್ತದೆ. ಆಗ ಅವರು ಭೀತಿಯೇ ಮುಖ್ಯವಾದ ಮಾರ್ಗವನ್ನು ಬಿಟ್ಟು

ನಿಜದೇವರನ್ನು ನಂಬಬೇಕೆಂದು ನಾವು ಬೋಧಿಸಿದಾಗ', ಅವರು ಅಂಜುತ್ತಂಜುತ್ತಲೇ ದೇವರನ್ನು ನಂಬಲು ತೊಡಗುವರು. ಆಗ ಕಾಕತಾಳೀಯದಂತೆ ಕೆಲವು ಕಷ್ಟ-ನಷ್ಟ ಎರಗಿದಾಗ ಅಧೀರರಾಗುವರು. ಅಂಥ ಸನ್ನಿವೇಶದಲ್ಲಿ 'ಗಣಮೇಳಾಪ' 'ಶರಣಗೋಷ್ಠಿ' ನಡೆಯುತ್ತಿದ್ದು ಇವರು ಭಾಗವಹಿಸುತ್ತಿದ್ದರೆ, ಸಹ ಪಥಿಕರಾದ ಶರಣರು ಸಮಾಧಾನ-ಧೈರ್ಯ ಹೇಳಿ ನಂಬಿಕೆ ಕುಸಿಯದಂತೆ ದೃಢ ಪಡಿಸುವರು. ಇದನ್ನರಿತೇ ಹೇಳುವರು ಬಸವಣ್ಣನವರು, 'ದೇವರನ್ನರಿವೊಡೆ ಶರಣರ ಸಂಗವೇ ಮೊದಲು' ಎಂಬುದಾಗಿ.

ಎಂತೆಂತಹ ಅಸಂಸ್ಕಾರಿತ ನಿಮ್ನ ವರ್ಗಗಳಿಂದ ಬಂದ ಅಶಿಕ್ಷಿತ ಜನರು ಸಹ ಕ್ರೈಸ್ತ, ಇಸ್ಲಾಂ ಧರ್ಮಗಳನ್ನು ಸ್ವೀಕರಿಸುತ್ತಿದ್ದಂತೆಯೇ, ಏಕ ದೇವೋಪಾಸಕರಾಗುವರು, ಇದು ಹೇಗೆ ಸಾಧ್ಯ ಎಂದರೆ ಆ ಧರ್ಮಗಳ ಸಮುದಾಯ ಪ್ರಾರ್ಥನೆಗಳೇ ಕಾರಣ. ಪ್ರಾರ್ಥನೆಗಳು ದೇವರನ್ನು-ಗುರುವನ್ನು ಕುರಿತಾದ ನಂಬಿಗೆಗಳನ್ನು ದೃಢಪಡಿಸುತ್ತಾ ಹೋಗುವವು ಈ ಸಾಮೂಹಿಕ ಸಮಾವೇಶಗಳು ಆ ಧರ್ಮಗಳ ಸಂಘಟನೆಗೆ ಕಾರಣವಾದಂತೆ, ಹಿಂದುಗಳು ವಾರಕ್ಕೊಮ್ಮೆಯಾದರೂ ಒಂದು ಕಡೆ ಸೇರದಿರುವುದು ಇವರ ಅನೈಕ್ಯತೆಗೆ ಕಾರಣವಾಗಿದೆ.

ಬದುಕು ಬಹಳ ಯಾಂತ್ರಿಕ, ಕೃತಕವಾಗುತ್ತಿದ್ದು ಬಹಿರಂಗದ ಕ್ಲೇಶಗಳಿಂದ ಬೇಸತ್ತ ಜನರಿಗೆ, ಯಾವುದೇ ದುಶ್ಚಟಗಳಿಲ್ಲದ ಸಾತ್ವಿಕ ಜನರು ಒಂದು ಕಡೆ ಸೇರಲಿಕ್ಕೆ ಸಾಮೂಹಿಕ ಪ್ರಾರ್ಥನಾ ಸಭೆಗಳು ಬಹಳ ಸಹಕಾರಿಯಾಗುತ್ತವೆ. 'ಕುರುಡರ ರಾಜ್ಯದಲ್ಲಿ ಕಣ್ಣಿದ್ದವನೇ ಅಪರಾಧಿ' ಎಂಬಂತೆ ಮಾಂಸಾಹಾರ ಮಾಡದ, ಸಿಗರೇಟು ಸೇದದ, ಕುಡಿಯದ, ಸ್ವೇಚ್ಛಾಚಾರ ಪ್ರವೃತ್ತಿ ಇಲ್ಲದ ಜನರೇ ಇಂದು ಅಲ್ಪಸಂಖ್ಯಾತರಾಗಿ ಅವಹೇಳನಕ್ಕೆ ಒಳಗಾಗುತ್ತಿದ್ದಾರೆ. ಹಿಂದೊಮ್ಮೆ ದುಶ್ಚಟಗಳ ದಾಸರು ಕದ್ದುಮುಚ್ಚಿ ಸಂಕೋಚಪಟ್ಟು ತಮ್ಮ ವ್ಯಸನಗಳನ್ನು ತಣಿಸಿಕೊಳ್ಳುತ್ತಿದ್ದರಾದರೆ ಇಂದು ಸಾತ್ವಿಕ ಜನರು ಸಂಕೋಚಪಟ್ಟುಕೊಂಡು ಮುದುಡಿ ಕುಳಿತುಕೊಳ್ಳುವಂಥ ಕಾಲ ಬರುತ್ತಿದೆ. ಹೀಗಾಗಿ ಅಲ್ಪಸಂಖ್ಯಾತರಾಗಿರುವ ಸಜ್ಜನರು ಸಾತ್ವಿಕರು ತಮ್ಮ ಕಾಯಕ ಮುಗಿಯುತ್ತಿದ್ದಂತೆಯೇ ತಮ್ಮನ್ನು ತಾವು ರಕ್ಷಿಸಿಕೊಳ್ಳಲು, ತಮ್ಮ ಮಕ್ಕಳನ್ನು ತಾವು ಕಾಪಾಡಿಕೊಳ್ಳಲು ಗೃಹ ಬಂಧನದಲ್ಲಿ ಕಾಲಕಳೆಯುವ ವಾತಾವರಣ ನಿರ್ಮಾಣವಾಗುತ್ತಿದೆ. ಇಂಥ ಎಲ್ಲ ಜನರಿಗೆ ದೊಡ್ಡ ಆಶ್ವಾಸನೆ ಸಾಮೂಹಿಕ ಪ್ರಾರ್ಥನಾ ಸಭೆ, ಅಲ್ಲಿ ಬಂದು ದೇವರನ್ನು-ಗುರುವನ್ನು ಪ್ರಾರ್ಥಿಸಲು, ಉತ್ತಮ ವಿಚಾರ ಮಾಡಲು, ಉದಾತ್ತ ವಿಚಾರ ಕುರಿತು ಚಿಂತನೆ ಮಾಡಲು ಅನುಕೂವಾಗುತ್ತದೆ.

ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮಗಳಿಂದ ಉತ್ತಮರಿಗೆ ಸಾಂತ್ವನ ಸಿಕ್ಕಂತೆ ದುರ್ವ್ಯಸನಿಗಳು-ದುರ್ಜನರು ಉತ್ತಮರಾಗಲು ಒಳ್ಳೆಯ ಅವಕಾಶ ದೊರೆಯುತ್ತದೆ. ಬಡವ-ಬಲ್ಲಿದರೆಂಬ ಅಂತಸ್ತು ಭೇದ ನಿಧಾನವಾಗಿ ಕರಗುತ್ತ ಸಹೋದರತ್ವಭಾವ ಬೆಳೆ

ಯುತ್ತದೆ. ಒಬ್ಬರು ಒಂದು ಅನುಭವ ಹೇಳಿದರು, "ನಾನು ನನ್ನ ತಮ್ಮ ಜಗಳವಾಡಿ ಸಂಬಂಧ ಕಡಿದು ಹೋಗಿತ್ತು. ಒಬ್ಬರೊಬ್ಬರ ಮನೆ ಹತ್ತಿರ ಸಹ ಹಾಯುತ್ತಲಿರಲಿಲ್ಲ. ಪ್ರಾರ್ಥನಾ ಕಾರ್ಯಕ್ರಮ ಆರಂಭವಾದ ಮೇಲೆ ಆತನೂ ಬಂದ. ನೋಡುವುದೇ ತಡ ಮಾತನಾಡಬೇಕಾಯಿತು. ವಿರಸ ಕರಗಿತು". ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ಭಾವ ಬಲಿತು, ಅನುಭವ ಮಂಟಪದಲ್ಲಿ ಜಾತಿ, ವೃತ್ತಿ, ಅಂತಸ್ತು, ಲಿಂಗ ಭೇದಗಳಿಲ್ಲದೆ ಎಲ್ಲರೂ ಸಮಾವೇಶವಾಗುತ್ತಿದ್ದಂತೆ ಇಂದೂ ಆಗಬೇಕಾದರೆ ಸಾಮೂಹಿಕ ಪ್ರಾರ್ಥನೆಯೊಂದೇ ಸಾಧನ.

ಇನ್ನು ಕೆಲವರು ಅತಿ ಬುದ್ಧಿವಂತರು ಮತ್ತು ಅತಿ ವಿಚಾರವಾದಿಗಳು ಉಂಟು. ಇವರು "ಶರಣ ಧರ್ಮದಲ್ಲಿ ಪ್ರಾರ್ಥನೆ ಅನ್ನುವುದು ಇಲ್ಲವೇ ಇಲ್ಲ. ಕೇವಲ ಅನುಭವ ಗೋಷ್ಠಿ ಮಾತ್ರ ಉಂಟು" ಅಂತ ವಾದಿಸುವುದೂ ಇದೆ. "ಪ್ರಾರ್ಥನೆ ಎಂದರೆ ಬೇಡುವುದು ; ಬೇಡುವಿಕೆ ಶರಣ ಧರ್ಮದಲ್ಲಿ ಇಲ್ಲ" ಎಂದು ಈ ಭೂಪರವಾದ. ಪ್ರಾರ್ಥನೆಗೆ ಸೈದ್ಧಾಂತಿಕ ಅವಕಾಶ ಇಲ್ಲದೇ ಇರುವುದು ಕೇವಲ ನಿರೀಶ್ವರವಾದಿ ಧರ್ಮಗಳಲ್ಲಿ, ನಾಸ್ತಿಕವಾದದಲ್ಲಿ ಮತ್ತು ನಾನೇ ಬ್ರಹ್ಮ ಎಂಬ ಅದ್ವೈತ ವಾದದಲ್ಲಿ. ಜಗತ್ತಿನ ಸೇಶ್ವರವಾದಿ ಧರ್ಮಗಳೆಲ್ಲವೂ ಕರ್ತನನ್ನು ಗುರುತಿಸಿವೆ. ಮತ್ತು ದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತಗಳು ಕರ್ತನನ್ನು ಮನ್ನಿಸುತ್ತವೆ-ಅಂದಾಗ ಜೀವನು ದೇವನನ್ನು ಬೇಡುವುದು ಸ್ವಾಭಾವಿಕ. ಆದರಿಷ್ಟೇ ಶರಣ ಧರ್ಮದ ಪ್ರಕಾರ ದೇವನನ್ನು ಬಿಟ್ಟು ಯಾರಾರನ್ನೋ ಬೇಡಬಾರದು ; ದೇವನ ಅನುಗ್ರಹ, ಜ್ಞಾನ, ಆನಂದ, ಮುಕ್ತಿಗಳನ್ನು ಬಿಟ್ಟು ಮತ್ತೇನನ್ನು ಬೇಡಬಾರದು. ಅದನ್ನೇ ಬಸವಣ್ಣನವರು ಹೀಗೆ ಹೇಳುತ್ತಾರೆ :

> ಹಾಡಿದೊಡೆ ಎನ್ನೊಡೆಯನ ಹಾಡುವೆ
> ಬೇಡಿದೊಡೆ ಎನ್ನೊಡೆಯನ ಬೇಡುವೆ.
> ಒಡೆಯಂಗೊಡಲ ತೋರಿ ಎನ್ನ ಬಡತನವ ಬಿನ್ನೈಸುವೆ.

ಶರಣ ಧರ್ಮವು ಭಾವುಕತೆ-ವೈಚಾರಿಕತೆಗಳನ್ನು ಸಂಗಮಗೊಳಿಸುವ, ಬುದ್ಧಿ-ಭಾವುಗಳೆರಡನ್ನೂ ಸಂಸ್ಕರಿಸುವ ಉದ್ದೇಶ ಉಳ್ಳದು. ಆದ್ದರಿಂದ ಬರೀ ಭಾವುಕ ಭಜನೆಯೂ ಶರಣರಿಗೆ ಸೊಗಸದು ; ಕೇವಲ ತಾರ್ಕಿಕ ಚಿಂತನೆಯೂ ಅವರಿಗೆ ಸಮ್ಮತವಿಲ್ಲ. ಬುದ್ಧಿ-ಭಾವಗಳೆರಡನ್ನೂ ಸಂಸ್ಕರಿಸುವಂತೆ ವಿಚಾರಗೋಷ್ಠಿ-ಭಕ್ತಿ ನಿರ್ಭರತೆಯಿಂದ ಮಾಡುವ ಪ್ರಾರ್ಥನೆ ಎರಡನ್ನೂ ಸಂಗಮಿಸುವುದೇ ಶರಣರಿಗೆ ಸಮ್ಮತ.

ಕೆಲವೊಂದು ಊರುಗಳಲ್ಲಿ ಮಠಮಾನ್ಯಗಳಿರುತ್ತವೆ. ಅವರ ಮಠಕ್ಕೆ ಸಂಬಂಧಿಸಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅದ್ದೂರಿಯಾಗಿಯೋ, ಸರಳವಾಗಿಯೋ ತಮ್ಮ ತಮ್ಮ ಶಕ್ತ್ಯಾನುಸಾರ ಮಾಡುತ್ತಾರೆ. ಇವುಗಳಿಂದಲೂ ಹೃದಯ ಸಂಸ್ಕಾರವಾಗದು, ಏಕೆಂದರೆ ಅಲ್ಲಿಯೂ ಸಾಧಕ ಜೀವಿಗಳ ಮನಸ್ಸನ್ನು ತಣಿಸುವ ಯಾವುದೇ ಭಾಕ್ತಿಕ ಸಂಸ್ಕಾರವಿರದೆ ಬರೀ ಭಾಷಣಗಳ ಸರಮಾಲೆಯೇ ಇರುತ್ತದೆ. ಪುಣ್ಯ ತಿಥಿ,

ಜಯಂತಿಗಳ ಆಚರಣೆ, ಸಮ್ಮೇಳನಗಳೂ ಅಷ್ಟೆ. ಒಂದು ಒಳ್ಳೆಯ ಮಳೆ ಸುರಿದು ನಂತರ ಮಳೆ ಹೋದಂತೆ. ಆಧ್ಯಾತ್ಮಿಕ ಸಂಸ್ಕಾರದ ಬೀಜಗಳು ಬಿತ್ತಲ್ಪಟ್ಟ ನಂತರ ಅವುಗಳ ನಿರಂತರ ಪೋಷಣೆ ಪ್ರತಿದಿನ ಅವರವರ ಮನೆಯಲ್ಲಿ ಮಾಡುವ ಪೂಜೆ-ಸಾಹಿತ್ಯ ಪಾರಾಯಣ, ಅಧ್ಯಯನಗಳಿಂದಾದರೆ ಸಾಮೂಹಿಕ ಪ್ರಾರ್ಥನೆ, ಚಿಂತನ ಗೋಷ್ಠಿಗಳಿಂದ ಸಾಮಾಜಿಕ ಸಂಘಟನೆ ಆಗುತ್ತದೆ. ಸಮಾನ ವಿಚಾರಧಾರೆಯವರು ಒಂದು ಜಾಗದಲ್ಲಿ ಬಂದು ಪರಸ್ಪರ ವಿಚಾರವಿನಿಮಯ ಮಾಡುತ್ತ ಹೋದಂತೆ ಭಕ್ತಿ ಸಂಬಂಧದ ಬಳ್ಳಿ ಹಬ್ಬುತ್ತದೆ; ಧರ್ಮದ ಬಗ್ಗೆ ಸರಿಯಾದ ತಿಳುವಳಿಕೆ ಮೂಡುತ್ತದೆ.

ಆದ್ದರಿಂದ ಮಠಾಧಿಕಾರಿಗಳು ಇದು ತಮ್ಮ ಪ್ರಮುಖ ಕರ್ತವ್ಯವೆಂದು ಪ್ರತಿ ವಾರಕ್ಕೊಮ್ಮೆಯಾದರೂ ಪ್ರಾರ್ಥನಾ ಕಾರ್ಯಕ್ರಮ ಏರ್ಪಡಿಸಿ ಜನರನ್ನು ಭಾಕ್ತಿಕ-ಬೌದ್ಧಿಕವಾಗಿ ಸಂಸ್ಕಾರಿಸಬೇಕು. ಮಠಾಧೀಶರಲ್ಲಿ ಆಸಕ್ತಿ ಇಲ್ಲದಿದ್ದರಷ್ಟೇ ಜನರೇ ತಾವೇ ಈ ಸಾಮೂಹಿಕ ಪ್ರಾರ್ಥನಾ ಸಭೆಗಳನ್ನು ಸಂಘಟಿಸಬೇಕು. ಮಕ್ಕಳ ಆವಶ್ಯಕತೆ, ರೋಗ-ರುಜಿನ ಗಮನಿಸಿ ತಾಯಿ ಮಕ್ಕಳಿಗೆ ಊಟೋಪಚಾರದ ವ್ಯವಸ್ಥೆ ಮಾಡಬೇಕಾದಂತೆ, ಸಮಾಜದ ಆವಶ್ಯಕತೆಯನ್ನರಿತು ಮಠಾಧಿಕಾರಿಗಳು ಜನರಿಗೆ ಬೇಕಾದುದನ್ನು ಕೊಡಬೇಕು. ಅವರು ಕೊಡಲು ಮುಂದಾಗದಾಗ ಜನರೇ ತಮ್ಮ ಆವಶ್ಯಕತೆ ಪೂರೈಸಿಕೊಳ್ಳಲು ಅಂತಹ ಸಮಾವೇಶಗಳನ್ನು ಸಂಘಟಿಸಬೇಕು.

ಇದಕ್ಕೆ ನೆರವಾಗಲೆಂದು ನಾವು ಸಾಮೂಹಿಕ ಪ್ರಾರ್ಥನಾ ಪುಸ್ತಕ ಮತ್ತು ಪ್ರಾರ್ಥನಾ ಕೆಸೆಟ್ಟು ಸಿದ್ಧಪಡಿಸಿದ್ದೇವೆ ಇವುಗಳ ಸಹಾಯದಿಂದ ಪ್ರಾರ್ಥನಾ ಕಾರ್ಯಕ್ರಮಗಳನ್ನು ಅಲ್ಲಲ್ಲೇ ಮುಂದಾಳುಗಳು ನಡೆಸಬಹುದು ಜಿಲ್ಲೆ, ತಾಲ್ಲೋಕು, ಗ್ರಾಮಗಳ ಮಟ್ಟದಲ್ಲಿ ಮಾಡಬೇಕೆನ್ನುವವರಿಗೆ ನಾವು ಮಾರ್ಗದರ್ಶನ ಮಾಡಬಹುದು. ಆದ್ದರಿಂದ ಈ ದಿಶೆಯಲ್ಲಿ ಆಲೋಚಿಸುವುದೇ ಅಲ್ಲದೆ ಜನರು ಕಾರ್ಯಪ್ರವೃತ್ತರಾಗಬೇಕೆಂದು ಸೂಚಿಸುತ್ತೇವೆ.

—ಜಗದ್ಗುರು ಮಾತೆ ಮಹಾದೇವಿ.

ಚಿತ್ರದುರ್ಗ, ಬೆಂಗಳೂರು ನಗರಗಳಲ್ಲಿ ಪ್ರಾರ್ಥನಾ ಸಭೆಗಳು

ಚಿತ್ರದುರ್ಗದ ಶ್ರೀನೀಲಕಂಠೇಶ್ವರದೇವಾಲಯದಲ್ಲಿ ಪ್ರತಿಭಾನುವಾರ ಬೆಳಿಗ್ಗೆ 10ರಿಂದ 11-30ರವರೆಗೆ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ. ಸೋಮವಾರ ದೊಡ್ಡಪೇಟೆ ಬಸವಣ್ಣ ದೇವರ ಗುಡಿಯಲ್ಲಿ ಸಂಜೆ 7 ರಿಂದ 8-30ರವರೆಗೆ ನಡೆಯುತ್ತದೆ.

ಬೆಂಗಳೂರಿನಲ್ಲಿ ಪ್ರತಿ ಸೋಮವಾರ ಸಂಜೆ ಒಂದೊಂದು ಮನೆಯನ್ನು ಸಂದರ್ಶಿಸಿ ಪೂಜೆ-ಪ್ರಾರ್ಥನೆಗಳನ್ನು ಮಾಡಿಸಲಾಗುತ್ತಿದೆ. ಆದ್ದರಿಂದ ತಮ್ಮ ತಮ್ಮ ಮನೆಗಳಲ್ಲಿ ಪೂಜೆ-ಪ್ರಾರ್ಥನೆ ಏರ್ಪಡಿಸಬೇಕೆನ್ನುವವರು ಪತ್ರಬರೆದಾಗಲಿ, ದೂರವಾಣಿ ಮೂಲಕವಾಗಲಿ ಇವರನ್ನು ಸಂಪರ್ಕಿಸಬಹುದು. ಸೋದರಿ ಸುರೇಖಾ (352335), ಶರಣೆ.ದೇವಿಕಾ ಶರಣಪ್ಪ (355623) ಪಾರ್ವತಮ್ಮ ಡಾ॥ ಶಿರೋಳ (355285) ಶರಣೆ. ಶೋಭಾ ಓಂಕಾರಸ್ವಾಮಿ (359928).

ಐವತ್ತಾರು ವರುಷ ದಾಟಿದ ಪ್ರವಚನ ಪಿತಾಮಹ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮೀಜಿ

ಅದಮ್ಯ ಉತ್ಸಾಹದ ಅವಿಶ್ರಾಂತ ಚೇತನವಾದ ಪೂಜ್ಯ ಗುರೂಜಿಯವರು ಇದೀಗ ಗಣೇಶ ಚೌತಿಯಂದು 56 ವರುಷಗಳನ್ನು ದಾಟಿ 57 ಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ತಮ್ಮ ಅಮೋಘ ಧೀಮಂತ ವಾಣಿಯಿಂದ ಲಕ್ಷ ಲಕ್ಷಗಟ್ಟಳೆ ಜನರನ್ನು ಎಚ್ಚರಿಸಿದ್ದಾರೆ, ಎಚ್ಚರಿಸುತ್ತಿದ್ದಾರೆ. ದೀಪವನ್ನು ಹಚ್ಚುವುದು ಒಂದು ಕೆಲಸ, ಊದಿನ ಕಡ್ಡಿಯನ್ನು ಹಚ್ಚುವುದು ಇನ್ನೊಂದು ಕೆಲಸ – ಪೂಜ್ಯ ಗುರುಗಳು ಎರಡೂ ಕಾಯಕಗಳನ್ನು ನಿರ್ವಹಿಸಿದ್ದಾರೆ. ಧರ್ಮದ ಹಸಿವೆಯಿಂದ ಹಾತೊರೆಯುವ ಮುಮುಕ್ಷುಗಳಿಗೆ, ಸದ್ಭಕ್ತರಿಗೆ ಜ್ಞಾನದ ಕಿಡಿಯನ್ನು ಹಚ್ಚಿ ಅವರು ಸುಗಂಧ ಬೀರುವ ಊದಿನ ಕಡ್ಡಿಗಳಂತೆ ತಮ್ಮ ಬಾಳನ್ನು ಆನಂದ ಮಯವಾಗಿ ಮಾಡಿಕೊಳ್ಳುವಂತೆ ಕಾರ್ಯಮಾಡಿದ್ದಾರೆ. ಅದೇ ರೀತಿ ಧರ್ಮಪ್ರಸಾರಕರೆಂಬ ದೀಪಗಳನ್ನು ಹಚ್ಚಿ, ಆ ದೀಪಗಳು ತಮ್ಮ ಉಜ್ವಲ ಪ್ರಭೆಯಿಂದ ಇನ್ನಿತರ ಜನರನ್ನು ಪರಿವರ್ತಿಸುವಂತೆ ಮಾಡಿದ್ದಾರೆ.

"ಸೂರ್ಯನುದಯ ತಾವರೆಗೆ ಜೀವಾಳ, ಚಂದ್ರನುದಯ ನೈದಿಲೆಗೆ ಜೀವಾಳ, ಕೂರ್ಪರ ಠಾವಿನಲ್ಲಿ ಕೂಟ ಜೀವಾಳ, ಒಲಿದ ಠಾವಿನಲ್ಲಿ ನೋಟ ಜೀವಾಳ ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ" ಎಂದಂತೆ, ಸದ್ಗುರು ಲಿಂಗಾನಂದ ಸ್ವಾಮಿಗಳ ಬರವು ಬಸವ ತತ್ತ್ವಕ್ಕೆ ಜೀವಾಳವಾಗಿದೆ. ನಾಡಿನುದ್ದಗಲಕ್ಕೂ ಸಂಚರಿಸಿ ಬಸವ ತತ್ತ್ವದ ಪ್ರಭೆಯನ್ನು ಎಲ್ಲರ ಮನಸ್ಸಿಗೆ ಮುಟ್ಟಿಸುತ್ತ ಬಂದಿದ್ದಾರೆ.

ಅತ್ಯುತ್ತಮ ಸಾಧಕರು : ಪೂಜ್ಯ ಗುರೂಜಿಯವರ ಪ್ರಾರಂಭಿಕ ಸಾಧನಾ ಜೀವನ ಅತ್ಯಂತ ಕಠಿಣ ತಮ. ಮತ್ತು ಸಾಕಷ್ಟು ಕಷ್ಟದ ಮುಳ್ಳು ಕಲ್ಲುಗಳಿಂದ ಕೂಡಿದುದು. ಒಂದು ವಿಶಿಷ್ಟ ಜಾತಿಯಲ್ಲಿ ಹುಟ್ಟಿದವರಿಗೆ ಅನೇಕ ಆಶ್ರಮ, ಗುರುಕುಲ, ಮಠ ಮಂದಿರಗಳು ಆಶ್ರಯ ನೀಡುವುದು; ಸ್ವಭಾವತಃ ವಟುಗಳಲ್ಲಿ ಆಧ್ಯಾತ್ಮಿಕ ಆಸಕ್ತಿ ಇಲ್ಲದಿದ್ದರೂ ಅವರಿಗೆ ಕಷ್ಟಪಟ್ಟು ಆಧ್ಯಾತ್ಮಿಕ ಅಭೀಪ್ಸೆಯನ್ನು ತುಂಬುವುದು ಸಾಂಪ್ರದಾಯಿಕ ಲಿಂಗಾಯಿತರಲ್ಲಿ ಆಚರಣೆಯಲ್ಲಿದ್ದರೆ, ಲಿಂಗಾಯತೇತರ ಸಂಘ-ಸಂಸ್ಥೆ ಮಠ ಮಾನ್ಯಗಳು ಹಲವಾರು ಸಂಪ್ರದಾಯಗಳ ಹಿಡಿತದಲ್ಲೇ ಸಾಗಿ ಬರುವ ಪ್ರವೃತ್ತಿಯನ್ನು ಹಿಂದೂ ಸಮಾಜದಲ್ಲಿ ಕಾಣಬಹುದು. ಇನ್ನು ಕೆಲವು ಗುರುಗಳು

ಜ್ಞಾನಿಗಳು, ಮಹಾನುಭಾವರು ಸಾತ್ವಿಕರು ಆಗಿದ್ದರೂ ಅವರ ಸೈದ್ಧಾಂತಿಕ ನಂಬಿಕೆಗಳು, ವಿಚಾರಗಳು ಶಿಷ್ಯತ್ವ ಸ್ವೀಕರಿಸುವವರಿಗೆ ಒಪ್ಪಿತವಾಗಬೇಕಲ್ಲವೆ ? ಕೇವಲ ಒಂದು ಆಶ್ರಯಕ್ಕಾಗಿ, ಅನ್ನಪಾನಾದಿಗಳಿಗಾಗಿ ಸೈದ್ಧಾಂತಿಕ ನಂಬಿಕೆಗಳಿಗೆ ತಿಲಾಂಜಲಿ ಕೊಡುವ ಪ್ರವೃತ್ತಿಯೂ ಪೂಜ್ಯ ಗುರೂಜಿಯವರದಲ್ಲ, ಕೇವಲ ಆಧ್ಯಾತ್ಮವಾದ ವೈಯಕ್ತಿಕ ಮುಕ್ತಿ, ಶ್ರೀಮಂತ ಶಾಹಿ ಧಾರ್ಮಿಕ ಪ್ರವೃತ್ತಿಗಳಿಗಿಂತಲೂ ಸಮತಾವಾದ, ಸಮಾಜ ಪರಿವರ್ತನೆ ಇವುಗಳಲ್ಲೇ ಗುರೂಜಿಯವರಿಗೆ ಆಸಕ್ತಿ ಹೆಚ್ಚು. ಹೀಗಾಗಿ ಏಕಾಂಗಿಯಾಗಿ ತಮ್ಮನ್ನು ತಾವು ರೂಪಿಸಿಕೊಳ್ಳುವ ಛಲ, ನಿಷ್ಠೆ. ತಮ್ಮ ಧ್ಯೇಯದ ಬಗ್ಗೆ ಅಚಲ ಶ್ರದ್ಧೆ. ಅವರ ಆ ಶ್ರದ್ಧೆ-ನಿಷ್ಠೆಗಳೇ ಬಂದ ಎಡರು–ತೊಡರ ಜಯಿಸಿ ಮುಂದುವರಿಯಂತೆ ಪ್ರೇರೇಪಿಸಿದವು.

ಸೇವಾಭಾವ : ಗೃಹಸ್ಥನು ತನ್ನ ತಾಯಿತಂದೆಯರ ಸೇವೆ ಮಾಡಿದರೆ ಸನ್ಯಾಸಿ ಗುರುವಿನ ಸೇವೆ ಮಾಡಬೇಕು. ಗೃಹಸ್ಥನು ತನ್ನ ಮಕ್ಕಳು ಮರಿಯನ್ನು ವಾತ್ಸಲ್ಯ ಭಾವದಿಂದ ಕಂಡರೆ ಸನ್ಯಾಸಿ ತನ್ನ ಶಿಷ್ಯರನ್ನು ವಾತ್ಸಲ್ಯಭಾವದಿಂದ ಕಾಣಬೇಕು. ಗೃಹಸ್ಥ ತನಗಾಗಿ ತನ್ನ ಹೆಂಡತಿ ಮಕ್ಕಳಿಗಾಗಿ ಹಗಲಿರುಳು ದುಡಿದರೆ ಸನ್ಯಾಸಿ ತನ್ನ ಧರ್ಮಗುರುವಿಗಾಗಿ, ಸಮಾಜಕ್ಕಾಗಿ ದುಡಿಯಬೇಕು. ಇದನ್ನು ನಂಬಿ ಎಡಬಿಡದೆ ಪಾಲಿಸಿಕೊಂಡು ಬಂದವರು ಪೂಜ್ಯ ಸದ್ಗುರುಗಳು. ತಮಗೆ ಇಷ್ಟಲಿಂಗ ದೀಕ್ಷಾನುಗ್ರಹ ನೀಡಿದ ಬಿಜಾಪುರದ ಪೂಜ್ಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳೂ ತಮ್ಮ ಶಿಷ್ಯ ಬಳಗವನ್ನು, ಭಕ್ತವೃಂದವನ್ನು ಪ್ರೀತಿ–ವಾತ್ಸಲ್ಯದಿಂದ ಕಾಣುವುದರಲ್ಲಿ ಬಲು ಮುಂದು. ಆಗಾಗ ಅವರ ದರ್ಶನಕ್ಕೆ ಹೋದಾಗ ಲಿಂಗಾನಂದ ಗುರುಗಳಿಗೂ ತಮ್ಮ ಗುರುಗಳ ಮೈಗೆ ಎಣ್ಣೆ ತಿಕ್ಕುವುದು, ಸ್ನಾನ ಮಾಡಿಸುವುದೆಂದರೆ ಬಲು ಪ್ರೀತಿ. ತಮಗೆ ಅಂಥ ಸೇವಾವಕಾಶ ಬೇಕು ಎಂದು ಎಷ್ಟೋ ದಿವಸಗಳ ಕಾಲ ಹಂಬಲಿಸುತ್ತಿದ್ದರು. ಸದಾ ಸಂಚಾರಿ ಧರ್ಮಪ್ರಸಾರಕರಾದ ಪೂಜ್ಯ ಲಿಂಗಾನಂದ ಗುರುಗಳಿಗೆ ಇದು ಲಭ್ಯವಾಗುವುದು ಹೇಗೆ ಸಾಧ್ಯ ? ಗುರುಸೇವೆಯಲ್ಲಿ ಅವರಿಗಿರುವ ಆಸಕ್ತಿ ಕಂಡು ನಮಗೇ ಆಶ್ಚರ್ಯವೆನಿಸುತ್ತಿದ್ದಿತು.

ಸ್ವಯಂಸೇವೆ : ವೈರಾಗ್ಯ ಜೀವನ ಸ್ವೀಕರಿಸಿದ ಬಹಳ ಕಾಲದವರೆಗೂ ಪೂಜ್ಯರು ತಮ್ಮ ಬಟ್ಟೆಯನ್ನು ತಾವೇ ತೊಳೆದುಕೊಳ್ಳುವ, ಮಡಿ ದೃಷ್ಟಿಯಿಂದಲ್ಲದೆ ಸ್ವಾವಲಂಬನೆಯ ದೃಷ್ಟಿಯಿಂದ ಹಸಿಕಾಳು, ಹಣ್ಣು ತರಕಾರಿ, ಹಾಲು ಇವುಗಳ ಮೇಲೆಯೇ ಜೀವಿಸುವ ಪರಿಪಾಠ ಬೆಳೆಸಿಕೊಂಡಿದ್ದರು. ಕಾವಿ ಹಾಕಿಕೊಂಡ ತಕ್ಷಣ ಇನ್ನಿತರರು ತಮ್ಮ ಸೇವೆ ಮಾಡಬೇಕು ಎಂಬ ಅಪರಿಪಕ್ವ ಮತಿಯ ಜನರೇ ಬಹಳವಿರುವಾಗ, ಸ್ವಾವಲಂಬನೆ ಸನ್ಯಾಸಿಗೆ ಶೋಭೆ ತರುವಂತಹುದು ಎಂಬ ವಾದ ಪೂಜ್ಯರದು.

ಸತ್ಯವಾದಿ–ನಿಷ್ಠುರವಾದಿ : "ಸತ್ಯವನ್ನು ಹೇಳು, ಪ್ರೀಯವಾಗಿ ಹೇಳು. ಅಪ್ರೀಯವಾದ ಸತ್ಯವನ್ನು ಹೇಳಬೇಡ ..." ಎಂಬ ಪ್ರಸಿದ್ಧ ಹಿತೋಕ್ತಿ ಎಲ್ಲರಿಗೂ

ಗೊತ್ತಿದ್ದುದೇ. ಆದರೆ ಪೂಜ್ಯರಿಗೆ ಈ ಮಾತು ಹೊರತಾದದು. "ಸತ್ಯವನ್ನು ತಿಳಿದ ಬಳಿಕ ಅದು ಸತ್ಯವೆಂದು ಮನವರಿಕೆಯಾದ ಬಳಿಕ, ಅದು ಪ್ರಿಯವಾದುದೇ ಆಗಲಿ ಅಪ್ರಿಯವಾದುದೇ ಆಗಿರಲಿ ಹೇಳಬೇಕು, ಹೇಳುವುದು ಸನ್ಯಾಸಿಯ ಕರ್ತವ್ಯ." ಎಂಬುದೇ ಗುರುಗಳ ಧೋರಣೆ. ಎಲ್ಲೆಡೆಯಲ್ಲಿ, ಎಲ್ಲರನ್ನು ಓಲೈಸುವ ಪ್ರವೃತ್ತಿ ಗುರುಗಳಲ್ಲಿದ್ದುದ್ದಾದರೆ ಇಷ್ಟು ಹೊತ್ತಿಗೆ ಅದೆಷ್ಟು "ಸರ್ವವ್ಯಾಪಿಯಾಗಿ ಅವರು ಇರುತ್ತಿದ್ದರೊ ! ಆದರೆ ಅಂಥ ತೋರಿಕೆಯ ಸರ್ವವ್ಯಾಪಕತ್ವ, ಜನಪ್ರೀಯತೆ ಅವರಿಗೆ ಹಿಡಿಸದುದು. ಪ್ರೀಯವಾಗಿ ಸತ್ಯವನ್ನು ಹೇಳುವ ಅವಕಾಶವಿದ್ದರೆ ನಮಗೆ ಬಿಟ್ಟು ಕೊಡುತ್ತಾರೆ. ಆದರೆ ಅಪ್ರಿಯವಾದರೂ ಚಿಂತೆಯಿಲ್ಲ ಸತ್ಯವನ್ನು ಹೇಳಬೇಕಾದುದೇ ಆದರೆ ತಾವೇ ಆ ಹೊಣೆಗಾರಿಕೆ ವಹಿಸಿಕೊಳ್ಳುತ್ತಾರೆ. ಈ ಧೈರ್ಯ-ಧೀಮಂತಿಕೆ ಶ್ಲಾಘನೀಯವೆ.

ಅವರ ಈ ಪ್ರವೃತ್ತಿ ಪ್ರಾರಂಭಿಕ ದಿನಗಳಲ್ಲಿ ಅವರಿಗೆ ಸಾಕಷ್ಟು ತೊಂದರೆ ತಂದುಕೊಟ್ಟಿದ್ದರೂ ಇಂದು ಅದೇ ಅವರ ಕೀರ್ತಿಗೆ ಕಾರಣವಾಗುತ್ತಿದೆ ಎಂದರೆ ಅತಿಶಯೋಕ್ತಿಯಲ್ಲ. ವೈದ್ಯನು ಕಹಿಯಾದ ಔಷಧಿಯನ್ನು ಕೊಟ್ಟಾಗ ಅಪರಿಪಕ್ವ ಬುದ್ಧಿಯ ರೋಗಿಯು ಉಗುಳಲಾರದೆ ನುಂಗಲಾರದೆ ವೈದ್ಯನನ್ನು ದೂಷಿಸುತ್ತಾನೆ. ಸಂಕಟಪಟ್ಟು ನುಂಗಿ, ಕಾಯಿಲೆ ಗುಣವಾದಾಗ ವೈದ್ಯನ ಹಸ್ತಗುಣದ ಬಗ್ಗೆ ಮುಕ್ತ ಕಂಠದಿಂದ ಹೊಗಳುತ್ತಾನೆ. ಮೊದಮೊದಲು ಪೂಜ್ಯ ಲಿಂಗಾನಂದ ಸ್ವಾಮಿಗಳ ಮಾತಿನಲ್ಲಿರುವ ಕಟುಸತ್ಯವನ್ನು ಕಂಡು ದೂಷಿಸುತ್ತಿದ್ದವರೇ ಇಂದು ಅದರಿಂದಾದ ಉಪಕಾರವನ್ನು ಮುಕ್ತ ಕಂಠದಿಂದ ಹೊಗಳುತ್ತಲಿದ್ದಾರೆ.

ವಿನಯವಿರಬೇಕು-ಓಲೈಸುವಿಕೆಯಲ್ಲ : ಸುಭಾಷಿತ ಹಾರಾವಳಿಯಲ್ಲಿ ಒಂದು ಮಾತು ಹೀಗೆ ಬರುತ್ತದೆ : "ಫಲವನ್ನು ಬಯಸುವವರು ತೀರಾ ತಗ್ಗಬಾರದು ಸೆಟೆದು ನಿಲ್ಲಲೂ ಬಾರದು. ಕೊಡವು ಸ್ವಲ್ಪವೇ ಬಗ್ಗಿ ನೀರನ್ನು ಕುಡಿದು ಕುಡಿದು ಪೂರ್ಣವಾಗುತ್ತದೆ." ಪೂಜ್ಯ ಗುರುಗಳು ಎಲ್ಲರೊಡನೆ ಹೊಂದಿಕೊಂಡು ಸಮಷ್ಟಿಯ ಹಿತಕ್ಕಾಗಿ ದುಡಿಯುವುದು ತುಂಬಾ ಅವಶ್ಯಕ" ಎಂಬ ವಿಚಾರಧಾರೆಯವರು. ಆದರೆ ಸಮಯ ಸಾಧಕತನದಿಂದಲೋ ಅಥವಾ ಸ್ವತಂತ್ರ ವಿಚಾರಶಕ್ತಿಯನ್ನೇ ಕಳೆದುಕೊಂಡು ಇನ್ನೊಬ್ಬರನ್ನು ವಂಧಿಮಾಗಧರಂತೆ ಸ್ತುತಿಸುವುದನ್ನು ಅವರು ಇಷ್ಟಪಡರು. ವಿನಯವು ಎಲ್ಲರಿಗೆ ಅತ್ಯವಶ್ಯಕ ಎನ್ನುತ್ತಾರೆ. ಆದರೆ ಆ ವಿನಯವು ಓಲೈಸುವಿಕೆಯಾಗುವುದನ್ನು ಇಷ್ಟಪಡರು. ಹೀಗಾಗಿ ಮೇಲಿನ ಸುಭಾಷಿತದ ಉಕ್ತಿ ಪೂಜ್ಯರ ವಿಷಯದಲ್ಲಿ ತುಂಬ ಅರ್ಥಗರ್ಭಿತ ಎನ್ನಿಸುತ್ತದೆ.

ಸ್ವತಂತ್ರ ವಿಚಾರಿಗಳು : ಪೂಜ್ಯ ಗುರುಗಳಲ್ಲಿ ಚಿಂತನಶಕ್ತಿ ಬಹಳ ಅಮೋಘವಾಗಿದೆ. ಕೆಲವೊಮ್ಮೆ ಅವರು ಕೊಡುವ ಸ್ವತಂತ್ರ ಉದಾಹರಣೆ, ಹೋಲಿಕೆಗಳು ಕೇಳುಗರನ್ನು ಮಂತ್ರಮುಗ್ಧ ಮಾಡುತ್ತವೆ. ಆದರೆ ಇತ್ತೀಚೆಗೆ ಬರವಣಿಗೆ ಅಭ್ಯಾಸ

ವನ್ನು ಪೂಜ್ಯರು ಬಿಟ್ಟುಬಿಟ್ಟಿರುವುದರಿಂದಲೂ, ಅವರ ಬಳಿ ಇರುವ ಶಿಷ್ಯರಲ್ಲಿ ಸಂಗ್ರಹಿಸಿ ಬರೆದಿಡುವ ಪ್ರತಿಭೆ ಇಲ್ಲದಿರುವುದರಿಂದಲೂ, ಪೂಜ್ಯರು ಚಕ್ಕನೆ ಸ್ಫುರಿಸಿದುದನ್ನು ಆಗಲೇ ಹೇಳಿ ಮರೆತು ಬಿಡುವುದರಿಂದಲೂ ಬಹಳಷ್ಟು ಬರವಣಿಗೆಯಲ್ಲಿ ಉಳಿಯುತ್ತಿಲ್ಲ. ಯಾವುದೋ ಅಷ್ಟು ನೆನಪಿಟ್ಟುಕೊಂಡುದನ್ನು ನಮಗೆ ಭೇಟಿಯಾದಾಗ ಹೇಳಿದ್ದಷ್ಟನ್ನು ನಾನು ಬರೆದಿಡುವೆ.

ಪೂಜ್ಯರು ಬಾಗಿಲು ಕೋಟೆಯಲ್ಲಿ ಹೇಳಿದ ಒಂದು ಅದ್ಭುತ ವಿಚಾರ ಹೀಗಿದೆ : "ಅತ್ಯಂತ ಸುಂದರವೂ, ಉತ್ಕೃಷ್ಟವೂ ಆದ ರೇಷ್ಮೆ ಎಳೆಗಳನ್ನು ತೆಗೆದುಕೊಂಡು ಒಂದು ಹಗ್ಗವನ್ನು ಹೊಸೆಯುತ್ತಿದ್ದರು. (ಹುರಿಹಾಕುತ್ತಲಿದ್ದರು.) ಅದು ಸುಂದರ ರೇಷ್ಮೆ ಹಗ್ಗವಾಗಿ ತಯಾರಾಗುತ್ತಿತ್ತು. ಅವರ ಪಕ್ಕದ ಮನೆಯಲ್ಲಿ (ತಮಿಳುನಾಡು) ವೀರಶೈವ ಮತವೆಂಬ ಒಂದು ನೂಲಿನ ಹಗ್ಗವನ್ನು ಬೇರೆಯುವರು ಹೊಸೆಯುತ್ತಿದ್ದರು. ಗಾಳಿ ಬಿಟ್ಟಾಗ ಅದರ ನೂಲಿನ ಗುಂಜು ಬಂದು ಬಸವ ಧರ್ಮದ ರೇಷ್ಮೆ ಹಗ್ಗದಲ್ಲಿ ಅಲ್ಲಲ್ಲೇ ಅಲ್ಲಲ್ಲೇ ಸೇರಿಕೊಂಡು ಬಿಟ್ಟಿತು. ಕರ್ನಾಟಕದ, ಬಸವಣ್ಣನವರ ಕೊಡುಗೆಯಾದ ಲಿಂಗಾಯಿತ ಧರ್ಮವೆಂಬ ರೇಷ್ಮೆ ಹಗ್ಗ ಅಖಂಡವಾಗಿ ಸದೃಢವಾಗಿದ್ದರೂ ಅಲ್ಲಲ್ಲಿ ಸೇರಿಕೊಂಡ ನೂಲಿನ ಗುಂಜು ನೋಡಿ [ವೀರಶೈವಾಚರಣೆ] ಇದು ನೂಲಿನ ಹಗ್ಗ (ವೀರಶೈವ ಮತ) ಎಂದು ಕೆಲವರು ಗುಲ್ಲೆಬ್ಬಿಸುತ್ತಾರೆ. ಹಗ್ಗದೊಳಗಿರುವ ಅಖಂಡತೆಯ ಮೇಲೆ ಆದು ಯಾವುದು ಎಂದು ನಿರ್ಧರಿಸಬೇಕಾದ ಕಾಲವೀಗ ಬಂದಿದೆ. ಸಂಶೋಧಕರು ಪ್ರಾಂಜಲ ಮತ್ತು ಪ್ರಾಮಾಣಿಕ ಮನಸ್ಸಿನಿಂದ ಸತ್ಯವನ್ನು ಕಂಡು ಹಿಡಿಯಬೇಕಾಗಿದೆ."

ಈ ಉದಾಹರಣೆ ಕೇಳಿ ಎಲ್ಲರೂ ಆಶ್ಚರ್ಯ-ಆನಂದಗಳಲ್ಲಿ ಮುಳುಗಿದ್ದು ಮಾತ್ರವಲ್ಲ ಸಾಕಷ್ಟು ಚಿಂತನೆಗೆ ತೊಡಗಿದರು. ಹೀಗೆ ಎಲ್ಲರನ್ನೂ ವೈಚಾರಿಕ ಚಿಂತನೆಗೆ ತೊಡಗಿಸುವುದರಲ್ಲಿ ಪೂಜ್ಯ ಗುರುಗಳು ಬಲು ಮುಂದು. ಇಂತಹ ಪೂಜನೀಯರ ಮಾರ್ಗದರ್ಶನ. ಅನುಗ್ರಹ, ಆಶೀರ್ವಾದ, ಶ್ರೀವಾಣಿ ಸಾಕಷ್ಟು ಕಾಲ ಲೋಕಕ್ಕೆ ಬೇಕಾಗಿರುವ ಕಾರಣ ಪರಮಾತ್ಮನು, ವಿಶ್ವಗುರು ಬಸವಣ್ಣನವರು ಅವರಿಗೆ ಸದೃಢ ಆರೋಗ್ಯ, ಸುದೀರ್ಘ ಆಯುಷ್ಯವನ್ನು ಕರುಣಿಸಲೆಂದು ಪೂಜ್ಯರ 57ನೆಯ ವರ್ಧಂತಿಯ ಸನ್ನಿವೇಶದಲ್ಲಿ ಪ್ರಾರ್ಥಿಸೋಣ.

—ಮಾತಾಜಿ,

ಅಕ್ಕನನು ಅರ್ಚಿಸುವೆನು ಆರಾಧ್ಯ ದೇವತೆಯೆಂದು,
ಬಸವಣ್ಣನ ಭಜಿಸುವೆನು ಭವ ಬಂಧನವ ಹರಿಯಲೆಂದು,
ಪ್ರಭುದೇವರ ಸ್ಮರಿಸುವೆನು ಪಾರಮಾರ್ಥ ಪ್ರಸಾದಕ್ಕೆಂದು,
ಪರಶಿವನ ಪೂಜಿಸುವೆನು ನಿತ್ಯ ಪಾದೋದಕ ಪ್ರಸಾದಕ್ಕೆಂದು.

ವಚನ ನವನೀತ

ಐಶ್ವರ್ಯಾಂಧಕರ ಮತದ ವಿರೋಧಿ ಬಸವಣ್ಣ

—ಸದ್ಗುರು ಲಿಂಗಾನಂದ ಸ್ವಾಮಿಗಳು

ಕುಂಡಲಿಗನ ಕೀಟನಂತೆ ಮೈ ಮಣ್ಣಾಗದೆ ಇದ್ದೆಯಲ್ಲ ಬಸವಣ್ಣ !
ಜಲದೊಳಗಣ ತಾವರೆಯಂತೆ ಹೊದ್ದಿ ಹೊದ್ದದಂತೆ ಇದ್ದೆಯಲ್ಲ ಬಸವಣ್ಣ ?!
ಜಲದಿಂದಾದ ಮೌಕ್ತಿಕದಂತೆ ಜಲವು ತಾನಾಗದಂತಿದ್ದೆಯಲ್ಲ ಬಸವಣ್ಣ ?!
ಗೊಹೇಶ್ವರ ಲಿಂಗದಾಣತಿವಿಡಿದು ತನುಗುಣ ಮತ್ತರಾಗಿದ್ದ
ಐಶ್ವರ್ಯಾಂಧಕರ ಮತವನೇನ ಮಾಡ ಬಂದೆಯೈ ಸಂಗನ ಬಸವಣ್ಣ ?

—ಅಲ್ಲಮಪ್ರಭು 897

ಶರಣರು ಅದೆಂತಹ ಸಾಮಾಜಿಕ ಪ್ರಜ್ಞೆಯುಳ್ಳವರು, ಎಷ್ಟೊಂದು ದಿಕ್ಕಿನಿಂದ ಸತ್ಯವನ್ನು ಅರಿಯಲು, ತಾವರಿತುದನ್ನು ಅಭಿವ್ಯಕ್ತಗೊಳಿಸಲು ಸಮರ್ಥರಾಗಿ ಇದ್ದರು ಎಂದು ತಿಳಿದರೆ ಆಶ್ಚರ್ಯವೆನಿಸುತ್ತದೆ. ಕ್ರಾಂತಿ ಪುರುಷ, ಸಮತಾವಾದಿ ಬಸವಣ್ಣನವರ ವ್ಯಕ್ತಿತ್ವ ಒಂದು ವಿಶಿಷ್ಟ ತತ್ತ್ವದೊಳಗಿನ ಧರ್ಮವನ್ನು ಅರಿತುದಲ್ಲದೆ, ಬಸವಣ್ಣನವರು ಕೈಗೊಂಡ ಪರಿವರ್ತನಶೀಲ ಕ್ರಾಂತಿಗೆ ತಮ್ಮ ದನಿಯನ್ನು ಕೂಡಿಸಿದರು.

ಮಣ್ಣಿನೊಳಗೆ ಹೊರಳಾಡುತ್ತಲಿದ್ದು ಮಣ್ಣಾಗದಂತೆ ಇರಲು ಸಾಧ್ಯವೆ ? ಸಾಧ್ಯ; ಯಾರಿಗೆ ? ಕುಂಡಲಿಗನ ಕೀಟಕ್ಕೆ. ಅದು ಮಾತ್ರ ಮಣ್ಣನ್ನು ಮೆತ್ತಿಕೊಳ್ಳದೆ ಅದರಲ್ಲಿರಬಹುದು. ಕೆಸರಿನ ಗರ್ಭದಿಂದಲೇ ಹುಟ್ಟಿದ ತಾವರೆ ಹೊದ್ದಿಯೂ ಹೊದ್ದದೇ ಇರತ್ತದೆ. ನೀರಿನಿಂದ ಹುಟ್ಟಿದ ಮುತ್ತು ನೀರಿನಿಂದ ಬೇರೆಯಾಗಿ, ನೀರಿನಲ್ಲಿ ಕರಗದಂತೆ ಇರಬಲ್ಲದು. ಹಾಗೆ ಬಸವಣ್ಣನವರದ್ದು ವಿಲಕ್ಷಣ ಬದುಕು. ಸಂಸಾರದ ಮಧ್ಯೆ ಇದ್ದರೂ ಅದರಿಂದ ಕಲಂಕಿತರಾಗದೆ ಉಳಿದರು.; ಅಧಿಕಾರದ ಸುಳಿಯೊಳಗಿದ್ದು ಅದರಲ್ಲಿ ಮುಳುಗದೆ ಸೆಳವಿನಲ್ಲಿ ಕೊಚ್ಚಿ ಹೋಗದೆ ಈಜಿ ಪಾರಾದರಷ್ಟೆ ಅಲ್ಲ; ಇನ್ನಿತರರನ್ನು ಆ ಸೆಳವಿನಿಂದ ಮೇಲೆತ್ತಿದರು.

ಎಷ್ಟೆಲ್ಲಾ ಆದರ್ಶಗಳ ಮಾತನ್ನು ಆಡುವ, ತನ್ನ ಆದರ್ಶಗಳ ಬಗ್ಗೆ ಬಡಾಯಿ ಕೊಚ್ಚುವವನೂ ಉನ್ನತ ಅಧಿಕಾರಕ್ಕೆ ಬರುತ್ತಲೆ ಅವನ್ನೆಲ್ಲ ಮರೆಯುತ್ತಾನೆ.

ಕೆಲವೊಮ್ಮೆ ತಾನೇ ಮರೆಯದಿದ್ದರೂ ಆ ಆದರ್ಶಗಳನ್ನು ಗಾಳಿಗೆ ತೂರದ ಹೊರತು ಉಳಿಗಾಲವಿಲ್ಲವೆಂಬ ವಾತಾವರಣವನ್ನು ಸುತ್ತಲಿನವರು ಸೃಷ್ಟಿಸುತ್ತಾರೆ. ತನ್ನ ಧ್ಯೇಯಾದರ್ಶಗಳನ್ನು ಬದಿಗಿಟ್ಟು ಸುತ್ತಲಿನವರೊಡನೆ ಅನೈತಿಕ ರಾಜಿ ಮಾಡಿಕೊಳ್ಳದ ಹೊರತು ಧ್ಯೇಯವಾದಿಗೆ ಬದುಕೇ ದುರ್ಭರವಾಗುತ್ತದೆ. ಇಂಥ ವಾತಾವರಣವನ್ನು ಮೀರಿ, ಮೆಟ್ಟಿ ಆದರ್ಶವಾದಿಯಾಗಿ, ಧ್ಯೇಯವಾದಿಯಾಗಿ ಬಸವಣ್ಣನವರು ಇರಬಲ್ಲವರಾದರು. ಅಂತೆಯೇ 'ನಂಟರಿಷ್ಟರು ಬಂದರೆ ಎಡೆಯಿಲ್ಲ, ಅತ್ತ ಸನ್ನಿ' ಎಂದು ಭಕ್ತರು (ಪ್ರಜೆಗಳು) ಬಂದರೆ ಗುಡಿ ತೋರಣವ ಕಟ್ಟಿ ಸ್ವಾಗತಿಸಬಲ್ಲವರಾದರು. ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ ? ಎಂದು ಮೂಢ ಸಂಪ್ರದಾಯ ವಿರುದ್ಧ ಹೋರಾಟಕ್ಕಿಳಿದರು. ತಮ್ಮ ಅಸಾಮಾನ್ಯ ಆತ್ಮಬಲ, ವ್ಯಕ್ತಿತ್ವದಿಂದ ಮೂಲೆ ಸೇರಿದ್ದ ಸತ್ಯ, ಆಧ್ಯಾತ್ಮ ಮುಂತಾದ ಮೌಲ್ಯಗಳು ಪುನಃ ಪಟ್ಟಗಟ್ಟಲ್ಪಟ್ಟವು. ಇವುಗಳಿಗೆ ಪಟ್ಟಗಟ್ಟಲೆಂದೇ ಪ್ರಭುದೇವಾದಿ ಶರಣರು ಧಾವಿಸಿ ಬಂದರು.

ಬಸವಣ್ಣನವರು ಮಾಡಿದ ಹಲವಾರು ಸುಧಾರಣೆಗಳಲ್ಲಿ "ಐಶ್ವರ್ಯಾಂಧಕರ ಮತ" ಎಂಬ ಮದ್ದಾನೆಯನ್ನು ಪ್ರಜಾಪ್ರಭುತ್ವವಾದಿ, ಸರಳ ಧರ್ಮದಿಂದ ಮೆತ್ತಗೆ ಮಾಡಿದ್ದು. ಲೋಹಿಯಾವಾದಿ, ಜೆ. ಪಿ. ವಾದಿ, ಮಾರ್ಕ್ಸ್‌ವಾದಿ ಭೂಪರು, ಮೌಲ್ಯಾಧಾರಿತ ರಾಜಕಾರಣ ಮಾಡುವ ರಾಜಕಾರಣಿಗಳೂ ಇಂದಿಗೂ ಶ್ರೀಮಂತ ಶಾಹಿ ಧರ್ಮವನ್ನು ಒಲೈಸುತ್ತ, ಪೋಷಿಸುತ್ತ ಸಾಗುವಾಗ ಅಂದೇ ಆ ದೃಷ್ಟಿಕೋನದ ಧರ್ಮಾಚರಣೆಯೆಂಬ ಮದ್ದಾನೆಯನ್ನು ಇಷ್ಟಲಿಂಗವೆಂಬ ಅಂಕುಶದಿಂದ ಬಸವಣ್ಣನವರು ಮೆತ್ತಗೆ ಮಾಡಿಕೊಟ್ಟರು.

ಶ್ರೀಮಂತಶಾಹಿ ಧರ್ಮ ಜನರನ್ನು ರೂಪಿಸುವ ವಿಧಾನವೇ ಮೂಲಭೂತ ತಪ್ಪಿನಿಂದ ಕೂಡಿದೆ. "ತನುಗುಣಮತ್ತ" ರಾಗಿ ಮೆರೆಯುವ ಜನರು ವಿಲಾಸಿಗಳಾಗಿಯೂ ಪುಣ್ಯಸಂಪಾದನೆ ಮಾಡಬಲ್ಲರು; ಬಡಬಗ್ಗರ ಶೋಷಕರಾಗಿಯೂ ದೇವನ ಒಲುಮೆ ಗಳಿಸಬಲ್ಲರು. ದುಶ್ಚಟಗಳ ದಾಸರಾಗಿ, ಎಲ್ಲ ಕೆಟ್ಟ ಕೆಲಸಗಳನ್ನು ಮಾಡುತ್ತಲೂ ಪುಣ್ಯಜೀವಿಗಳೆಂಬ ಮೆಚ್ಚುಗೆ ಪಡೆಯಬಲ್ಲರು. ಇದು ಸುಲಭದ ಕೆಲಸ ತೀರ್ಥಯಾತ್ರೆ ಮಾಡಲು ಹಣ; ದೇವರ ದರ್ಶನ ಪಡೆಯಲು ಹಣ, ಕ್ಷೇತ್ರಗಳಲ್ಲಿ ಪೂಜೆ ಮಾಡಿಸಲು ಹಣ, ಜಡ ತೀರ್ಥದಲ್ಲಿ ಮುಳುಗುವ ತಾಳ್ಮೆ ಇಷ್ಟಿದ್ದರೆ ಸಾಕು. ಅವನು ಪುಣ್ಯ ಜೀವಿ. ಅವನು ಯಾವ ತನುಗುಣವನ್ನೂ ಕಳೆದುಕೊಳ್ಳಬೇಕಾದ್ದಿಲ್ಲ. ಇಂಥ "ಐಶ್ವರ್ಯಾಂಧಕರ" ನಂಬಿಕೆಗೆ ವಿದ್ಯುದಾಘಾತ ಕೊಟ್ಟ ಬಸವಣ್ಣ.

ತೊರೆಯ ಮೀವ ಅಣ್ಣಗಳಿರಾ, ತೊರೆಯ ಮೀವ ಸ್ವಾಮಿಗಳಿರಾ,
ತೊರೆಯಿಂಭೋ ಪರಧನವ, ತೊರೆಯಿಂಭೋ ಪರಸತಿಯ

ಎಂದು ಘಂಟಾ ಘೋಷವಾಗಿ ಸಾರಿದ. ಹಾಗಾದರೆ, ಯಥೇಚ್ಛವಾಗಿ ಹಣವಿದ್ದೂ ಪಾಪವನ್ನು ತೊಳೆದುಕೊಳ್ಳಲು ಬರದೆ ? ಇಲ್ಲ. "ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ

ಪರ್ವತಂಗಳಾದರೆಯೂ ಸಾಲದು." ಹಾಗಾದರೆ ಐಶ್ವರ್ಯಾಂಧಕ ಸಿರಿವಂತನಿಗೆ ಪಾಪ ನಿರ್ಮೂಲನೆ ಸಾಧ್ಯವಿಲ್ಲವೆ? ಅವನಿಗೆ ಭವಿಷ್ಯವೇ ಇಲ್ಲವೆ? ಇದೆ ಇದೆ. ಇಲ್ಲವೆಂದರೆ ಅದು ಅಮಾನುಷ ಧರ್ಮ. ಪಾಪ ನಿರ್ಮೂಲನೆ ಹಣದ ಬಲದಿಂದಲ್ಲ; ಅಂತರಂಗಿಕ ಪಶ್ಚಾತ್ತಾಪದಿಂದ, ಪಶ್ಚಾತ್ತಾಪದ ಕಣ್ಣೀರಿನಿಂದ ತೋಯ್ದಾಗ.

ವ್ಯಕ್ತಿ ಐಶ್ವರ್ಯವಂತನಾಗುವುದು ತಪ್ಪಲ್ಲ: ಆ ಐಶ್ವರ್ಯದ ಬಲದಿಂದ ಮದೋನ್ಮತ್ತನು, ಅಂಧಕನು ಆಗುವುದು ತಪ್ಪು. ಹಣದ ಆಧಾರದ ಮೇಲೆ ನಿರ್ಧಾರವಾಗುವ ಪುಣ್ಯವಂತಿಕೆ, ಶ್ರೇಷ್ಟತ್ವಗಳನ್ನು ನಿರಾಕರಿಸಿ, ಗುಣ, ಮೌಲ್ಯ, ಆದರ್ಶ, ಮಾನವೀಯತೆ ಮುಂತಾದ ಮೌಲ್ಯಗಳ ಮೇಲೆ ಶ್ರೇಷ್ಟತ್ವವನ್ನು ನಿರ್ಧರಿಸುವ ದೃಷ್ಟಿಕೋನವನ್ನು ಬಸವಣ್ಣನವರು ಬೆಳೆಸಿದರು. ಹೀಗಾಗಿ ವಿಕಟ ಅಟ್ಟಹಾಸದಿಂದ ಮೆರೆಯುತ್ತಿದ್ದ ಶ್ರೀಮಂತ ಶಾಹಿ ಧರ್ಮ ಮುದುಡಿ ಮೂಲೆ ಸೇರಿತು; ದಯೆ ಮಾನವೀಯತೆ ಸರಳತೆಗಳನ್ನೇ ಆಭರಣವಾಗಿ ಮಾಡಿಕೊಂಡ ಶ್ರೀ ಸಾಮಾನ್ಯನ ಧರ್ಮ ಪಟ್ಟವೇರಿತು.

"ಐಶ್ವರ್ಯಾಂಧಕರ ಮತವ ನೇನ ಮಾಡ ಬಂದೆಯ್ಯ ಬಸವಣ್ಣ !" ಎಂಬ ಪ್ರಭುದೇವರ ವಾಕ್ಯ ಬಹು ಶಕ್ತಿ ಶಾಲಿಯಾದ, ಅರ್ಥಗರ್ಭಿತವಾದ ಹೇಳಿಕೆ.

ಸಾಮೂಹಿಕ ಪ್ರಾರ್ಥನಾ ಸಭೆಗಳು

ಶಿವಮೊಗ್ಗ ನಗರದ ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯವು ಕೆಳಕಂಡ ಸ್ಥಳಗಳಲ್ಲಿ ಪ್ರಾರ್ಥನೆ ನಡೆಸುತ್ತಿದ. ಸಾಮೂಹಿಕ ಪ್ರಾರ್ಥನಾ ಕಾರ್ಯಕ್ರಮದಲ್ಲಿ ಪ್ರಾರ್ಥನೆಯ ಜೊತೆಗೆ, ವಚನ ಪಠಣ, ಚಿಂತನ–ಮಂಥನ, ಶರಣರ ಜಯಂತ್ಯುತ್ಸವ ಮುಂತಾಗಿ ನಡೆಯುತ್ತಿರುತ್ತವೆ. ಎಲ್ಲಾ ಸದ್ಭಕ್ತರು ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿಸುತ್ತೇವೆ.

ಪ್ರತಿಭಾನುವಾರ ಬೆಳಿಗ್ಗೆ 10-30 ರಿಂದ 12-30, ಶಿವಮೊಗ್ಗಾದ ಶ್ರೀ ಅಕ್ಕಮಹಾದೇವಿ ಮಂದಿರ, ಬಸವ ಸದನದ ಹಿಂಭಾಗ. ಪ್ರತಿ ಸೋಮವಾರ ಸಂಜೆ 6-30ರಿಂದ 8 ರ ವರೆಗೆ ಶ್ರೀ ಬಸವೇಶ್ವರ ದೇವಾಲಯ, ಬಸವನ ಗುಡಿ 1 ನೇ ಕ್ರಾಸು, ಶಿವಮೊಗ್ಗ

ಪ್ರತಿ ಸೋಮವಾರ ಸಂಜೆ 6-30 ರಿಂದ 8 ರ ವರೆಗೆ ಗಣಪತಿ ದೇವಾಲಯ, ಗುರುಪುರ (ಶಿವಮೊಗ್ಗ ಜಿಲ್ಲೆ), ಮತ್ತು ಅದೇ ಸಮಯದಲ್ಲಿ ಬಿ. ಆರ್. ಪ್ರಾಜೆಕ್ಟಿನ ಶ್ರೀ ಲಕ್ಷ್ಮಿನರಸಿಂಹ ದೇವಾಲಯದಲ್ಲಿ.

ಪ್ರತಿ ಗುರುವಾರ ಸಂಜೆ 6-30 ರಿಂದ 8 ರ ವರೆಗೆ ಶ್ರೀ ಸತ್ಯನಾರಾಯಣರಾವ್, ಹೆಚ್. ಸಿದ್ಧಯ್ಯ ರಸ್ತೆ, ಗಾಂಧಿ ಬಜಾರ. ಇಲ್ಲಿ, ಆಸಕ್ತ ಓದುಗರಿಗೆ ಉಚಿತವಾಗಿ ಪುಸ್ತಕಗಳನ್ನು ಒದಗಿಸಲಾಗುತ್ತದೆ.

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ತತ್ತ್ವ ತರಬೇತಿ ಶಿಬಿರ

ಪ್ರತಿವರ್ಷವೂ ಅಕ್ಟೋಬರ ತಿಂಗಳಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಆಶ್ರಯದಲ್ಲಿ ಧಾರ್ಮಿಕ ಶಿಬಿರವನ್ನು ನಡೆಸಲಾಗುವುದಷ್ಟೇ. 1987 ನೇ ಸಾಲಿನ ಮತ್ತು ಆರನೆಯ ಶಿಬಿರವನ್ನು ಕೂಡಲ ಸಂಗಮ ಸುಕ್ಷೇತ್ರದಲ್ಲಿ, ಬಸವ ಧರ್ಮ ಪೀಠದ ಆಶ್ರಯದಲ್ಲಿ ನಡೆಸಲು ಉದ್ದೇಶಿಸಲಾಗಿದೆ. ಬೆಂಗಳೂರಿನ ಬಸವ ಗಂಗೋತ್ರಿಯಲ್ಲಿ ಶಿಬಿರವನ್ನು ನಡೆಸುವ ಪರಿಪಾಠ ವಿದೆಯಾದರೂ ಶರಣರ ಸುಕ್ಷೇತ್ರಗಳಲ್ಲಿ ನಡೆಸಬೇಕೆಂಬ ಬಹು ಜನರ ಒತ್ತಾಸೆ ಗಮನಿಸಿ ಈ ಬಾರಿ ಕೂಡಲ ಸಂಗಮದಲ್ಲಿ ಏರ್ಪಡಿಸಲಾಗಿದೆ. ಗುರುವಾರ ದಿ. 1–10–1987 ರಿಂದ ಭಾನುವಾರ ದಿ. 11-10-1987ರ ವರೆಗೆ ನಡೆಯಲಿರುವ ಈ ಶಿಬಿರದಲ್ಲಿ ಭಾಗವಹಿಸುವವರಿಗೆ ಶಿಬಿರ ಶುಲ್ಕ ವಿವರ ಹೀಗಿದೆ.

೧. 11 ದಿವಸಗಳ ಕಾಲ ನಡೆಯುವ ಶಿಬಿರದ ಪ್ರಸಾದದ ವ್ಯವಸ್ಥೆಗಾಗಿ ಒಬ್ಬೊಬ್ಬರಿಗೆ 100-00 (ನೂರು) ರೂಪಾಯಿ.

೨. ಶಾಲೆ–ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿ–ವಿದ್ಯಾರ್ಥಿನಿಯರು ತಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಂಗ ಅಧ್ಯಯನ ಮಾಡುತ್ತಿರುವ ಬಗ್ಗೆ ಒಂದು ಪತ್ರ ಪಡೆದು, ತಮ್ಮ ಅರ್ಜಿಯ ಜೊತೆಗೆ ಲಗತ್ತಿಸಿದರೆ ಅವರಿಗೆ ರಿಯಾಯಿತಿ ದರದಲ್ಲಿ ಶಿಬಿರ ಶುಲ್ಕ 50-00 (ಐವತ್ತು) ರೂಪಾಯಿ ಪಡೆದು ಅವಕಾಶ ನೀಡಲಾಗುವುದು.

೩. ಆರ್ಥಿಕವಾಗಿ ದುರ್ಬಲರಾದವರು, ಸಾಧಕ ಪ್ರವೃತ್ತಿಯವರು, ವಟುಗಳು, ಮುಂತಾದವರಿಗೆ ಶಿಬಿರ ಶುಲ್ಕ ಕೊಡಲು ಸಾಮರ್ಥ್ಯವಿಲ್ಲದಿದ್ದರೆ ಮೊದಲೇ ಪತ್ರ ಬರೆದು ಪರವಾನಗಿ ಪಡೆದುಕೊಳ್ಳಬಹುದು.

ದಿ. 10–10–1987 ಮತ್ತು 11-10-1987 ರಂದು "ಭಕ್ತಿ ಪಕ್ಷ" ಸಮ್ಮೇಳನ ನಡೆಯಲಿದ್ದು ಎರಡು ದಿವಸಗಳ ಸಮ್ಮೇಳನ ಶುಲ್ಕ 25 ರೂಪಾಯಿಗಳು. ಎಂ. ಓ. ಮತ್ತು ಬ್ಯಾಂಕ್ ಡಿ. ಡಿ. ಮುಖಾಂತರ ಹಣವನ್ನು ಕಳಿಸಬಹುದು.

ಬಿಜಾಪುರ ಜಿಲ್ಲೆಯ ಹುನುಗುಂದ ತಾಲ್ಲೋಕದಲ್ಲಿರುವ, ಚಿತ್ರದುರ್ಗ–ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿಯ ಸಮೀಪದಲ್ಲಿರುವ ಕೂಡಲ ಸಂಗಮ ಸುಕ್ಷೇತ್ರಕ್ಕೆ ಬರಬೇಕೆನ್ನುವವರು ಬಾಗಿಲುಕೋಟೆಯವರೆಗೆ ಟ್ರೇನಿನಲ್ಲಿ ಬಂದು, ಅಲ್ಲಿಂದ ಬಸ್ಸಿನಲ್ಲಿ ಬರಬಹುದು. ಸಾಕಷ್ಟು ಬಸ್ಸಿನ ಅನುಕೂಲತೆ ಇದೆ. ಹುಬ್ಬಳ್ಳಿ ಧಾರವಾಡಗಳ ಜನರಿಗೆ ಧಾರವಾಡದಿಂದ ನೇರವಾದ ಬಸ್ ಸೌಕರ್ಯವಿದೆ.

ಭಕ್ತಿ ಪಕ್ಷ ಸಮ್ಮೇಳನದ ಅಂಗವಾಗಿ ಧರ್ಮ ದುಂದುಭಿ ಎಂಬ ಕಲ್ಯಾಣ ಕಿರಣದ ವಿಶೇಷ ಸಂಚಿಕೆಯೊಂದನ್ನು ಹೊರಡಿಸುತ್ತಿದ್ದು ವಿವರಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಪೂಜ್ಯರಾದ ಸದ್ಗುರು ಲಿಂಗಾನಂದ ಸ್ವಾಮಿಗಳವರ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ನೇತೃತ್ವ-ಮಾರ್ಗದರ್ಶನದಲ್ಲಿ ನಡೆಯುವ ಶಿಬಿರಕ್ಕೆ ಅನೇಕ ಪೂಜ್ಯರುಗಳನ್ನು ಮಹನೀಯರನ್ನು ಆಮಂತ್ರಿಸಲಾಗುವುದು.

ಕೃಷ್ಣೆ-ಮಲಾಪಹಾರಿಯ ಪ್ರಶಾಂತ ಸಂಗಮದ ವಾತಾವರಣದಲ್ಲಿ, ಪ್ರಸಿದ್ಧ ಸಂಗಮೇಶ್ವರ ದೇವಾಲಯದ ಭಾಕ್ತಿಕ ಪರಿಸರದಲ್ಲಿ ವಿಶ್ವಗುರು ಬಸವಣ್ಣ ಮತ್ತು ಜಗನ್ಮಾತಾ ನೀಲಾಂಬಿಕಾ ತಾಯಿಯ ಲಿಂಗೈಕ್ಯ ಮಂಟಪಗಳಿರುವ ಸಂಗಮ ಸುಕ್ಷೇತ್ರದಲ್ಲಿ ನಡೆಯುವ ಈ ಶಿಬಿರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರಿ.

ಯೋಗಾಸನ, ಧ್ಯಾನ, ಶಿವಯೋಗಾಭ್ಯಾಸ, ಚಿಂತನ-ಮಂಥನ, ಪ್ರವಚನ, ದೀಕ್ಷಾ ಸಂಸ್ಕಾರ ಮುಂತಾದ ವೈವಿಧ್ಯಮಯ ಚಟುವಟಿಕೆಗಳಿಂದ ಕೂಡಿದ ಈ ಬಸವ ತತ್ತ್ವ ತರಬೇತಿ ಶಿಬಿರದಲ್ಲಿ ಭಾಗವಹಿಸಲು ಎಲ್ಲ ಜಾತಿ ಮತ ಪಂಥಗಳವರಿಗೆ ಅವಕಾಶವಿದೆ.

ಶಿಬಿರದ ಖರ್ಚುವೆಚ್ಚಗಳಿಗಾಗಿ ಉದಾರವಾದ ಕಾಣಿಕೆಗಳನ್ನು ನೀಡಬಹುದು. ಮತ್ತು ಕಲ್ಯಾಣ ಕಿರಣ ವಿಶೇಷ ಸಂಚಿಕೆಗಾಗಿ ಜಾಹಿರಾತುಗಳನ್ನು ಕೊಡಬಹುದು. ಮತ್ತು ಕೊಡಿಸಬಹುದು. ವಿವರ ಮತ್ತು ಅರ್ಜಿಪತ್ರಗಳಿಗಾಗಿ ಸ್ವವಿಳಾಸದ ಅಂಚೆ ಲಕೋಟೆಯಿಟ್ಟು ಪತ್ರ ಬರೆಯಿರಿ.

ವ್ಯವಹರಿಸುವ ವಿಳಾಸ :

೧. ಮಾತೆ ಬಸವಾಂಬಿಕೆ, ವ್ಯವಸ್ಥಾಪಕರು, ಬಸವ ಧರ್ಮ ಪೀಠ, ಕೂಡಲ ಸಂಗಮ, ತಾ. ಹುನಗುಂದ, ಜಿ. ಬಿಜಾಪುರ

೨. ಸೋದರಿ ಸುರೇಖಾ, ಬಸವ ಮಂಟಪ, ಕಾರ್ಡ್‌ರಸ್ತೆ ಎರಡನೆ ಬ್ಲಾಕು, ರಾಜಾಜಿನಗರ, ಬೆಂಗಳೂರು-560010.

೩. ಸೋದರಿ ಕಸ್ತೂರಿ, ಬಸವ ಗಂಗೋತ್ರಿ, ಕುಂಬಳಗೋಡು-560074, ಬೆಂಗಳೂರು-ದಕ್ಷಿಣ ತಾಲ್ಲೋಕು

೪. ಶರಣೆ. ಶೋಭಾದೇವಿ ಕೆ. ಡಿ. ಪರಮಾದಿ 73/D. ಎಂ. ಟಿ. ಎಸ್. ಕಾಲನಿ, ಹುಬ್ಬಳ್ಳಿ-580024 ಜಿಲ್ಲೆ-ಧಾರವಾಡ

೫. ಶರಣೆ. ಮಹಾದೇವಮ್ಮ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿ ರಸ್ತೆ, ರೇಲ್ವೆ ಗೇಟ್ ಬಳಿ, ಧಾರವಾಡ-580003

ಕೂಡಲ ಸಂಗಮದಲ್ಲಿ ರೂಪುಗೊಳ್ಳುತ್ತಿರುವ ಬಸವ ಧರ್ಮ ಪೀಠಕ್ಕೆ ಕೊಡುಗೆ

ಶರಣರುಗಳಾದ

1.	ಶ್ರೀ ಐ. ಎಂ. ಮಗದುಮ್ ಅ. ಭಾ. ವೀ. ಮಹಾಸಭಾ ಅಧ್ಯಕ್ಷರು, ಬೆಂಗಳೂರು.	5001-00
2.	ರುದ್ರವ್ವ. ಕೋಂ. ಗುರುಸಿದ್ಧಯ್ಯ ನಾಶಿ, ಬಾಗಿಲುಕೋಟೆ	1001-00
3.	ಇಂದಿರಾ. ಶಿವಾನಂದ ನಾರಾ, ಬಾಗಿಲುಕೋಟೆ	1001-00
4.	ಜಿ. ಕೆ. ಮಾನೆ, ಬಾಗಿಲುಕೋಟೆ	1001-00
5.	ಶಿವರುದ್ರಪ್ಪ ಮಲಕಾಜಪ್ಪ ಬೇವೂರ, ಧನ್ನೂರು	1001-00
6.	ಬಸವಣ್ಣೆಪ್ಪ ಶಿವಲಿಂಗಪ್ಪ ಅಳಗುಂಡಗಿ, ಶೊಲ್ಲಾಪುರ	501-00
7.	ದಾಕ್ಷಾಯಿಣಿ. ಅಯ್ಯನಗೌಡರ, ಬಾಗಿಲುಕೋಟೆ	501-00
8.	ಶಾತಮ್ಮ ಬಸಪ್ಪ ಇಂಡಿ, ಬಾಗಿಲುಕೋಟೆ	501-00

ಕೂಡಲ ಸಂಗಮದ ಮಹಾಮನೆ ಸಂಕೀರ್ಣದಲ್ಲಿ ನಿರ್ಮಿಸಲಿರುವ ದಾಸೋಹ ನಿಧಿಗಾಗಿ ಕಾಣಿಕೆ ಸಲ್ಲಿಸಿದವರು

ಶರಣರುಗಳಾದ

೧.	ಶಕುಂತಲಾ ಮತ್ತು ಅನ್ನದಾನಪ್ಪ ವಾಲಿ, ಬಾಗಿಲುಕೋಟೆ	1111-00
೨.	ಕಲಾವತಿ ಮತ್ತು ಸಿದ್ಧರಾಮಪ್ಪ ಬೇವನೂರು, ಬಾಗಿಲುಕೋಟೆ	1111-00
೩.	ರೇವೂಬಾಯಿ ಮತ್ತು ನರಸಪ್ಪ ಗಾಣಿಗೇರ ಬಾಗಿಲುಕೋಟೆ	1111-00
೪.	ವೀರಭದ್ರಪ್ಪ ವಂದಾಲ ಮತ್ತು ಮಕ್ಕಳು ಬಾಗಿಲುಕೋಟೆ	1111-00
೫.	ಎಂ. ಸಿ. ಉಕ್ಕಲಿ, ಟೀಚರ್, ಬಾಗಿಲುಕೋಟೆ	1111-00
೬.	ಶಿವಪ್ಪ ಮೇಲಪ್ಪ ಜೋಳದ, ಬಾಗಿಲುಕೋಟೆ	1111-00
೭.	ಗುಪ್ತ ಕಾಣಿಕೆ	1111-00
೮.	ಬಸೆಟ್ಟೆಪ್ಪ ಸಂಗಪ್ಪ ಅಂಗಡಿ, ಬಾಗಿಲುಕೋಟೆ	1111-00
೯.	ಹೊಂಬಣ್ಣ ಕಾಳಪ್ಪ ಯಾದಗಿರಿ, ಬಾಗಿಲುಕೋಟೆ	1111-00
೧೦.	ಕಲ್ಲೊಳ್ಳೆಪ್ಪ ಕಾಳಪ್ಪ ಕಂಬಾರ, ಬಾಗಿಲುಕೋಟೆ	1111-00
೧೧.	ಎಸ್. ಜಿ. ಪಾಟೀಲ ವಕೀಲರು, ಕೂಡಲ ಸಂಗಮೇಶ್ವರ ದೇವಾಲಯ ಟ್ರಸ್ಟ್ ಕಮಿಟಿ ಚೆರ್ಮನ್ನರು.	1111-00

ಮಹಾಮನೆ ಸಂಕೀರ್ಣದ ಅಕ್ಕನಾಗಲಾಂಬಿಕಾ ಪ್ರವಾಸಿಧಾಮದಲ್ಲಿ ಕೋಣೆ ಕಟ್ಟಿಸಲು ನೆರವು ನೀಡಿದವರು

ಶರಣರುಗಳಾದ

೧.	ಚಂದ್ರಶೇಖರ ಮುರಿಗೆಪ್ಪ ಜಿಗಜಿನ್ನಿ, ಬಾಗಿಲುಕೋಟೆ	11001-00
೨.	ಈರಸಂಗಪ್ಪ ಶಾಂತಪ್ಪ ಹೊಸಮನಿ, ಬಾಗಿಲುಕೋಟೆ	11001-00

ಬಾಗಿಲುಕೋಟೆ ನಗರದಲ್ಲಿ ವಿಶ್ವಕಲ್ಯಾಣ ಗೀತೆ ಧರ್ಮಗ್ರಂಥ ನಿಧಿಗೆ ಧನ ಸಹಾಯ ಗೈದವರು

ಕ್ರ. ಸಂ.	ಹಸರು	ಮೊತ್ತ
ಶರಣರುಗಳಾದ		
91.	ಶಂಕರಮ್ಮ. ಮ. ಹುಲ್ಯಾಳ	1001-00
92.	ವಿಶ್ವನಾಥ ಬಸಪ್ಪ ರುದ್ರಾಕ್ಷಿ	1001-00
93.	ಮಹಾಂತಪ್ಪ ಶಿವಪ್ಪ ಅಂಗಡಿ	1001-00
94.	ದುಂಡಪ್ಪ ಮಳೆಪ್ಪ ಸಂಕಣ್ಣನವರು	1001-00
95.	ಮಹಾಂತೇಶ. ಎಸ್. ಸಾಪೋಜಿ	1001-00
96.	ಅನ್ನಪೂರ್ಣಮ್ಮ ಸಂಗಪ್ಪ ಸಕ್ರೋಜಿ	1001-00
97.	ಅಡಿವೆಪ್ಪ ಬಸಪ್ಪ ಶೆಟ್ಟರ್	1001-00
98.	ಗುಪ್ತದಾನ	1051-00
99.	ಬಿ. ಕೆ. ಹಾಲೊಳ್ಳಿ	1001-00
100.	ಶಾಂತಾಬಾಯಿ. ಸಂಗಪ್ಪ. ಮೇಲ್‌ನಾಡ್	1001-00
101.	ಚಂದ್ರಶೇಖರ ಮುರಿಗೆಪ್ಪ ಜಿಗಜಿನ್ನಿ	1001-00

ಶ್ರೀ ಬಸವೇಶ್ವರ ಪೂಜಾ ನಿಧಿಗೆ 501-00 ರೂ ಗಳನ್ನು ಸಲ್ಲಿಸಿದ ಸದ್ಭಕ್ತರು

ಶರಣರುಗಳಾದ

೧. ಓರ್ವ ತಾಯಂದಿರ ಗುಪ್ತಕಾಣಿಕೆ, ಬಾಗಿಲುಕೋಟೆ

೨. ಭೀಮಪ್ಪ ಯಮುನಪ್ಪ ರೂಡಗಿ, ಗುಳೇದಗುಡ್ಡ

೩. ಸುಮಿತ್ರಾ ಸಂಗಪ್ಪ ಬಾಗೇವಾಡಿ, ಬಾಗಿಲುಕೋಟೆ

೪. ಎಸ್. ವಿ. ಗೌಡರ್, ಬಾಗಿಲುಕೋಟೆ

ಈ ಎಲ್ಲ ದಾನಿಗಳಿಗೆ ಪರಮಾತ್ಮನು, ವಿಶ್ವಗುರು ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದ ನೀಡಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

—ಮಾತಾಜಿ

ವಿಲಕ್ಷಣ ಕೊಡುಗೆ

ಒಬ್ಬ ಪ್ರಾಮಾಣಿಕ, ಶರಣರಾದ ಸರ್ಕಾರಿ ಅಧಿಕಾರಿಗಳು ತಮ್ಮ ಕಾಯಕದಲ್ಲಿ ನಿರತರಾಗಿದ್ದಾಗ ಅವರಿಗೆ ಗೊತ್ತಾಗದಂತೆ ಯಾರೋ ಟೇಬಲ್ಲಿನ ಮೇಲೆ 500 ರೂಗಳನ್ನು ಇಟ್ಟು ಹೊರಟು ಹೋಗಿದ್ದರಂತೆ. ತಕ್ಷಣವೇ ಗಮನಿಸದ ಅವರು ಸಂಜೆ ಮನೆಗೆ ಹೊರಡುವ ಮುನ್ನ ನೋಡಿದಾಗ ವಿಳಾಸ ರಹಿತ ಲಕೋಟೆಯಲ್ಲಿ 500 ರೂಗಳು ಇದ್ದವಂತೆ. ಇದನ್ನು ಸಂಬಂಧ ಪಟ್ಟವರಿಗೆ ತಲುಪಿಸುವುದು ಹೇಗೆ ಎಂದು ತಿಳಿಯದೆ, ಆ ಲಂಚದ ಹಣವನ್ನು ತಾವು ಬಳಸಿಕೊಳ್ಳಲು ಇಷ್ಟಪಡದೆ ಸಂಸ್ಥೆಗೆ ಕೊಡುಗೆಯಾಗಿ ನೀಡಿದ್ದಾರೆ ಅದನ್ನು ಬಸವ ಧರ್ಮ ಪೀಠಕ್ಕೆಂದು ಸ್ವೀಕರಿಸಿದ್ದೇವೆ. ಇಂಥ ಪ್ರಾಮಾಣಿಕತೆ ಮತ್ತು ಸತ್ಯ ಶುದ್ಧ ಜೀವನವನ್ನು ನಡೆಸುತ್ತಿರುವ ಶ್ರೀಯುತರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಶುಭವನ್ನು ಹಾರೈಸುತ್ತೇವೆ. ಈ ಮೂಲಕ ಬಸವ ಧರ್ಮ ಪೀಠಕ್ಕೆ ಕೊಡುಗೆ ನೀಡಿದ ಆ ಅಜ್ಞಾತ ದಾನಿಗೂ ಶುಭವನ್ನು ಹಾರೈಸುತ್ತೇವೆ.

—ಮಾತಾಜಿ

ಕಲ್ಯಾಣ ಕಿರಣದ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟುಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆ ಬರೆಯಿರಿ. ದಿನ ದಿನಕ್ಕೂ ವೃದ್ಧಿಯಾಗುತ್ತಿರುವ ಚಂದಾದಾರರ ಪಟ್ಟಿಯಲ್ಲಿ ಕ್ರಮ ಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ. ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ.

ಕಲ್ಯಾಣ ಕಿರಣ ಮಾಸ ಪತ್ರಿಕೆಗೆ
೨೦೦ ರೂ. ಸಲ್ಲಿಸಿ ಆಜೀವ ಸದಸ್ಯರಾದವರು

(ಜುಲೈ ಸಂಚಿಕೆಯಿಂದ ಮುಂದುವರಿದುದು)

ಕ್ರಮ ಸಂಖ್ಯೆ	ಹೆಸರು	ಊರು
ಶರಣರುಗಳಾದ		
2646	ಶ್ರೀ ತಿಪ್ಪಯ್ಯಾ	ಅಜಾದ್‌ನಗರ
2647	ಶ್ರೀ ವಿ. ಸಿ. ಪಾಟೀಲ್	ಲಿಂಗಸೂಗೂರು
2648	ಶ್ರೀ ಎಂ. ಎಚ್. ತೆಳಗೂಳಕರ	ನರಗುಂದ
2649	ಉಷಾದೇವಿ ಮಲ್ಲಿಕಾರ್ಜುನ	ಅವಟೆ
2650	ಶ್ರೀ ಆರ್. ಎಸ್. ಪಾಟೀಲ್	ಗುಲಬರ್ಗಾ
2651	ಎಂ. ಕೆ. ಸುಂಕದ್	ಬಸವೇಶ್ವರನಗರ
2652	ಕೃಷ್ಣ ಶಿವಪ್ಪ ಗಾರಜೆ	ಧ್ವಾಳಿ (ತಾ. ಮಿರಜ)
2653	ಎಂ. ಹೇಮಣ್ಣ	ಹಿರಿಯೂರು
2654	ಶ್ರೀಮತಿ ಶಾರದ ಸಿದ್ಧಪ್ಪ ಪಟ್ಟಣದ	ದೂಧ್‌ಗಂಗಾನಗರ್
2655	ಎಂ. ವಿ. ವಾಲಿ	ವಾರಣಾವತಿ
2656	ಲಕ್ಷ್ಮಣ ಈಶ್ವರಪ್ಪ ಆಕಳವಾಡಿ	ಕೆಂಪಗೇರಿ
2657	ಕುಮಾರಿ ಶಾರದ	ಜಯನಗರ
2658	ಜಿ. ಶಿವಾನಂದ	ಕಂಪ್ಲಿ
2659	ಪ್ರೊ. ಎಸ್. ಎ. ಹೊಸಮನಿ	ಕಲ್ಯಾಣನಗರ
2660	ಶ್ರೀ ಸದಾಶಿವ ಚೌಶೆಟ್ಟಿ	ನವ ಆಯೋಧ್ಯಾನಗರ
2661	ಶ್ರೀಮತಿ ಶಕುಂತಲಾ ಪಂಜಿ	ಗಣೇಶ ಪೇಟೆ
2662	ಕೆ. ಶರಣಪ್ಪ	ಬೊಚ್ಚ ಬೊರನ ಹಟ್ಟಿ
2663	ಬಿ.ಸಿ. ಚಂದ್ರಪ್ಪಾಜ್ಜಿ ಅರಸ್	ಬ್ರಹ್ಮಸಂದ್ರ
2664	ಇ. ಬಸವಂತಪ್ಪ	ಕುಡಿನೀರ ಕಟ್ಟೆ
2665	ಎಂ. ಆರ್. ಹುಲ್ಯಾಳ	ಬಾಗಲಕೋಟೆ
2666	ಜಿ.ಬಿ. ಅರಬಿ	ಬಾಗಲಕೋಟೆ
2667	ಎ,ಬಿ. ಶೆಟ್ಟರ್	ಬಾಗಲಕೋಟೆ
2668	ವೈ.ಜಿ. ವಾಮದೇವಪ್ಪ	ಬಾಗಲಕೋಟೆ

ಕ್ರಮ ಸಂಖ್ಯೆ	ಹೆಸರು	ಊರು
2669	ಲಿಂಗಪ್ಪ ರುದ್ರಪ್ಪ ಕಂಕಣ ಮೇಲಿ	ಬಾಗಲಕೋಟೆ
2670	ಮುರಿಗೆಪ್ಪ ಸಿ. ಗಂಗಾಧರ್	ಬಾಗಲಕೋಟೆ
2671	ಶ್ರೀಮತಿ ಎಸ್.ಎಸ್. ಕಲಾದಗಿ	ಬಾಗಲಕೋಟೆ
2672	ಚಂದ್ರಶೇಖರ್ ಮುರಿಗೆಪ್ಪ ಜಿಗಜಿನ್ನಿ	ಬಾಗಲಕೋಟೆ
2673	ಚಂದ್ರಶೇಖರಯ್ಯ, ಬಸಯ್ಯ ಮಠ	ಬಾಗಲಕೋಟೆ
2674	ಪ್ರಭಪ್ಪ. ವೀರಸಂಗಪ್ಪ	ಬಾಗಲಕೋಟೆ
2675	ಶಂಕರಪ್ಪ. ಶ. ತೇಲಿ	ಹಿರೇಹಾಳ
2676	ಶಿವಾನಂದ ಸಿದ್ದಪ್ಪ	ಬಾಗಲಕೋಟೆ
2677	ಎಸ್. ಬಿ. ಬೇವನೂರು	,,
2678	ಎಚ್. ಕೆ. ಯಾದಗಿರಿ	,,
2679	ಸಂಗಪ್ಪ ಬಸಪ್ಪ, ಶಿವನಗುತ್ತಿ	,,
2680	ಎಸ್. ಎಂ. ಬೇವೂರು	ಧನ್ನೂರು
2681	ಬಸವರಾಜ ಚಂದ್ರಕಾಂತ ಉಕ್ಕೆ	ಬಾಗಲಕೋಟೆ
2682	ಡಾ॥ ಉಮಾಕಾಂತ್ ಗಂಗಪ್ಪ ಭರಭರೆ	,,
2683	ಮಲ್ಲಿಕಾರ್ಜುನ, ಚೌಡಪ್ಪ, ಉಕ್ಕಲಿ	,,
2684	ಶೈಲಜಾ ಲೋಕನಾಥ್ ಗಾಮಣ್ಣನವರ	,,
2685	ಸೋಮಶೇಖರ್ ಚನ್ನಪ್ಪ ಜೋಳದ	,,
2686	ಮುತ್ತಪ್ಪ ಶಿವಪ್ಪ ಜೋಳದ	,,
2687	ಶ್ರೀಮತಿ ಇಂದುಮತಿ ಮಲ್ಲಿಕಾರ್ಜುನಪ್ಪ	,,
2688	M/S ಎಸ್. ವಿ. ಗೌಡರ್	,,
2689	ಸುಮಿತ್ರಾ ರಾಚಪ್ಪ ತಿಪ್ಪ	ಹುಬ್ಬಳ್ಳಿ
2690	ಗುರುಬಸಪ್ಪ ಬಸಪ್ಪ ನೇಲೋಗಲ್	ಬಾಗಲಕೋಟೆ
2691	ಮಲಕಾಜಪ್ಪ ಅಂದಾನಪ್ಪ	,,
2692	ಎಸ್. ಎಸ್. ವಿರಕ್ತಮಠ	,,
2693	ಕಲಮೇಶ್ವರ ಬಸಪ್ಪ ಸೈಯರ್	,,
2694	ಶ್ರೀಮತಿ ಲೀಲಾವತಿ ವಿರೇಶ್ ಕರಡಿ	,,
2695	ಕೆ. ಸಿ. ಕಿರಗಿ, ಜಾಡಿಗೇರಗಲ್ಲಿ	,,
2696	ಶ್ರೀ ಎಸ್. ಎನ್. ಯರಗಲ್	,,
2697	ಬಿ. ಎನ್. ಗಾಣಿಗೇರ್	,,
2698	ಬಸವರಾಜ ಸೈಬಾನ	ಶಹಾಪೂರ

ಕ್ರಮ ಸಂಖ್ಯೆ	ಹೆಸರು	ಊರು
2699	ವಿಶ್ವನಾಥ ಬಸಪ್ಪ ರುದ್ರಾಕ್ಷಿ	ಬಾಗಲಕೋಟೆ
2700	ಬಿ. ಜೆ. ಬಲ್ಲಾಳಿ	,,
2701	ದೇವಕಿ ಬಸಪ್ಪ	,,
2702	ಮಹಂತೇಶ್. ಜಿ. ಹಡಿಕ್ಯಾಳ್	,,
2703	ಶರಣಪ್ಪ ವೀರಭದ್ರಪ್ಪ ವಂದಾಲ	,,
2704	ಜಿ. ಎಸ್. ತೋಟದ	,,
2705	ಈಶ್ವರ್ ಶಿವನಂಗಪ್ಪ ಅಂಗಡಿ	,,
2706	ಶಿವಯೋಗಪ್ಪ ಶೇಷಪ್ಪ ಕುದರಿ	,,
2707	ಎಸ್. ಎಫ್. ಶಿರಹಟ್ಟಿ ಮಠ	,,
2708	ಸಿದ್ರಾಮಪ್ಪ ಚನ್ನಪ್ಪ ತೋಟದ	ಮೈಂದರ್ಗಿ

ಸಹೃದಯರಿಗೆ,

ಹೃತ್ಪೂರ್ವಕ ಶುಭಹಾರೈಕೆಗಳು,

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಬಸವಧರ್ಮ ಪೀಠವು ಬಸವ ತತ್ತ್ವ ತರಬೇತಿ ಶಿಬಿರವೊಂದನ್ನು 1987 ಅಕ್ಟೋಬರ್ 1 ರಿಂದ ಏರ್ಪಡಿಸಿದೆಯಷ್ಟೇ. ಈ ಶಿಬಿರವು ಅಕ್ಟೋಬರ್ 11 ರಂದು ಮುಕ್ತಾಯಗೊಳ್ಳುವುದು. 10 ಮತ್ತು 11ರಂದು ಭಕ್ತಿಪಕ್ಷದ ಸಮಾವೇಶವು ಜರುಗುತ್ತದೆ. ಶನಿವಾರ 10-10-1987ರಂದು
ಬೆಳಿಗ್ಗೆ 10 ಗಂಟೆಗೆ ಪ್ರಥಮ ಸಮಾವೇಶ
ಮಧ್ಯಾಹ್ನ 3 ರಿಂದ 6 ಎರಡನೇ ಸಮಾವೇಶ
ರಾತ್ರಿ 7-30 ರಿಂದ 9ರವರೆಗೆ ಪ್ರವಚನ.

11-10-1987 ರಂದು ಬೆಳಿಗ್ಗೆ 10 ಗಂಟೆಗೆ ಮಂಗಲ ಸಮಾವೇಶ. ಈ ಎರಡು ದಿವಸಗಳ ಅವಧಿಯಲ್ಲಿ ಜನವರಿ 14 ಬಸವಕ್ರಾಂತಿ ದಿನದಂದು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಸಂಯೋಜಿಸಲಿರುವ "ಶರಣರ ಮೇಳ"ದ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸಲಾಗುವುದು.

ಆದ್ದರಿಂದ ಉತ್ತಮ ಕಾರ್ಯಕರ್ತರು, ಧರ್ಮಾಭಿಮಾನಿಗಳು, ಉತ್ಸಾಹಿಗಳೂ ಆದ ತಾವು 11 ದಿವಸಗಳ ತತ್ತ್ವ ತರಬೇತಿ ಶಿಬಿರದಲ್ಲಿ ಭಾಗವಹಿಸಬೇಕೆಂದು ಈ ಮೂಲಕ ಆಮಂತ್ರಿಸುತ್ತಿದ್ದೇವೆ. ನಿಮ್ಮ ವೈಯಕ್ತಿಕ ಕಾಯಕದ ಒತ್ತಡ, ಹೊಣೆಗಾರಿಕೆ ತೀವ್ರವಾಗಿ ಇದ್ದು ಒಂದು ವೇಳೆ ಹನ್ನೊಂದು ದಿವಸಗಳನ್ನು ವಿನಿಯೋಗಿಸಲು ಸಾಧ್ಯವಿಲ್ಲದಿದ್ದರೆ ಅಕ್ಟೋಬರ್ 10 ಮತ್ತು 11ರಂದಾದರೂ ತಾವು ಆಗಮಿಸಬೇಕು. 1988 ಜನವರಿ 14 ರಂದು ಐತಿಹಾಸಿಕ ಸಮಾವೇಶವಾಗಲಿರುವ "ಶರಣ ಮೇಳದ" ರೂಪು-ರೇಷ ಹಾಕಲು ನಿಮ್ಮ ಸಲಹೆ, ಚಿಂತನೆ ಅವಶ್ಯಕವಿದೆ ಎಂದು ನಾವು ಭಾವಿಸಿದ್ದೇವೆ.

ಈ ಶಿಬಿರವು ಮುಂದಿನ ಶರಣ ಮೇಳದ ಸಮಗ್ರ ರೂಪು-ರೇಷ ಕುರಿತು ಚಿಂತಿಸುತ್ತದೆಯಾದ್ದರಿಂದ ನೀವು ತಪ್ಪದೆ ಭಾಗವಹಿಸಬೇಕು. ಶಿಬಿರದ ಅವಧಿಯಲ್ಲಿ ಸ್ವಯಂ ಸೇವಕರಿಗೆ ಸಭಾನಿಯಂತ್ರಣ ತರಬೇತಿ, ಶರಣ ಮೇಳದಲ್ಲಿ ಶಿಸ್ತುಪಾಲನೆ ಬಗ್ಗೆ ಸೂಚನೆ ನೀಡಲಾಗುವುದು ಆದ್ದರಿಂದ ತಾವು ತಪ್ಪದೆ ಬರುವುದಲ್ಲದೆ ನಿಮ್ಮ ಊರಿನಿಂದ, ನಿಮ್ಮ ಭಾಗದಿಂದ ಹೆಚ್ಚಿನ ಶಿಬಿರಾರ್ಥಿಗಳನ್ನು ಕರೆತರಬೇಕು ಎಂದು ಸೂಚಿಸುತ್ತೇವೆ. ಬಸವ ಸ್ಮರಣಪೂರ್ವಕ ಶುಭಹಾರೈಕೆ ;

—ಮಾತಾಜಿ,
ಕಾರ್ಯಾಧ್ಯಕ್ಷೆ,
ಬಸವ ಧರ್ಮಪೀಠ, ಮಹಾಮನೆ ಸಂಕೀರ್ಣ,
ಕೂಡಲ ಸಂಗಮ-587141.
ತಾ-ಹುನಗುಂದ, ಜಿಲ್ಲ-ಬಿಜಾಪುರ.

ಕ್ಯಾಂಪ್ : ಬೆಂಗಳೂರು
ದಿನಾಂಕ :

'ಬಸವ ಕ್ರಾಂತಿ ದಿನ'ದಂದು

"ಕೂಡಲ ಸಂಗನು ಸುಕ್ಷೇತ್ರದಲ್ಲಿ ಶರಣಮೇಳ"

ಕೂಡಲ ಸಂಗಮವು ಬಿಜಾಪುರ ಜಿಲ್ಲೆಯ ಹುನಗುಂದ ತಾಲ್ಲೂಕಿನಲ್ಲಿ ಚಿತ್ರದುರ್ಗ–ಶೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ ೧೩ಕ್ಕೆ ಸಮೀಪದಲ್ಲಿರುವ ಸುಕ್ಷೇತ್ರ, ಕೃಷ್ಣಾ-ಮಲಾಪಹಾರಿಯರ ಸಂಗಮದಿಂದ ಪ್ರಾಕೃತಿಕ ರಮಣೀಯತೆ ಪಡೆದ ಈ ಕ್ಷೇತ್ರವು ಹತ್ತರೊಳಗೆ ಹನ್ನೊಂದು ಎಂಬುತಹ ಉದಾಸೀನತೆಗೆ ಒಳಗಾಗದೆ ಗಮನಾರ್ಹ ಎಂಬಂತಾದುದು ವಿಶ್ವಗುರು ಬಸವಣ್ಣನವರ ಐಕ್ಯಭೂಮಿಯಾಗಿ, ಬಾಗೇವಾಡಿಯಲ್ಲಿ ಹುಟ್ಟಿದ ಕ್ರಾಂತಿಪುರುಷ ಬಸವಣ್ಣನವರು ಸತ್ಯಾನ್ವೇಷಕರಾಗಿ ಮನೆಬಿಟ್ಟು ಹೊರಟು ಬಂದು ಸೇರಿದುದು ಸಂಗಮದಲ್ಲಿದ್ದ ಗುರುಕುಲವನ್ನು. ಹೀಗೆ ಕೂಡಲ ಸಂಗಮವು ಅವರ ವಿದ್ಯಾಭೂಮಿ, ತಪೋಭೂಮಿಯಾಯಿತು. ಪ್ರಗತಿಪರವಾದ ನವಧರ್ಮದ ದ್ರಷ್ಟಾರರಾಗಿ ಬಸವಣ್ಣನವರು ತಮ್ಮ ನೂತನ ಧರ್ಮದ ಘೋಷಣೆ ಮಾಡಿದುದು ಇಲ್ಲಿಂದಲೆ. ಮುಂದೆ ಕಲ್ಯಾಣದಿಂದ ಆಗಮಿಸಿ ಮೂರು ತಿಂಗಳುಕಾಲ ಶಿವಯೋಗಾನಂದದಲ್ಲಿ ತಲ್ಲೀನರಾಗಿ ಬಸವ ಪಂಚಮಿ (ಶ್ರಾವಣ ಶುದ್ಧ ಪಂಚಮಿ) ಯಂದು ಬಯಲಾದುದು ಇಲ್ಲಿಯೇ. ಹೀಗಾಗಿ ಕೂಡಲ ಸಂಗಮವು ಧರ್ಮಗುರುವಿನ ಐಕ್ಯತಾಣವಾಗಿ ಧರ್ಮಕ್ಷೇತ್ರವೆನಿಸಿಕೊಂಡಿರುವುದುಸುವೇದ್ಯ.

ಕೂಡಲಸಂಗಮದಲ್ಲೇ ಏಕೆ ?

ಇಂತಹ ಐತಿಹಾಸಿಕ ಮಹತ್ವ ಪಡೆದ ಕೂಡಲ ಸಂಗಮದಲ್ಲಿ ಒಂದು ಧಾರ್ಮಿಕ ಮಹಾಮೇಳವನ್ನು ಪ್ರತಿವರ್ಷವೂ ನಡೆಸಿಕೊಂಡು ಹೋಗುವ ಪರಿಪಾಠ ಬೆಳೆಸಬೇಕೆಂಬ ನಮ್ಮ ಹಂಬಲ ಬಹು ದಿನದ್ದು. ಅದೀಗ ಕೈಗೂಡುವ ಕಾಲವೀಗ ಒದಗಿದೆ. ಕೂಡಲ ಸಂಗಮವನ್ನೇ ಈ ಶರಣಮೇಳಕ್ಕೆ ಆರಿಸಿದ್ದೇಕೆ ? ಎಂದು ಯಾರಾದರೂ ಪ್ರಶ್ನಿಸಬಹುದು.

೧. ಕೂಡಲ ಸಂಗಮವು ಧರ್ಮಪಿತ ಬಸವಣ್ಣನವರ ಐಕ್ಯಭೂಮಿ.
೨. ದೇವರು ಕರುಣಿಸಿದ ವರವೆಂಬಂತೆ ಲಕ್ಷಾಂತರ ಜನರು ಸೇರಿದರೂ ಅನುಕೂಲವಾಗುವಂತಹ ನೀರಿನ ಸೌಕರ್ಯ "ಬಸವ ಸಾಗರ" ಜಲಾಶಯದಿಂದ ಒದಗಿದೆ.
೩. ಪ್ರಯಾಣದ ದೃಷ್ಟಿಯಿಂದಲೂ ಒಂದು ತುದಿ ಎನಿಸಿಕೊಳ್ಳದು, ರಾಷ್ಟ್ರಿಯ ಹೆದ್ದಾರಿಗೆ ಹತ್ತಿರದಲ್ಲಿದೆ.

ಹೀಗಾಗಿ ಕೂಡಲ ಸಂಗಮವು ಇಂತಹ ಬೃಹತ್‌ರೂಪದ ಮೇಳಕ್ಕೆ ಅನುಕೂಲಕರ.

ಮಕರ ಸಂಕ್ರಾಂತಿಯಂದು ಶರಣರ ಮೇಳ

ಪ್ರಪ್ರಥಮ ಐತಿಹಾಸಿಕ ಮಹಾಮೇಳವನ್ನು ಪ್ರತಿವರ್ಷದ ಮಕರ ಸಂಕ್ರಾಂತಿಯಂದು ಸಂಯೋಜಿಸಲು ಆಲೋಚಿಸಿರುವುದರ ಹಿನ್ನೆಲೆ ಹೀಗಿದೆ. ಸಿಂಗಿರಾಜ ಕವಿಯು ಬಸವರಾಜ ಚಾರಿತ್ರ್ಯದಲ್ಲಿ ಒಂದು ಪ್ರಸಂಗದ ಉಲ್ಲೇಖವಿದೆ. ಅಂದು ಭಾದ್ರಪದ ಬಹುಳ ಷಷ್ಠಿ ಮಂಗಳವಾರ ವಿಪರೀತ ಜನರು ಸುಕ್ಷೇತ್ರದಲ್ಲಿ ಸೇರಿದ್ದಾರೆ. ನೀರಿನಲ್ಲಿ ಮುಳುಗುವವರು, ಮರವನ್ನು ಸುತ್ತುವವರು, ವಿವಿಧ ಪೂಜೆ ಸಲ್ಲಿಸುವವರು, ಅಭಿಷೇಕಾಸಕ್ತರು ಪೂಜಾವೈಭವ ಪ್ರೀತರು ನೆರೆದಿದ್ದಾರೆ. ನಿಗದಿ ಪಡಿಸಿದ ಹಣವನ್ನು ಪಡೆದು ಪೂಜೆ ಸಲ್ಲಿಸುತ್ತಾರೆ. ಬಸವಣ್ಣನವರಾದರೋ ಭಕ್ತಿ ಭಾವ ಭರದಿಂದ ಬರುತ್ತಾರೆ ಎಂದಿನಂತೆ ವನಸುಮಗಳನ್ನಾಯ್ದು ತಂದಿದ್ದಾರೆ. ಹಣವನ್ನು ಕೊಡಲಾರದ ಬಡಭಕ್ತರನ್ನು ಸೇರಿಸಿಕೊಂಡು ಭಕ್ತಿ ನಿರ್ಭರತೆಯಿಂದ ಪೂಜಿಸುತ್ತಾರೆ. ಇದರಿಂದ ದೇವಾಲಯದ ವಿಪ್ರರು ಕೋಪೋದ್ರಿಕ್ತರಾಗುತ್ತಾರೆ. ತಮ್ಮ ಹೊಟ್ಟೆಪಾಡಿಗೆ ಬಸವಣ್ಣನು ಧಕ್ಕೆ ತರುವುದೇ ಅಲ್ಲದೆ ವೇದಾಗಮ ಶಾಸ್ತ್ರೋಕ್ತವಲ್ಲದ ಪೂಜೆ ಮಾಡುತ್ತಾನೆ ಎಂದು ಭಾವಿಸಿ, "ಹಿಡಿ, ಹೊಡೆ, ಕೊಲ್ಲು" ಎಂದು ಆರ್ಭಟಿಸಿ ಎರಗುತ್ತಾರೆ. ಆಗ ಸಂಗಮೇಶ್ವರ ಲಿಂಗದಿಂದ ಬ್ರಹ್ಮನಾದ ಉಂಟಾಗಿ, "ಎಲವೋ.... ನೀವು ಮಾಡಿದ ಪೂಜೆ ಹುಸಿ ; ಬಸವನ ಪೂಜೆಯೇ ನನಗೆ ರಮ್ಯ" ಎಂಬ ಆಕಾಶವಾಣಿ ಕೇಳಿ ಬರುತ್ತದೆ. ಆಗ ಅಲ್ಲಿಯ ವಿಪ್ರಸಮೂಹ, ಭಕ್ತ ಸಮೂಹವು ಬೆಕ್ಕಸಬೆರಗಾಗಿ ನಿಂತು ಬಸವಣ್ಣನಿಗೆ ಭಯಭಕ್ತಿಯಿಂದ ವಂದಿಸುವರು. "ಸಂಗನೇ ಬಸವ. ಬಸವನೇ ಸಂಗ" ಎಂಬ ನಂಬಿಗೆ ಬಲಿಯಿತು.

ಈ ಘಟನೆ ಎಷ್ಟು ಮಹತ್ವಪೂರ್ಣವೆಂದರೆ, ಇದು ಬಸವಣ್ಣನ ವಿಚಾರ-ಆಚಾರ ನಡೆನುಡಿಗಳೆಲ್ಲ ದೇವನಿಗೆ ಬಲುಪ್ರಿಯ ಎಂಬುದನ್ನು ಸಾರುವುದಷ್ಟೆ ಅಲ್ಲ ಜನ ಸಮುದಾಯದ ಗಮನವನ್ನು ಸೆಳೆಯಿತು. ಓಹೋ...ಇಲ್ಲೊಬ್ಬ ಮಹಾನ್ ವಿಚಾರವಾದಿ, ಚಿಂತಕನೊಬ್ಬನಿದ್ದಾನೆ. ಈತ ದೇವನ ಪ್ರತಿನಿಧಿಯಾಗಿ ಲೋಕಕ್ಕೆ ಮಾರ್ಗ ತೋರಲು ಬಂದವನು." ಎಂಬುದನ್ನು ಸಾರಿಸಾರಿ ಹೇಳುತ್ತದೆ. ಇಷ್ಟೇ ಅಲ್ಲ ಈ ವಾರ್ತೆ ಬಿಜ್ಜಳನ ಕಲ್ಯಾಣ ನಗರಕ್ಕೂ ತಲ್ಪಿತು. ಪರೀಕ್ಷೆಗೆ ಬಂದ ಜನರು ಈ ಘಟನೆಯನ್ನು ವರ್ಣರಂಜಿತವಾಗಿ ಹೇಳುತ್ತಾ ಹೋದಾಗ ಕೇಳಿದ ಬಿಜ್ಜಳನು ಬೆಕ್ಕಸ ಬೆರಗಾದ. ಬಲದೇವ ದಂಡನಾಯಕನು ಅಲ್ಲಿಂದಲೇ ಬಸವಣ್ಣನಿಗೆ ಭಕ್ತಿ ಭಾವದಿಂದ ಕೈ ಮುಗಿದನಂತೆ. ಅಂತೂ ಸಂಪ್ರದಾಯವೊಂದನ್ನು ಮೀರಿ ಬಸವಣ್ಣನವರು ಹೊಸಬಟ್ಟೆಯೊಂದನ್ನು ತುಳಿದ ದಿನವಂದು ; ಹೊಸ ವಿಚಾರವನ್ನು ಪ್ರತಿಪಾದಿಸಿದ ದಿನವಂದು.

ಸಿಂಗಿರಾಜ ಕವಿಯು ಭಾದ್ರಪದ ಷಷ್ಠಿ ಎಂದು ಉಲ್ಲೇಖಿಸುವನಾದರೂ ಈ ಘಟನೆ ಭಾದ್ರಪದ ಮಾಸದಲ್ಲಿ ನಡೆದಿಲ್ಲ. ಕೂಡಲ ಸಂಗಮದಲ್ಲಿ ಜನರು ವಿಶೇಷವಾಗಿ ಸೇರುವುದು ವರ್ಷದಲ್ಲಿ ಮೂರುಬಾರಿ. ಚೈತ್ರಮಾಸದಲ್ಲಿ, ಮತ್ತು ಕಾರ್ತೀಕ

ಮಾಸದಲ್ಲಿ ಜಾತ್ರೆಯು ಆದರೆ ಮಕರ ಸಂಕ್ರಾಂತಿಯ ಸಮಯದಲ್ಲಿ ತೀರ್ಥಸ್ನಾನ
ಕ್ಕೆಂದು ಜನರು ಧಾವಿಸಿ ಬರುವರು. ಭಾದ್ರಪದ ಮಾಸದಲ್ಲಿ ಅಂತಹ ವಿಶೇಷ
ಸಮಾವೇಶಗಳೇನೂ ಇರುವುದಿಲ್ಲ. ಸಿಂಗಿರಾಜನಿಗೆ ಬಸವಣ್ಣನಿಗೆ ಸಂಗಮನಾಥನ
ಆಕಾಶವಾಣಿಯಾದುದು ಮುಖ್ಯವೇ ವಿನಾ ಅದು ಯಾವ ದಿನದಂದು ಎಂಬುದಲ್ಲ.
ಹೀಗಾಗಿ ಅವನು ಊಹಾತ್ಮಕವಾಗಿ ಭಾದ್ರಪದ ಷಷ್ಠಿ ಎಂದು ಹೇಳಿದ್ದರೂ, ಆ
ದಿವಸವು ಮಕರ ಸಂಕ್ರಾಂತಿಯಂದು ಎಂದು ಸುಲಭವಾಗಿ ಊಹಿಸಬಹುದು. ಅಂದು
ತೀರ್ಥಸ್ನಾನ ಮಾಡಿ ಪವಿತ್ರರಾಗಬೇಕೆಂಬ ಹಂಬಲದಿಂದ ಜನರು ತೀರ್ಥಕ್ಷೇತ್ರಗಳಿಗೆ
ಧಾವಿಸುವುದುಂಟು. ಇದನ್ನೆಲ್ಲ ಕಂಡು ಬಸವಣ್ಣನವರು.

"ನೀರಸು ಕಂಡಲ್ಲಿ ಮುಳುಗುವರಯ್ಯ" ಎಂದು, "ತೊರೆಯ ಮೀವ ಅಣ್ಣಗ
ಳಿರಾ ತೊರೆಯಿಂ ಭೋ ಪರಧನವ, ತೊರೆಯಿಂ ಭೋ ಪರಸತಿ"ಯ ಎಂದು ಹಾಡಿ
ರಲಿಕ್ಕೂ ಸಾಕು. ಧರ್ಮವನ್ನು ಸರಳೀಕರಣಗೊಳಿಸಿದ, ಶ್ರೀಸಾಮಾನ್ಯನಿಗೆ ಮುಟ್ಟಿ
ಸಿದ ಬಸವಣ್ಣನವರು ನವಧರ್ಮದ ಕ್ರಾಂತಿಕಹಳೆ ಮೊಳಗಿದ ದಿವಸ ಸಂಕ್ರಾಂತಿ.

ಸಮಾನ ವಿಚಾರಧಾರೆಯ ಆಧ್ಯಾತ್ಮ ಜೀವಿಗಳು ಒಂದು ಕಡೆ ಸೇರುವುದು ಎಂದಿ
ಗಿಂತಲೂ ಇಂದು ಅವಶ್ಯವಿದೆ, ಇಂಥದೊಂದು ಸಮ್ಮೇಳನಕ್ಕೆ ಕೂಡಲ ಸಂಗಮವು
ಸೂಕ್ತ ಸ್ಥಾನವಾಗುವುದೇ ಅಲ್ಲದೆ, ಮಕರ ಸಂಕ್ರಾಂತಿ ದಿನವೂ ಸುಯೋಗ್ಯ. ಬಸವ
ಜಯಂತಿಗೆ ಇಂಥ ಮೇಳವನ್ನಿಟ್ಟುದೇ ಆದರೆ ತಮ್ಮ ತಮ್ಮ ಊರುಗಳಲ್ಲಿ ಬಸವ
ಜಯಂತಿ ಆಚರಿಸುವ ಜನರಿಗೆ ಬರಲು ಅನಾನುಕೂಲವಾಗುವುದಷ್ಟೇ ಅಲ್ಲ ಸ್ಥಳೀಯ
ವಾಗಿ ನಡೆಯಬೇಕಾದ ಬಸವ ಜಯಂತಿಗಳು ನೀರಸಗೊಳ್ಳುವವು. ಶ್ರಾವಣ ಶುದ್ಧ
ಪಂಚಮಿ ಬಸವಣ್ಣನವರು ಲಿಂಗೈಕ್ಯರಾದ ದಿವಸ. ಅಂದು ಇಟ್ಟರೆ, ಅದು ಮಳೆ
ಗಾಲವಾದ್ದರಿಂದ, ಕೂಡಲ ಸಂಗಮದ ಭೂಮಿಯು ಎರೆಯ ಮಣ್ಣಿನ ಭೂಮಿ
ಯಾದ್ದರಿಂದ ಸಾಕಷ್ಟು ಕೆಸರಾಗಿ ನಡೆದಾಡಲು ಅನಾನುಕೂಲವಾಗುತ್ತದೆ.

ಬಸವಣ್ಣನವರು ಸಂಗಮನಾಥನ ವಾಣಿಯನ್ನು ಕೇಳಿದ ವಿಶೇಷ ದಿನವಾದ
ಸಂಕ್ರಾಂತಿಯು ಇಂತಹ ಶರಣ ಮೇಳದ ಸಮಾವೇಶಕ್ಕೆ ಸೂಕ್ತವಾದ ದಿನ. ಕೇವಲ
ತೀರ್ಥಸ್ನಾನ ಮಾಡಿದ ಮಾತ್ರಕ್ಕೇ ಪರಮ ಪುರುಷಾರ್ಥವೊಂದನ್ನು ಸಾಧಿಸಿದಂತಾಗು
ವುದೆಂಬ ನಂಬಿಕೆ ಇರುವ ಜನರಿಗೆ, ಜ್ಞಾನ ಸ್ನಾನ ಮಾಡುವ ಸದವಕಾಶವೂ ಶರಣ
ಮೇಳದಿಂದ ದೊರೆಯುವುದು, ಮಕರ ಸಂಕ್ರಾಂತಿಯು ತೀರಾ ಚಳಿಗಾಲವಲ್ಲದ,
ತೀವ್ರ ಬೇಸಿಗೆಯ ತಾಪವನ್ನೂ ಹೊಂದದ ಸೂಕ್ತವಾದ ಹವಾಮಾನವನ್ನು ಹೊಂದಿ
ರುವ ಕಾರಣ ಶರಣ ಮೇಳವನ್ನು ಸಂಕ್ರಾಂತಿಯಂದು ಸಂಯೋಜಿಸಲು ನಿರ್ಧರಿಸಲಾ
ಗಿಯಲ್ಲದೆ, ಅದು "ಬಸವ ಕ್ರಾಂತಿ ದಿನ"ವಾಗಿ ಆಚರಿಸಲ್ಪಡಲಿದೆ.

ಬೌದ್ಧರಿಗೆ ಬುದ್ಧಗಯೆ, ಸಿಖ್ಖರಿಗೆ ಅಮೃತಸರ, ಸಾಂಪ್ರದಾಯಿಕ ಹಿಂದು
ಗಳಿಗೆ ಕಾಶಿ, ಮುಸ್ಲೀಮರಿಗೆ ಮಕ್ಕಾ, ಕ್ರೈಸ್ತರಿಗೆ ಜೆರೂಸಲೆಮ್ ಇದ್ದಂತೆ ಬಸವ

ಧರ್ಮೀಯರಿಗೆ ಕೂಡಲ ಸಂಗಮ ಕ್ಷೇತ್ರವು ಬಹು ಮುಖ್ಯವಾದುದು. ಜಾತಿ ವರ್ಣ ವರ್ಗ ರಹಿತ ಸಮಾಜವನ್ನು ಅರ್ಥಾತ್ ಕಲ್ಯಾಣರಾಜ್ಯವನ್ನು ಕಟ್ಟಲು ವಿಶ್ವ ಗುರು ಬಸವಣ್ಣನವರು ಕರ್ತಾರನ ಕಮ್ಮಟವಾದ ಈ ಮರ್ತ್ಯಲೋಕದಲ್ಲಿ ಶ್ರಮಿಸಿದ್ದಾರೆ. ಆದ್ದರಿಂದ ಅವರ ಕನಸು, ಆಶೋತ್ತರ, ತತ್ತ್ವ, ಸಿದ್ಧಾಂತಗಳಿಗೆ ಮೂರ್ತರೂಪಕೊಡುವಂತೆ ಈ ಶರಣ ಮೇಳವು ಕಾರ್ಯಮಾಡುವುದವಶ್ಯವಿದೆ.

ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು "ಶರಣ ಮೇಳ"ದ ಕಾರ್ಯಕ್ರಮ ರೂಪುಗೊಳ್ಳಬೇಕಾಗಿದೆ. ಇದು ಯಾವುದಾದರೊಂದು ವ್ಯಕ್ತಿಯ, ಸಂಸ್ಥೆಯ ಸೀಮಿತ ಸಮ್ಮೇಳನವಾಗಿದೆ ಇಡೀ ಸಮಾಜದ ತತ್ತ್ವಾಭಿಮಾನಗಳನ್ನು ಒಂದೆಡೆ ಸೇರಿಸುವ "ಶರಣ ಸಂಗಮ"ವಾಗ ಬೇಕೆಂಬುದು ನಮ್ಮ ಹಂಬಲ. ಆದ್ದರಿಂದ ಸಮ್ಮೇಳನದ ಸಂಘಟನೆಗಾಗಿ ಇಡೀ ರಾಜ್ಯವನ್ನು ಪ್ರತಿನಿಧಿಸುವಂತೆ ಸಮಿತಿಯೊಂದನ್ನು ರಚಿಸಲಾಗುವುದು. ಈ ದಿಶೆಯಲ್ಲಿ ಸಲಹೆ-ಸೂಚನೆ ಕಳಿಸಲು, ತಮ್ಮ ಆಲೋಚನೆ-ಯೋಜನೆ ಮುಂದಿಡಲು ಎಲ್ಲರಿಗೂ ಅವಕಾಶವಿದೆ. ಪ್ರತಿಯೊಬ್ಬ ಚಿಂತನ ಶೀಲರೂ ತಮ್ಮ ವಿಚಾರಗಳೆನ್ನು ಬರೆದು ತಿಳಿಸಬಹುದು.

"ಶರಣ ಮೇಳ"ದಲ್ಲಿ ಯೋಜಿಸಲಿಸುವ ಕೆಲವು ಕಾರ್ಯಕ್ರಮ.

೧. ಮೇಳದ ಪ್ರಮುಖ ಅಂಗವಾಗಿ ಪ್ರಾರ್ಥನೆ,
೨. ಇದಕ್ಕೆ ಪೂರ್ವಭಾವಿಯಾಗಿ ಬೇರೆ ಬೇರೆ ಊರುಗಳಿಂದ "ಬಸವ ಜ್ಯೋತಿ"ಯನ್ನು ತಗೆದುಕೊಂಡು ಶರಣರು ಬರುವುದು. ಪಾದಯಾತ್ರೆಯ ಮುಖಾಂತರ ಬರುವ ತಂಡಗಳು ದಾರಿಯಲ್ಲಿ ಇಳಿದಲ್ಲೆಲ್ಲ ಭಜನೆ-ಪ್ರಾರ್ಥನೆ-ಪ್ರವಚನ-ವಚನ ಗಾಯನ ಮಾಡುತ್ತ ಬರುವುದು.
೩. ಶರಣರ ಬದುಕನ್ನು ಕುರಿತಾದ ಕೆಲವು ನಾಟಕ, ನೃತ್ಯನಾಟಕಗಳು.
೪. ಶರಣಧರ್ಮ ಕುರಿತಾದ ಸಾಹಿತ್ಯದ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆ.
೫. ಬಸವ ಕ್ರಾಂತಿ ದಿನ (ಮಕರ ಸಂಕ್ರಾತಿ)ದಂದು ನಡೆಯುವ ಶರಣ ಮೇಳಕ್ಕೆ ಪೂರ್ವಭಾವಿಯಾಗಿ "ಜ್ಞಾನದಾಸೋಹ" ಸಪ್ತಾಹ.

ಹೀಗೆ ಹಲವಾರು ಕಾರ್ಯಕ್ರಮ ರೂಪಿಸಲಿರುವ ಕಾರಣ ಸಹೃದಯರು, ಸದ್ಭಕ್ತರು ತಮ್ಮ ವಿಚಾರಗಳನ್ನು ಬರೆದು ಕಳಿಸಬಹುದು.

ದಕ್ಷಿಣ ಕರ್ನಾಟಕದ ಮೈಸೂರಿನಲ್ಲಿ ನಡೆಯುವ ನಾಡ ಹಬ್ಬ ದಸರಾ ಉತ್ಸವದಂತೆ ಉತ್ತರ ಕರ್ನಾಟಕಕ್ಕೊಂದು ನಾಡಹಬ್ಬ ಆಗುವುದು ಅವಶ್ಯವಿದೆ. ಬಸವ ಕ್ರಾಂತಿಯ ದಿನದಂದು ಅಂಥದೊಂದು ನಾಡಹಬ್ಬದ ರೂಪುರೇಷೆ ಹಾಕಬೇಕೆಂದು ಸರ್ಕಾರವನ್ನು ಕೋರಬೇಕೆಂಬ ಆಲೋಚನೆಯೂ ಇದೆ. "ಶರಣ ಮೇಳ" ಒಂದು ಯಶಸ್ವಿ ಕಾರ್ಯಕ್ರಮವಾಗುವಂತೆ ನಾವು-ನೀವೆಲ್ಲ ದುಡಿಯೋಣವಲ್ಲವೆ ?

—ಮಾತಾಜಿ

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ಬಸವ ಧರ್ಮ ಪೀಠ (ಟ್ರಸ್ಟ್)

ಒಂದು ಕುಟುಂಬ, ಆ ಕುಟುಂಬದ ತಾಯಿ-ತಂದೆಯರಿಗೆ ಹಲವಾರು ಮಕ್ಕಳು. ಅವರೆಲ್ಲ ವಿದ್ಯಾಬುದ್ಧಿ ಕಲಿತು ಉನ್ನತ ಅಧಿಕಾರ ಹೊಂದಿ, ಅಪಾರ ಸಂಪತ್ತುಗಳಿಸಿ ಸುಖವಾಗಿ ವೈಭವದಿಂದ ಬೇರೆ ಬೇರೆ ಕಡೆ ಬಾಳುತ್ತಿದ್ದಾರೆ. ಆದರೊಂದು ಅಚಾತುರ್ಯ ನಡೆದು ಹೋಗಿದೆ. ತಾಯಿ-ತಂದೆಯರ ಕಷ್ಟಸುಖವನ್ನು ಮಕ್ಕಳು ಗಮನಿಸಿಯೇ ಇಲ್ಲ. ಅವರ ಪರಿಸ್ಥಿತಿ ಏನಾಗಿದೆ ಚಿಂತಿಸಿಯೇ ಇಲ್ಲ. ಸರಿ, ರಜಾ ಕಾಲದಲ್ಲಿ ಮೊಮ್ಮಕ್ಕಳು ಅಜ್ಜ-ಅಜ್ಜಿಯರನ್ನು ನೋಡುವ ಕುತೂಹಲದಿಂದ ಊರಿಗೆ ಹೋಗಿದ್ದಾರೆ. ಜೀರ್ಣಾವಸ್ಥೆಯಲ್ಲಿರುವ ಅವರನ್ನು ಕಂಡು ತಲ್ಲಣಗೊಂಡಿದ್ದಾರೆ. ಇಷ್ಟು ದಿವಸಗಳ ಕಾಲ ನಿರ್ಲಕ್ಷ್ಯ ತೋರಿದುದಕ್ಕೆ ಪಶ್ಚಾತ್ತಾಪ ಪಡುತ್ತಾರೆ. ಕರ್ತವ್ಯ ಚ್ಯುತಿಯಾದುದಕ್ಕೆ ಪರಿತಾಪ ಪಡುತ್ತಾರೆ. ರಕ್ಷಣೆಯ ಕರ್ತವ್ಯ ಕೈಗೊಳ್ಳುತ್ತಾರೆ. ಚಿಂತೆಯಿಲ್ಲ ಕಥೆಯು ದುಃಖಾಂತ್ಯವಾಗಲಿಲ್ಲ; ಸುಖಾಂತ್ಯವಾಯಿತಷ್ಟೆ.

ಹೀಗೇ ಇದೆ ಕೂಡಲ ಸಂಗಮ ಕ್ಷೇತ್ರದ ಕಥೆ. ಧರ್ಮಗುರು ಬಸವಣ್ಣನ ವಿದ್ಯಾಭೂಮಿ, ತಪೋಭೂಮಿ, ಐಕ್ಯಭೂಮಿಯಾದ, ಸುಪ್ರಸಿದ್ಧ ಶೈವ ಸಂಸ್ಕೃತಿಯ ಚಾರಿತ್ರಿಕ ಸ್ಥಾನ ಸಂಗಮ ಕ್ಷೇತ್ರ ಇಂದು ಜೀರ್ಣಾವಸ್ಥೆಯಲ್ಲಿದೆ. ಯಾಕೆ ಹೀಗಾಯಿತು ? ಅದರ ಮಹತ್ವವನ್ನು ನಮಗೆ ಯಾರೂ ಹೇಳಿಕೊಡಲಿಲ್ಲ, ನಾವು ನಾವೇ ಇತಿಹಾಸದ ಪುಟಗಳಿಂದ ಹೆಕ್ಕಿ ತೆಗೆದು ಅದರ ಮಹತ್ವವನ್ನರಿಯಬೇಕಾಯಿತು.

ಕಳೆದ ವರ್ಷದ ಜುಲೈದಲ್ಲಿ ಕೂಡಲ ಸಂಗಮಕ್ಕೆ ಹೋದಾಗ ಅಂತರಂಗದಲ್ಲಿ ಏನೋ ತುಡಿತ, ಮಿಡಿತ ಪ್ರಾರಂಭವಾಯಿತು. 'ನಮ್ಮ ಸಮಾಜ ಬಹುದೊಡ್ಡ ತಪ್ಪು ಮಾಡಿದೆ.' ಎಂಬ ಭಾವ ಮೂಡಿತು. ಎಂಟುನೂರು ವರ್ಷಗಳ ಅವಧಿಯಲ್ಲಿ ನಮ್ಮ ಧರ್ಮಗುರು ಪಾದವಿಟ್ಟು, ಸಂದೇಶ ಬೀರಿದ ಮಹಾನ್ ತಾಣವೊಂದನ್ನು ಸೂಕ್ತವಾಗಿ ರಕ್ಷಿಸಿಕೊಂಡು ಬರಲಾಗಿಲ್ಲ ಎಂಬ 'ಪಾಪ ಪ್ರಜ್ಞೆ' ಕಾಡತೊಡಗಿತು. ಏನು ಮಾಡುವುದು ? ಹೇಗೆ ನಮ್ಮ ಕರ್ತವ್ಯ ಸಲ್ಲಿಸುವುದು ಎಂದು ಚಿಂತಿಸತೊಡಗಿದೆವು.

ಸಾಮೂಹಿಕ ಪ್ರಯತ್ನವನ್ನಾದರೂ ಮಾಡಿದರೆ ಹೇಗೆ ? ನಮ್ಮ ಶಕ್ತಿ ಸೀಮಿತ; ಆರ್ಥಿಕವಾಗಿ ನಾವು ಕೋಟ್ಯಾಧಿಪತಿಗಳಲ್ಲ. ಬಲವಾದ ಆದಾಯ ಮೂಲವೂ ಇಲ್ಲ. ಇದನ್ನೆಲ್ಲ ಗಮನದಲ್ಲಿರಿಸಿಕೊಂಡು 1987 ಮೇ ತಿಂಗಳ ಕಲ್ಯಾಣ ಕಿರಣದಲ್ಲಿ 'ಬಸವ ಧರ್ಮ ಪೀಠ' ಕುರಿತು ಸಂಪಾದಕೀಯ ಲೇಖನ ಬರೆದೆ. ತಾವೆಲ್ಲ ಗಮನಿಸಿರುವಿರಿ ಎಂದು ಕೊಂಡಿದ್ದೇನೆ. ಈ ಬಗ್ಗೆ ಹಲವರೊಡನೆ ಸಮಾಲೋಚನೆ ಮಾಡಿದ್ದೇವೆ.

ಸಮಾಜದ ಮುಖಂಡರೂ, ಹಿತ ಚಿಂತಕರೂ ಆದ ಶ್ರೀ ಐ. ಎಂ. ಮಗದುಮ್, ಶ್ರೀ ಡಿ. ಎಂ. ಚಂದ್ರಶೇಖರ ಮುಂತಾದವರೊಡನೆ ಈ ಬಗ್ಗೆ ವಿವರವಾಗಿ ಚರ್ಚಿಸಿದಾಗ ಅವರುಗಳು ಒಂದು ಸಲಹೆ ಮುಂದಿಟ್ಟರು. "ಬಸವ ತತ್ತ್ವದ ಆಧಾರದ ಮೇಲೆ ಕಟ್ಟಲ್ಪಡುವ ಬಸವ ಧರ್ಮ ಪೀಠದ ರೂಪುರೇಷೆ ಸಿದ್ಧಪಡಿಸಿ, ನಿಯಾಮಾವಳಿ ರೂಪಿಸಿ ಕನಿಷ್ಟ ಮೂರು ಸದಸ್ಯರೊಡನೆ ಆರಂಭಿಸಿರಿ. ಸಮಯ ಬಹಳ ಅಮೂಲ್ಯ. ಬರೀ ಚರ್ಚೆಯಲ್ಲಿ ಸಮಯವು ಹರಣವಾಗುವುದು ಬೇಡ. ಷಟಸ್ಥಲದ ಸಂಕೇತವಾಗಿ ಆರು ಜನರನ್ನು ಸದಸ್ಯರನ್ನಾಗಿ ಹೊಂದುವ ಹಂಬಲವಿದೆಯಷ್ಟೆ. ಕೆಲಸ ಮಾಡಲು ಅವಶ್ಯವಿರುವ ಸದಸ್ಯರೊಡನೆ ಟ್ರಸ್ಟನ್ನು ಆರಂಭಿಸಿ, ಉಳಿದ ಸ್ಥಾನಗಳಿಗೆ ತತ್ತ್ವನಿಷ್ಠರಾದ ಪೀಠಾಧಿಪತಿಗಳನ್ನು ಹೊಂದಲು ಅವಕಾಶವಿಡಿರಿ, ನಿಯಮಾವಳಿಯನ್ನು ಓದಿ, ಒಪ್ಪಿ, ಸ್ವಯಂ ಸಂತೋಷದಿಂದ ಮುಂದೆ ಬರುವವರನ್ನು ತೆರವಾಗಿರುವ ಸ್ಥಾನಗಳಿಗೆ ತೆಗೆದುಕೊಳ್ಳಿರಿ, ಈ ಪ್ರಾಯೋಗಿಕ ಸಲಹೆ ಸರಿ ಕಂಡಿತು. 23-7-1987ರಂದು ಬಸವ ಧರ್ಮ ಪೀಠ ಟ್ರಸ್ಟ್ ಸಾಂಕೇತಿಕವಾಗಿ ರೂಪುಗೊಂಡು, 30-7-1987ರ ಬಸವ ಪಂಚಮಿಯಂದು ನೊಂದಾಯಿಸಲ್ಪಟ್ಟಿದೆ.

ಇದೀಗ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳನ್ನು ಗೌರವಾಧ್ಯಕ್ಷರನ್ನಾಗಿಯೂ, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಕಾರ್ಯಾಧ್ಯಕ್ಷೆಯನ್ನಾಗಿಯೂ ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನು ಸದಸ್ಯರನ್ನಾಗಿಯೂ ಪಡೆದ ಟ್ರಸ್ಟ್ ಕಾರ್ಯಾರಂಭಮಾಡಿದೆ. "ಬಸವ ಧರ್ಮ ಪೀಠ"ವು ಕೂಡಲ ಸಂಗಮ ಸುಕ್ಷೇತ್ರದಲ್ಲಿ ಸುಮಾರು ಐದು ಎಕರೆ ಜಮೀನನ್ನು ಖರೀದಿಸಿದ್ದು, ದಿ. 23-7-1987ರಂದು ಒಂದು ಸುಂದರವಾದ ನಾಮಫಲಕವನ್ನೂ ಹಾಕಿಸಿಕೊಂಡಿತು. ದಿ. 30-7-1987ರ ಬಸವ ಪಂಚಮಿಯಂದು ಆ ಜಮೀನಿನಲ್ಲಿ ಇಷ್ಟಲಿಂಗಪೂಜೆ, ಬಸವೇಶ್ವರ ಪೂಜಾವ್ರತ, ಲಿಂಗದೀಕ್ಷೆ, ಮಾತೆ ಬಸವಾಂಬಿಕೆ ಅವರಿಗೆ ಜಂಗಮದೀಕ್ಷೆ ಮುಂತಾಗಿ ನೆರವೇರಿದುವಲ್ಲದೆ ಸುಮಾರು 200 ಜನರಿಗೆ ಅನ್ನದಾಸೋಹವೂ ನೆರವೇರಿತು.

ಬಸವ ಧರ್ಮ ಪೀಠವು ಅತ್ಯಂತ ಮಹತ್ವಪೂರ್ಣ ಉದ್ದೇಶಗಳನ್ನು ಹೊಂದಿದೆ. ಅವುಗಳಲ್ಲಿ ಪ್ರಮುಖವಾದ ಕೆಲವು ಹೀಗಿವೆ.

೧. ಸಮಾಜ ಮತ್ತು ತತ್ತ್ವಗಳ ಶುದ್ಧೀಕರಣ ಮತ್ತು ನವೀಕರಣ ಮಾಡುವುದು.

೨. ಪ್ರಾರ್ಥನಾ ಮಂದಿರ ಮತ್ತು ಶಿಬಿರಗಳ ಮೂಲಕ ಜನರಿಗೆ ಸಂಸ್ಕಾರ ನೀಡುವುದು.

೩. ನಾಡಿನಾದ್ಯಂತ ಪ್ರಾರ್ಥನಾ ಮಂದಿರ ರಚನೆ, ಪ್ರಾರ್ಥನಾ ಕೂಟಗಳ ಸಂಘಟನೆ.

೪. ಶರಣರ ಗದ್ದುಗೆ, ಚಾರಿತ್ರಿಕ ಸ್ಥಾನಗಳ ಸಂರಕ್ಷಣೆ ಮತ್ತು ಅಭಿವೃದ್ಧಿ.

೫. ರಾಷ್ಟ್ರೀಯ ಬಸವ ದಳಗಳ ಮುಖಾಂತರ ರಾಷ್ಟ್ರಾಭಿಮಾನ ಮತ್ತು ಆಧ್ಯಾತ್ಮಿಕ ಪ್ರಜ್ಞೆ ಬೆಳೆಸುವುದು.

೬. ಧರ್ಮ ಬೋಧಕರ ತರಬೇತಿ.

೭. ವಿವಾಹ ವಿಧಿ, ನಾಮಕರಣ, ದೀಕ್ಷಾ ಸಂಸ್ಕಾರ, ಗೃಹಪ್ರವೇಶ, ಶವ ಸಂಸ್ಕಾರ ಮುಂತಾದ ಕ್ರಿಯೆಗಳನ್ನು ಮಾಡುವ ಅರ್ಚಕರನ್ನು ತರಬೇತಿಗೊಳಿಸುವುದು.

ಈ ಮುಂತಾಗಿ ಹಲವಾರು ಉದ್ದೇಶಗಳನ್ನು ಬಸವ ಧರ್ಮಪೀಠವು ಹೊಂದಿದೆ, ತನ್ನ ಕಣ್ಣೆದುರಿಗೆ ಮಹತ್ವಪೂರ್ಣವಾದ ಕೆಲವು ಯೋಜನೆಗಳನ್ನು ಇರಿಸಿಕೊಂಡಿದೆ.

ಮಹಾಮನೆ ಸಂಕೀರ್ಣ

ಕೂಡಲ ಸಂಗಮ ಸುಕ್ಷೇತ್ರದಲ್ಲಿ ಹಲವಾರು ಕಟ್ಟಡಗಳನ್ನು ಒಳಗೊಂಡ ಮಹಾಮನೆ ಸಂಕೀರ್ಣವೊಂದನ್ನು ರೂಪಿಸಲಾಗುವುದು, "ಮಹಾಮನೆ" ಅರ್ಥವತ್ತಾದ ಪದ. ಇದನ್ನು ಬಳಸಿಕೊಂಡು ಇಂದಿನ ಆಧುನಿಕ ಯುಗದಲ್ಲಿ ಆಧ್ಯಾತ್ಮಿಕ ವಿಶ್ವವಿದ್ಯಾಲಯವಾಗುವಂತ, ಬಸವಣ್ಣನವರ ಆಶೋತ್ತರಗಳ ಪ್ರತಿರೂಪವಾಗಿ "ಮಹಾಮನೆ" ರೂಪುಗೊಳ್ಳುವುದು. ಮಹಾಮನೆಯ ಆವರಣದಲ್ಲಿ ನಿರ್ಮಾಣವಾಗಲಿರುವ ಕೆಲವು ಕಟ್ಟಡಗಳು.

1. ಬಸವ ಮಂಟಪ : ಕೇಂದ್ರ ಮುಖ್ಯ ಸಭಾ ಮಂಟಪ.

೨. ಅಕ್ಕ ನಾಗಲಾಂಬಿಕಾ ಪ್ರವಾಸಿ ಧಾಮ : ವಿವಿಧ ಸ್ಥಳಗಳಿಂದ ಭಕ್ತರು, ಯಾತ್ರಾರ್ಥಿಗಳು ಬಂದಾಗ ಅವರಿಗೆ ಉಳಿದುಕೊಳ್ಳಲು ವಸತಿ ಕೊಠಡಿಗಳ ಸಮುಚ್ಚಯ.

೩. ನೀಲಾಂಬಿಕಾದೇವಿ ದಾಸೋಹ ನಿಲಯ : ಬರುವ ಭಕ್ತರು ಮತ್ತು ಯಾತ್ರಾರ್ಥಿಗಳಿಗಾಗಿ ಊಟೋಪಚಾರದ ವ್ಯವಸ್ಥೆ ಮಾಡುವ ಗೃಹ ಮತ್ತು ದಾಸೋಹಶಾಲೆ

೪. ವಿಶ್ವಶಾಂತಿ ಗೋಪುರ : (ಸಮುದಾಯ ಪ್ರಾರ್ಥನಾ ವೇದಿಕೆ) ಶರಣಮೇಳದ ಕಾಲದಲ್ಲಿ ನೆರೆದ ಜನರು ಸಾಮೂಹಿಕವಾಗಿ ಪ್ರಾರ್ಥಿಸಲು ಅನುಕೂಲವಾಗುವಂತೆ ಸಮತಟ್ಟಾದ ಮೈದಾನ ಮತ್ತು ಮಾಡಿಸುವವರಿಗೆ "ವಿಶ್ವಶಾಂತಿ ಗೋಪುರ" ಎಂಬ ವೇದಿಕೆ.

೫. ಚನ್ನಬಸವೇಶ್ವರ ಜ್ಞಾನ ಮಂಟಪ : ವಿಶ್ವಕಲ್ಯಾಣ ಮಿರ್ಷ ಸಂಸ್ಥೆಯೇ ಅಲ್ಲದೆ ಬೇರೆ ಮಠಮಾನ್ಯಗಳವರು, ಸಂಘ-ಸಂಸ್ಥೆಗಳವರು ಪ್ರಕಟಿಸಿರುವ ಧಾರ್ಮಿಕ ಸಾಹಿತ್ಯದ ಪ್ರದರ್ಶನ ಮತ್ತು ಮಾರಾಟ ಮಳಿಗೆ.

೬. ಶ್ರೀ ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ : ಧರ್ಮಬೋಧಕರ ತರಬೇತಿ ವಿದ್ಯಾಲಯ.

೭. ಕಲ್ಯಾಣ ಮಂಟಪ : ಸುಕ್ಷೇತ್ರದಲ್ಲಿ ಮದುವೆ ಮಾಡಲು, ಮಾಡಿಸಿಕೊಳ್ಳಲು ಇಷ್ಟಪಡುವವರಿಗಾಗಿ ಕಲ್ಯಾಣ ಮಂಟಪ.

೮. ವಸ್ತು ಸಂಗ್ರಹಾಲಯ : ಶರಣ ಧರ್ಮ-ಸಂಸ್ಕೃತಿಗೆ, ಶರಣರ ಬದುಕಿಗೆ ಸಂಬಂಧ ಪಟ್ಟಂತೆ ವಸ್ತುಗಳನ್ನು, ತಾಡವೋಲೆಗಳನ್ನು ಸಂಗ್ರಹಿಸುವ ವಸ್ತು ಸಂಗ್ರಹಾಲಯ.

೯, ಲಿಂಗೈಕ್ಯ ಬಯಲು : ಇದೊಂದು ಅಭೂತಪೂರ್ವ ಯೋಜನೆ. ಅನೇಕ ಶರಣರು, ಸದ್ಭಕ್ತರಿಗೆ ತಮ್ಮ ಸಾವಾದಾಗ ಸುಕ್ಷೇತ್ರಗಳಲ್ಲಿ ಸಮಾಧಿ ಮಾಡಿಸಿಕೊಳ್ಳಬೇಕೆಂಬ ಅಪೇಕ್ಷೆ ಇರುತ್ತದೆ. ಅಂಥವರಿಗೆ ವಿಶಿಷ್ಟ ಮೊತ್ತದ ಹಣವನ್ನು ನಿಗದಿ ಪಡಿಸಿ ಆ ಹಣವನ್ನು ಮುಂಗಡವಾಗಿ ಪಡೆದು, ಅವರ ಹೆಸರಿನಲ್ಲಿ ಇಟ್ಟುಕೊಂಡು ಅವರ ಸಾವಾದಾಗ ಸಂಬಂಧ ಪಟ್ಟವರು ಶವವನ್ನು ತಂದುಕೊಟ್ಟರೆ ಅಥವಾ ಶವವನ್ನು ತರಿಸಿಕೊಳ್ಳು ವ್ಯವಸ್ಥೆಯನ್ನೂ ಮಾಡಿ ವಿದ್ಯುಕ್ತವಾಗಿ ಸಮಾಧಿ ಕ್ರಿಯೆಯನ್ನು ನೆರವೇರಿಸುವುದಲ್ಲದೆ, ಅವರು ಮೊದಲೇ ಬಯಸಿದಂತಹ ಸಮಾಧಿಯನ್ನು, ಸಮಾಧಿ ಮಂಟಪವನ್ನು ಕಟ್ಟಿಸುವುದು. ಮತ್ತು ಲಿಂಗೈಕ್ಯರ ಹೆಸರಿನಲ್ಲಿ ಗಣಾರಾಧನೆ ಮಾಡಿ ಅವರ ಹೆಸರಿನಲ್ಲಿ ದಾಸೋಹ ಮಾಡುವುದು. ಅವರ ಇಷ್ಟದಂತೆ ಸಾವಿನ ನಂತರ ಒಂದು ಸಲವಾಗಲೀ ಅಥವಾ ಪ್ರತಿವರ್ಷವೂ ನಿರಂತರವಾಗಿಯಾಗಲೀ ದಾಸೋಹ ಏರ್ಪಡಿಸುವುದು.

ಈ ಮುಂತಾಗಿ ಇನ್ನೂ ಹಲವು ಯೋಜನೆಗಳಿವೆ.

ಬಸವ ಧರ್ಮ ಪೀಠಾಧಿಕಾರಿಗಳಿಗೆ ಕೆಲವು ಅರ್ಹತೆಗಳಿರಬೇಕು; ಕೆಲವು ವಿಚಾರಗಳಲ್ಲಿ ಅವರಿಗೆ ದೃಢವಾದ ನಂಬಿಕೆ ಇರಬೇಕು. ಅದೇ ರೀತಿ ಅಧಿಕಾರದ ವಿಧಿವಿಧಾನಗಳ ವಿಷಯದಲ್ಲಿಯೂ ಕೆಲವು ನಿಯಮಗಳು, ಸೂಚನೆಗಳು ಇವೆ. ಬಸವ ಧರ್ಮದ ಪೀಠಾಧಿಕಾರಿಯಾಗಲಿಕ್ಕೆ ಜಾತಿಯು ಅರ್ಹತೆಯಲ್ಲ; ತತ್ತ್ವ, ನಂಬಿಗೆ ಮತ್ತು ಸಾಧನೆಗಳು ಅಳತೆಗೋಲಾಗುವುವು.

ಈ ಸದ್ಯದಲ್ಲಿ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು, ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರನ್ನೊಳಗೊಂಡು ಮೂವರು ಸದಸ್ಯರೊಡನೆ "ಬಸವ ಧರ್ಮ ಪೀಠ" ಟ್ರಸ್ಟ್ ಮುಂಬಯಿಯ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾಯಿಸಲ್ಪಟ್ಟಿದೆ. ಇನ್ನು ಮೂವರು ಸದಸ್ಯರಿಗಾಗಿ ಕಾಯುತ್ತಲಿದೆ. ಟ್ರಸ್ಟಿನ ನಿಯಮಾವಳಿ, ಉದ್ದೇಶ, ಯೋಜನೆಗಳನ್ನು ಹಲವರು ಮಠಾಧಿಕಾರಿಗಳ ಮುಂದೆ ಇಡಲಾಗುವುದು. ಸ್ವಯಂ ಇಚ್ಛೆ

ಯಿಂದ ಸದಸ್ಯತ್ವ ಬಯಸುವವರನ್ನು ಹಾರ್ದಿಕವಾಗಿ ಬರಮಾಡಿಕೊಳ್ಳಲಾಗುವುದು. ಈ ರೀತಿ ಮಾಡಿರುವ ಉದ್ದೇಶವೆಂದರೆ ಬಸವ ತತ್ತ್ವಕ್ಕೆ ಚ್ಯುತಿ ಬರದಂತೆ ಈ ಸಂಸ್ಥೆ ಕಾರ್ಯ ಮಾಡಬೇಕೆಂಬುದು.

ಆತ್ಮೀಯ ಸಹೃದಯರೇ,

ಬಸವ ಧರ್ಮ ಪೀಠವು 30-7-1987 ರ ಬಸವ ಪಂಚಮಿ (ಬಸವ ಲಿಂಗೈಕ್ಯ ದಿನ) ಯಂದು ಸಾಂಕೇತಿಕವಾಗಿ ಜನ್ಮತಾಳಿದೆ. ಇನ್ನದನ್ನು ಲಾಲಿಸಿ, ಪಾಲಿಸಿ, ಪೋಷಿಸುವ ಹೊಣೆ ತಮ್ಮದು. ಸಂಗಮದಲ್ಲಿ ಖರೀದಿ ಮಾಡಿರುವ ಜಮೀನಿನಲ್ಲಿ ಆದಷ್ಟು ಬೇಗನೆ 'ಬಸವೇಶ್ವರ ಪೂಜಾ ಮಂಟಪ', 'ನೀಲಾಂಬಿಕಾ ದೇವಿ ದಾಸೋಹ ನಿಲಯ', 'ಅಕ್ಕನಾಗಲಾಂಬಿಕಾ ಪ್ರವಾಸಿಧಾಮ', 'ಚನ್ನಬಸವೇಶ್ವರ ಜ್ಞಾನ ಮಂಟಪ' ಇವುಗಳ ಕಟ್ಟಡಗಳನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ಕಾರ್ಯಾರಂಭ ಮಾಡುತ್ತಲಿದ್ದೇವೆ. ಆದ್ದರಿದ ಅವರವರ ಶಕ್ತ್ಯಾನುಸಾರ ನೀವುಗಳು ಧನ ಸಹಾಯವನ್ನು ಮಾಡಬಹುದು.

೧. ಹೆಚ್ಚಿನ ಪ್ರಮಾಣದಲ್ಲಿ ಅಂದರೆ ೧ ಲಕ್ಷ ರೂ ಗಳ ಮೇಲೆ ಧನ ಸಹಾಯ ಮಾಡುವವರ ಹೆಸರಿನಲ್ಲಿ ಪ್ರವಾಸಿ ಧಾಮದ ಬೇರೆ ಬೇರೆ ಬ್ಲಾಕುಗಳನ್ನು ಕಟ್ಟಿಸಲಾಗುತ್ತದೆ.

೨. ಕುಟುಂಬ ಗೃಹಗಳ ನಿರ್ಮಾಣಕ್ಕೆ 50,000-00 (ವಾಸದ ಕೋಣೆ, ಶೌಚಾಲಯ-ಸ್ನಾನ ಗೃಹ, ಅಡಿಗೆ ಕೋಣೆ ಸೇರಿ)

೩. ಡಬ್ಬಲ್ ಕೋಣೆ (ಶೌಚಾಲಯ-ಸ್ನಾನ ಗೃಹಗಳೊಡನೆ)ಗೆ 25000-00ರೂಪಾಯಿ.

೪. ಸಿಂಗಲ್ ಕೋಣೆ (ಶೌಚಾಲಯ-ಸ್ನಾನ ಗೃಹಗಳೊಡನೆ)ಗೆ 15000-00ರೂಪಾಯಿ.

೫. ಸಿಂಗಲ್ ಕೋಣೆ (ಸಾಮೂಹಿಕ ಶೌಚಾಲಯ-ಸ್ನಾನ ಗೃಹಗಳೊಡನೆ)ಗೆ 11000-00 ರೂಪಾಯಿ.

ಈ ರೀತಿ ಕೊಟ್ಟವರ ಹೆಸರುಗಳನ್ನು ಕೆತ್ತಿಸಿ ಆಯಾ ಕೋಣೆಗಳ ಮುಂದೆ ಶಿಲಾ ಫಲಕಗಳನ್ನು ಹಾಕಿಸಲಾಗುವುದು. 1001 ರಿಂದ 10,000-00 ರೂಪಾಯಿಗಳ ವರೆಗೆ ಕೊಟ್ಟವರಿಗೆ ಕೇಂದ್ರ ಸಭಾಭವನದಲ್ಲಿ ಹಾಕಲಾಗುವ ಸಾಮೂಹಿಕ ನಾಮ ಫಲಕದಲ್ಲಿ ಹೆಸರನ್ನು ಬರೆಸಲಾಗುವುದು.

ದಾಸೋಹ ನಿಧಿಗೆ ೧೧೧೧-೦೦ ರೂ ಗಳನ್ನು ಕೊಟ್ಟರೆ ಆ ಹಣವನ್ನು ಪುದು ವಟ್ಟಾಗಿ(F. D) ಇಟ್ಟು ಅದರ ಬಡ್ಡಿಯಲ್ಲಿ ನಿತ್ಯ ದಾಸೋಹವನ್ನು ನಡೆಸಲಾಗುವುದು.

ದಾಸೋಹ ಕಾರ್ಯಕ್ಕಾಗಿ ದವಸ ಧಾನ್ಯಗಳನ್ನು ಸಲ್ಲಿಸುವವರೂ ಶಕ್ಯವಿದ್ದಷ್ಟು ಕೊಡಬಹುದು. ಮತ್ತು ಪಾತ್ರೆ ಪಡಗಗಳನ್ನು ಕೊಡುವವರೂ ಕೊಡಬಹುದು.

ಬೆಂಗಳೂರಿನ ರಾಜಾಜಿನಗರದ ಬಸವ ಮಂಟಪದಲ್ಲಿ ಆರಂಭಿಸಿರುವಂತೆ ಶ್ರೀ ಬಸವೇಶ್ವರ ಪೂಜಾ ನಿಧಿಗಾಗಿ, ಸುಕ್ಷೇತ್ರ ಸಂಗಮದಲ್ಲಿ ಪೂಜೆ ನೆರವೇರಿಸಲು 501-00 ರೂ. ಗಳನ್ನು ಸಂಗ್ರಹಿಸುತ್ತಿದ್ದು, ಅದರ ಬಡ್ಡಿ ಹಣದಲ್ಲಿ ದಾನಿಗಳ ಹೆಸರಿನಲ್ಲಿ ಪೂಜೆಯನ್ನು ನೆರವೇರಿಸಲಾಗುವುದು.

ಬಸವ ಧರ್ಮಪೀಠದ ಆಜೀವ ಸದಸ್ಯತ್ವವೆಂದು ೧೦೦೧-೦೦ ರೂಗಳನ್ನು ನಿಗದಿ ಪಡಿಸಲಾಗಿದೆ. ದಾನಿಗಳು ಅವರವರ ಶಕ್ತ್ಯಾನುಸಾರ, ಭಕ್ತಿಗೆ ಅನುಗುಣವಾಗಿ ಹಣವನ್ನು ಕಳಿಸಬಹುದು.

ಧರ್ಮಕ್ಷೇತ್ರದ ಅಭಿವೃದ್ಧಿಗಾಗಿ ಮುಡಿಪು

ಇಂದು ನಮ್ಮ-ನಿಮ್ಮೆಲ್ಲರ ಮೇಲೆ ಬಹುದೊಡ್ಡ ಹೊಣೆ ಬಿದ್ದಿದೆ. ಜಗತ್ತಿಗೆ ಸಮತಾವಾದದ ಸಂದೇಶವನ್ನು ಸಾರಿದ, 'ದೇವನೊಬ್ಬನೇ ತಂದೆ, ಮನುಜರೆಲ್ಲರು ಒಂದೆ.' 'ಅರಿದೊಡೆ ಶರಣ, ಮರೆದೊಡೆ ಮಾನವ' ಎಂದು ಅರ್ಹತಾ ಪರಂಪರೆಯನ್ನು ಎತ್ತಿ ಹಿಡಿದ ಬಸವ ಸಂಸ್ಕೃತಿಯ ಬೀಡನ್ನಾಗಿ ಕೂಡಲ ಸಂಗಮವನ್ನಿಂದು ಬೆಳೆಸಿ, ರೂಪಿಸಿ ಭಾವೀಜನಾಂಗಕ್ಕೆ ಕೊಟ್ಟು ಹೋಗಬೇಕಾಗಿದೆ. ಈ ಮಹಾನ್ ಕಾರ್ಯಕ್ಕಾಗಿ ನಮ್ಮನ್ನು ನಾವಿಂದು ಸಮರ್ಪಿಸಿಕೊಂಡು ದುಡಿಯಬೇಕಾಗಿದೆ. ಅದಕ್ಕಾಗಿ ನಿಮ್ಮೆಲ್ಲರ ಮನೆಗಳ ಪೂಜಾ ಮಂದಿರಗಳಲ್ಲಿ, ಟ್ರೆಜರಿಗಳಲ್ಲಿ ಮುಡಿಪಿನ ಡಬ್ಬಿ ಸ್ಥಾನವನ್ನಲಂಕರಿಸಲಿ. ನಿಮಗೆ ಅನುಕೂಲವಾದಷ್ಟನ್ನು ಭಕ್ತಿ ತುಂಬಿ ಮೀಸಲಿರಿಸಿ, ಮುಡುಪಿನ ಪೆಟ್ಟಿಗೆಯಲ್ಲಿ ಶೇಖರಿಸಿರಿ. ತನು ದಾಸೋಹ, ಮನ ದಾಸೋಹ, ಧನ ದಾಸೋಹ ಈ ಮೂರರಿಂದಲೂ ಸಂಗಮಕ್ಷೇತ್ರವನ್ನು ಕಟ್ಟೋಣ; ಶರಣ ತತ್ತ್ವ ಸೌರಭ ಅಲ್ಲಿಂದ ಹರಡುವಂತೆ ಶ್ರಮಿಸೋಣ. ನಿಮ್ಮ ಮುಡುಪಿನ ಹಣವನ್ನು 'ಶರಣ ಮೇಳ' ದ ಸಮಯದಲ್ಲಿ ಸಮರ್ಪಿಸಲು ನಿಶ್ಚಯಿಸಿ ಸಂಗ್ರಹಿಸಲು ಆರಂಭಿಸಿರಿ.

ಮನಿಯಾರ್ಡರ್, ಚೆಕ್ಕು, ಡ್ರಾಫ್ಟ್ ಯಾವುದೇ ರೀತಿಯಲ್ಲಿ ಕಳಿಸಬೇಕೆನ್ನುವವರು ಈ ವಿಳಾಸಕ್ಕೆ ಕಳಿಸಿಕೊಡಿರಿ.

ಕಾರ್ಯಾಧ್ಯಕ್ಷರು, ಬಸವ ಧರ್ಮ ಪೀಠ
"ಮಹಾಮನೆ ಸಂಕೀರ್ಣ", ಕೂಡಲ ಸಂಗಮ-587141
ತಾ||ಹುನಗುಂದ, ಜಿಲ್ಲ||ಬಿಜಾಪುರ

ಕೆಲವು ವಿಶೇಷ ಸೂಚನೆಗಳು

ಬಸವ ಧರ್ಮ ಪೀಠದ ಆಶ್ರಯದಲ್ಲಿ ಸ್ವಂತ ಕಟ್ಟಡ ಕಟ್ಟಿ, ಆದಷ್ಟು ತೀವ್ರವಾಗಿ ದಾಸೋಹ ಕಾರ್ಯವನ್ನು ಆರಂಭಿಸಲು ಪ್ರಯತ್ನ ನಡೆಸಿದ್ದೇವೆ. ಆ ವರೆಗೆ, ತಾವು ಸಂಗಮಕ್ಷೇತ್ರವನ್ನು ಸಂದರ್ಶಿಸಲು ಬಯಸಿದಾಗ ನಿಮಗೆ ಅನುಕೂಲತೆ ಕಲ್ಪಿಸಿ

ಕೊಡಲು ವ್ಯವಸ್ಥೆ ಮಾಡಲು ಸಿದ್ಧರಿದ್ದೇವೆ. ಈಗಾಗಲೇ ಸಂಗಮಕ್ಷೇತ್ರದಲ್ಲಿ ಒಂದು ಮನೆಯನ್ನು ಪಡೆದುಕೊಂಡಿದ್ದು ನಮ್ಮ ಶಿಷ್ಯಸಮೂಹ ಸೇವಾ ಕಾರ್ಯನಿರತವಾಗಿದೆ. ಎಷ್ಟು ಜನ, ಎಂದು ಬರುವಿರಿ ಎಂಬ ಬಗ್ಗೆ ಮೊದಲೇ ಪತ್ರ ಬರೆದರೆ, ವಸತಿಗಾಗಿ ಸರ್ಕಾರಿ ಪ್ರವಾಸಿ ಮಂದಿರವನ್ನು ನಿಮಗಾಗಿ ನಿಗದಿ ಪಡಿಸಿ, ಪ್ರಸಾದದ ವ್ಯವಸ್ಥೆಯನ್ನು ನಾವು ಮಾಡಿಸುತ್ತೇವೆ.

ಬೆಂಗಳೂರಿನಲ್ಲಿ ಕಾರ್ಯಾಲಯದ ಶಾಖೆ

ಬೆಂಗಳೂರಿನ ಅಸಂಖ್ಯಾತ ಸದ್ಭಕ್ತರು ಬಸವ ಧರ್ಮ ಪೀಠದ ನಿರ್ಮಾಣ ಕಾರ್ಯದಲ್ಲಿ ಉತ್ಸುಕತೆ, ಶ್ರದ್ಧೆ ತೋರಿಸಿ ಧನಸಹಾಯ ಮಾಡಲು ಮುಂದಾಗಿರುವುದರಿಂದ ಅನುಕೂಲತೆಗಾಗಿ ಇಲ್ಲಿ ಒಂದು ಬ್ಯಾಂಕ್ ಖಾತೆಯನ್ನು ತೆರೆಯಲಾಗಿದೆ. ಮತ್ತು ವಿವರಗಳನ್ನು ಇಲ್ಲಿಂದಲೂ ನೀಡಲಾಗುತ್ತದೆ. ಆದ್ದರಿಂದ ಹಣವನ್ನು ಕಳಿಸುವವರು, ವಿವರಗಳನ್ನು ಪಡೆಯಬೇಕೆನ್ನುವವರು ಈ ವಿಳಾಸಕ್ಕೂ ಬರೆಯಬಹುದು.

"ಬಸವ ಧರ್ಮ ಪೀಠ" ಕಾರ್ಯಾಲಯ,
ಬಸವ ಮಂಟಪ, 20 ನೇ ಮುಖ್ಯರಸ್ತೆ
ಎರಡನೆ ಬ್ಲಾಕು, ರಾಜಾಜಿನಗರ
ಬೆಂಗಳೂರು-560010, ದೂರವಾಣಿ 352335

ಮೌಲಿಕ ಉಡುಗೊರೆಯಾಗಿ ಕಲ್ಯಾಣ ಕಿರಣ

✻ ಹಬ್ಬ-ಹುಣ್ಣಿಮೆಗಳಂದು, ಹುಟ್ಟಿದ ಹಬ್ಬದ ಹರಕೆಗಳೆಂದು, ಮದುವೆಯ ವಾರ್ಷಿಕೋತ್ಸವಗಳಂದು-ಹೀಗೆ ವಿವಿಧ ಕಾರಣಗಳ ನಿಮಿತ್ತ ನಿಮ್ಮ ಬಂಧು ಮಿತ್ರರಿಗೆ, ಮಕ್ಕಳು-ಮರಿಗಳಿಗೆ, ಆತ್ಮೀಯರಿಗೆ ಉಡುಗೊರೆಗಳನ್ನು ನೀವು ಕೊಡುವುದುಂಟು. ಅಶಾಶ್ವತವಾದ, ಲೌಕಿಕ ಉಡುಗೊರೆ ಕೊಡುವ ಬದಲು ಧಾರ್ಮಿಕ ಜ್ಞಾನ ನೀಡುವ, ಬಾಳಿನಲ್ಲಿ ಮಾರ್ಗದರ್ಶನ ಮಾಡುವ ಕಲ್ಯಾಣ ಕಿರಣದಂತಹ ಮೌಲಿಕ ಉಡುಗೊರೆ ಕೊಡಿರಿ.

✻ ಯಾರಿಗೆ ನೀವು ಉಡುಗೊರೆ ಕೊಡಬೇಕೆಂದಿದೆಯೋ ಅವರ ವಿಳಾಸ ಕೊಟ್ಟು, ವಾರ್ಷಿಕ ಚಂದಾ ೨೦ರೂ. ಅಥವಾ ಅಜೀವ ಸದಸ್ಯತ್ವ ೨೦೦ರೂ. ನಮಗೆ ಎಂ.ಓ. ಬ್ಯಾಂಕ್ ಡಿ.ಡಿ. ಮೂಲಕ ಕಳಿಸಿದರೆ ನಿಮ್ಮ ಪರವಾಗಿ ನಾವು ಅವರಿಗೆ "ಕಲ್ಯಾಣ ಕಿರಣ" ಪತ್ರಿಕೆ ಕಳಿಸುತ್ತೇವೆ.

ಓಂ ಶ್ರೀಗುರು ಬಸವಲಿಂಗಾಯ ನಮಃ

ಕೂಡಲ ಸಂಗಮ ಸುಕ್ಷೇತ್ರದಲ್ಲಿ

ದಿ. ೨೩-೭-೧೯೮೭ರಂದು ಸಮಾವೇಶವಾದ ಮಠಾಧಿಪತಿಗಳ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು

೧. ಕೂಡಲ ಸಂಗಮನಾಥನ ದೇವಾಲಯವು ಇದ್ದಲ್ಲಿಯೇ ಭದ್ರವಾಗಬೇಕು.

೨. ಅಂತರ ರಾಷ್ಟ್ರೀಯ ಬಸವ ತತ್ತ್ವ ಸಂಶೋಧನ ಕೇಂದ್ರವು ನೂತನ ಸಂಗಮ ಸಂಕೀರ್ಣದಲ್ಲಿ ಸ್ಥಾಪನೆಯಾಗಬೇಕು.

೩. ತೇರು ಮೈದಾನ, ಜಾತ್ರೆಯ ಬಯಲನ್ನು ಕಾರ್ಯಕ್ರಮಕ್ಕೆ ಒದಗಿಸಿ ಕೊಡುವುದು.

೪. ಚಿತ್ರದುರ್ಗ-ಸೊಲ್ಲಾಪುರ ಹೆದ್ದಾರಿಯ ಮೇಲೆ ಕೂಡಲ ಸಂಗಮ ವೃತ್ತ ಮತ್ತು ಮಹಾದ್ವಾರ ನಿರ್ಮಾಣ.

೫. ಪ್ರಾರ್ಥನಾ ಮೈದಾನ ಮತ್ತು ಪ್ರಾರ್ಥನಾ ಗೋಪುರ ನಿರ್ಮಾಣ.

೬. ಪ್ರವಾಸಿಗಳು ಮತ್ತು ಯಾತ್ರಾರ್ಥಿಗಳ ಸೌಲಭ್ಯ.

೭. ನಾರಾಯಣಪುರ ಅಣೆ ಕಟ್ಟೆಗೆ ನಾಮಫಲಕ ನಿರ್ಮಾಣ ಮತ್ತು ಬಸವೇಶ್ವರರ ಕಂಚಿನ ಪುತ್ಥಳಿ ನಿರ್ಮಾಣ.

೮. ಅಂತರ ರಾಷ್ಟ್ರೀಯ ಪ್ರವಾಸಿ ಕೇಂದ್ರವನ್ನಾಗಿ ಕೂಡಲ ಸಂಗಮ ಕ್ಷೇತ್ರವನ್ನು ರೂಪುಗೊಳಿಸುವುದು.

೯. ಪ್ರತಿ ವರ್ಷವೂ ಬಸವ ಜಯಂತಿ ಕಾರ್ಯಕ್ರಮವನ್ನು ಸಂಗಮ ಕ್ಷೇತ್ರದಲ್ಲಿ ನಾಡಹಬ್ಬವಾಗಿ ಸರ್ಕಾರದ ನೆರವಿನೊಡನೆ ಆಚರಿಸುವುದು.

೧೦. ಸಂಗಮ ಕ್ಷೇತ್ರಾಭಿವೃದ್ಧಿಗಾಗಿ, ರಕ್ಷಣೆಗಾಗಿ ಒಂದು ಧಾರ್ಮಿಕ ಸಲಹಾ ಸಮಿತಿ.

ಬಸವ ಪಂಚಮಿಯಂದು ಸಂಗಮ ದೇವಾಲಯ ರಕ್ಷಣೆಗಾಗಿ
ಹೋರಾಟ ಆರಂಭಿಸಲು ಕರೆ

ಕೂಡಲ ಸಂಗಮದಲ್ಲಿ

ಚಾರಿತ್ರಿಕವಾದ ಮಠಾಧೀಶರ ಸಮ್ಮೇಳನ

ಗುರುವಾರ ದಿ. 23-7-1987ರಂದು ಇಡೀ ಸಂಗಮ ಕ್ಷೇತ್ರಕ್ಕೇ ಜೀವಕಳೆ ಬಂದಂತಹ ದೃಶ್ಯ. ಹಲವಾರು ಪ್ರಮುಖ ಮಠಾಧೀಶರ ಚಾರಿತ್ರಿಕ ಸಮಾವೇಶ. ನೋಡಿದವರ ಮತ್ತು ಭಾಗವಹಿಸಿದವರ ಹೃನ್ಮನಗಳನ್ನು ಪುಳಕಗೊಳಿಸುವ ಸನ್ನಿವೇಶ. ಹಿಂದೊಮ್ಮೆ ಅಷ್ಟ ಶತಮಾನೋತ್ಸವದ ಸಂದರ್ಭದಲ್ಲಿ ಹೀಗೆ ಸೇರಿದ್ದರೋ ಇಲ್ಲವೋ; ಈಗಂತೂ ಸಂಗಮೇಶ್ವರನ ನೆಲೆಯು ಬಸವ ಬಳ್ಳಿ ಪುಷ್ಪಗಳನ್ನು ಒಂದು ಕಡೆ ಪೋಣಿಸಿತ್ತು.

ಬಸವ ಸಾಗರ (ನಾರಾಯಣಪುರ) ಅಣೆಕಟ್ಟಿನಿಂದಾಗಿ ಸುಪ್ರಸಿದ್ಧ, ಚಾರಿತ್ರಿಕ ಸಂಗಮೇಶ್ವರ ದೇವಾಲಯವು ಅಳಿವು ಉಳಿವಿನ ಪ್ರಶ್ನೆಯನ್ನು ಎದುರಿಸುತ್ತಿದೆಯಷ್ಟೇ. ಇಂತಹ ಐತಿಹಾಸಿಕ ಸ್ಥಾನವನ್ನು ಉಳಿಸಿಕೊಳ್ಳುವ ಸಲುವಾಗಿ ಸಂಗಮಕ್ಷೇತ್ರದಲ್ಲಿಯೇ ಒಂದು ಸಮ್ಮೇಳನವನ್ನು ಕರೆಯಬೇಕೆಂದು ಅಖಿಲ ಭಾರತ ವೀರಶೈವ ಮಹಾಸಭಾ ಆಶ್ರಯದ ಮಠಾಧಿಪತಿಗಳ ಸಮಿತಿಯು ಒಂದು ಸಮ್ಮೇಳನವನ್ನು ಕ್ಷಿಪ್ರಗತಿಯಲ್ಲಿ ಯೋಜಿಸಿತು.

ಇಳಕಲ್ ಶ್ರೀ ವಿಜಯ ಮಹಾಂತ ಸಂಸ್ಥಾನ ಮಠದ ಶ್ರೀ ಮ.ನಿ.ಪ್ರ. ಮಹಾಂತ ಸ್ವಾಮಿಗಳು ಸ್ವಾಗತ ಸಮಿತಿಯ ಅಧ್ಯಕ್ಷರಾದರು. ಬಾಗಿಲುಕೋಟೆಯ ಚರಂತಿ ಮಠದ ಶ್ರೀ ಪ್ರಭು ಸ್ವಾಮಿಗಳು ಕಾರ್ಯದರ್ಶಿಗಳಾದರು, ಶ್ರೀ ದಯಾನಂದ ಸ್ವಾಮಿಗಳು ಸಂಚಾಲಕರಾದರು. ಅತ್ಯಂತ ಅಲ್ಪ ಅವಧಿಯಲ್ಲಿ ಯೋಜಿಸಲ್ಪಟ್ಟ ಈ ಸಮ್ಮೇಳನದ ಯಶಸ್ಸಿಗೆ ಮಠಾಧಿಕಾರಿಗಳು ಮತ್ತು ಜನತೆ ಅದ್ಭುತ ರೀತಿಯಲ್ಲಿ ಪ್ರತಿಕ್ರಿಯೆ ತೋರಿಸಿ ಧಾವಿಸಿದರು. ಸ್ವಾಗತ ಸಮಿತಿ ಅಧ್ಯಕ್ಷರ ಪತ್ರದ ಆಹ್ವಾನಕ್ಕೇ ಮನ್ನಣೆ ನೀಡಿ ಹಿರಿಯ ಮಠಾಧೀಶರು ಆಗಮಿಸಿದ್ದು, ಇದು ಭವಿಷ್ಯತ್ತಿನ ಮಂಗಲ ಅರುಣೋದಯದ ಮುನ್ಸೂಚನೆ ಎನ್ನಿಸಿತು. ಬಂದ ಮಠಾಧೀಶರಿಗೆ ಇಳಕಲ್ಲಿನ ಶ್ರೀಮಠದಲ್ಲಿ, ಬಾಗಿಲುಕೋಟೆಯ ಚರಂತಿ ಮಠದಲ್ಲಿ ವ್ಯವಸ್ಥೆ ಉಭಯ ಸ್ವಾಮಿಗಳಿಂದ ಮಾಡಲ್ಪಟ್ಟರೆ, ಸಂಗಮಕ್ಷೇತ್ರದಲ್ಲಿ ವಿಶ್ವಕಲ್ಯಾಣ ಮಿಷನ್ ಮತ್ತು ಬಸವ ಧರ್ಮಪೀಠಗಳು ದಾಸೋಹವನ್ನು, ಸಮ್ಮೇಳನದ ವ್ಯವಸ್ಥೆಯನ್ನು ಯೋಜಿಸಿದವು. ಕೇವಲ ಒಂದು ವಾರದ ಅವಧಿ ಪ್ರಚಾರ ಕಾರ್ಯಕ್ಕೆ ಸಿಕ್ಕಿದ್ದಾದರೂ ನಾಡಿನ ಮೂಲೆಮೂಲೆಗಳಿಂದ ಸಹಸ್ರಾರು ಜನರು ಧಾವಿಸಿ ಬಂದರು. ಅವರ ಆಕಾಂಕ್ಷೆ, ಕಾತುರ, ಧಾವತಿಗಳು ಸಂಗಮೇಶ್ವರ ದೇವಾಲಯ ಕುರಿತು ಅವರ ಶ್ರದ್ಧಾ-ಭಕ್ತಿಗಳನ್ನು ಪ್ರತಿಬಿಂಬಿಸುತ್ತಲಿದ್ದವು.

ಬೆಳಗಿನ 10 ಗಂಟೆಗೆ ಮಠಾಧೀಶರ ಪ್ರಥಮ ಸಮಾವೇಶ ಹುಬ್ಬಳ್ಳಿಯ ಮೂರು ಸಾವಿರ ಮಠಾಧೀಶರಾದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಖಿಲ ಭಾರತ ವೀರಶೈವ ಮಹಾಸಭಾಧ್ಯಕ್ಷ ಶ್ರೀ ಐ. ಎಂ. ಮಗದುಮ್ಮರು ವಹಿಸಿದ್ದರು.

ವಿಶ್ವಗುರು ಬಸವಣ್ಣನವರ ಪೂಜೆ-ಆರತಿಗಳನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮಾಡುವುದರೊಡನೆ ಕಾರ್ಯಕ್ರಮ ಆರಂಭವಾಯಿತು. ಸ್ವಾಗತ ಸಮಿತಿ ಅಧ್ಯಕ್ಷರಾದ ಪೂಜ್ಯ ಶ್ರೀ ಮಹಾಂತ ಸ್ವಾಮೀಜಿಯವರು ಎಲ್ಲರನ್ನೂ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಈ ಸಮ್ಮೇಳನದ ಚಾರಿತ್ರಿಕ ಮಹತ್ವವನ್ನು ವಿವರಿಸಿದರಲ್ಲದೆ ಈ ಹಿಂದೆ ಸಂಗಮೇಶ್ವರ ದೇವಾಲಯದ ಸ್ಥಳಾಂತರಕ್ಕೆ ಒಪ್ಪಿಕೊಂಡ ಮಠಾಧೀಶರು ಈಗ ಪುನರ್ಚಿಂತನೆ ಮಾಡಿ ಇದ್ದಲ್ಲಿಯೇ ಉಳಿಯಬೇಕೆಂದು ಪ್ರತಿಪಾದಿಸುವ ಅನಿವಾರ್ಯತೆ ಹೇಗೆ ಒದಗಿ ಬಂದಿತೆಂಬುದನ್ನು ಸಕಾರಣವಾಗಿ ವಿವರಿಸಿದರು.

ಮಹಾಸಭಾಧ್ಯಕ್ಷ ಶ್ರೀ ಐ.ಎಂ. ಮಗದುಮರು ಸ್ಲೈಡುಗಳನ್ನು ಪ್ರದರ್ಶಿಸಿ ತಾಂತ್ರಿಕ ವಿವರಗಳನ್ನು ನೀಡಿದರಲ್ಲದೆ ಜಲಾಶಯದ ತುಂಬು ನೀರಿನ ಮಟ್ಟ ಎಲ್ಲಿಯವರೆಗೆ ಬರುತ್ತದೆ ಮತ್ತು ದೇವಾಲಯದ ಮಟ್ಟವೇನಿದೆ ಎಂಬುದನ್ನು ಚಿತ್ರ ಸಹಿತವಾಗಿ ವಿವರಿಸಿದರು. ಅಳಿದುಳಿದ ಸಂದೇಹಗಳನ್ನು ವಿವಿಧ ಮಠಾಧೀಶರು ಎತ್ತಿದಾಗ ತಾರ್ಕಿಕವಾಗಿ ಉತ್ತರಿಸಿದರು. ಮಠಾಧೀಶ್ವರರ ಸಮಿತಿಯ ಕಾರ್ಯಾಧ್ಯಕ್ಷರಾದ ಬೆಂಗಳೂರಿನ ಬೇಲಿಮಠದ ಪೂಜ್ಯ ಶ್ರೀ ಮ. ನಿ. ಪ್ರ ಶಿವರುದ್ರ ಸ್ವಾಮಿಗಳು ಹಲವಾರು ಸಂದೇಹಗಳಿಗೆ ಉತ್ತರ ನೀಡಿದರು.

ಮಠಾಧೀಶ್ವರರ ಸಮಿತಿಯ ಗೌರವ ಕಾರ್ಯದರ್ಶಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನಿರ್ಣಯಗಳ ಕರಡನ್ನು ಸಭೆಯ ಮುಂದಿಟ್ಟು, ಚರ್ಚೆ ನಡೆದಾಗ ಹಲವಾರು ಸಂದೇಹಗಳಿಗೆ ಉತ್ತರಿಸಿದರು. ಸುದೀರ್ಘವಾದ ಚರ್ಚೆಯ ನಂತರ ಮಂಡಿಸಿದ ಹತ್ತು ನಿರ್ಣಯಗಳನ್ನು ಎಲ್ಲರೂ ಅನುಮೋದಿಸಿದರು.

ಸನ್ನಿಧಿಯನ್ನು ವಹಿಸಿದ್ದ ಶ್ರೀ ಮೂರುಸಾವಿರ ಮಠದ ಜಗದ್ಗುರುಗಳವರು ಸಮಾರೋಪ ಭಾಷಣ ಮಾಡಿದರು. "ಅಣೆಕಟ್ಟಿನ ನೀರಿನಲ್ಲಿ ದೇವಾಲಯವು ಮುಳುಗಿ ಹೋಗಿ ಬಿಡುವುದು ಎಂಬ ಕಲ್ಪನೆ ನಮಗೆ ಮತ್ತು ನಮ್ಮಂತಹ ಅನೇಕರಿಗೆ ಉಂಟಾಗಿತ್ತು. ಆದ್ದರಿಂದ ಅಂಥ ಒಂದು ಚಾರಿತ್ರಿಕ ಸ್ಥಾನ ಅಳಿಯದೆ ಇರಲಿ ಎಂದು ಭಾವಿಸಿ ಸ್ಥಳಾಂತರಕ್ಕೆ ಒಪ್ಪಿಕೊಂಡೆವು. ದೇವಾಲಯವು ಮುಳುಗುವುದೇ ಇಲ್ಲ ಎಂದು ತಿಳಿದ ಬಳಿಕ, ಮುಳುಗದ ದೇವಾಲಯವನ್ನು ಕೀಳಿರಿ ಎಂದು ಹೇಳುತ್ತೇವೆಯೆ ? ತಪ್ಪು ಕಲ್ಪನೆಯಿಂದ ಈ ಎಲ್ಲ ಅವಾಂತರವು ಉಂಟಾಯಿತು, ಆದ್ದರಿಂದ ಈಗ ಒಮ್ಮತದಿಂದ ನಿರ್ಣಯ ಕೈಗೊಂಡು ಮುಂದೆ ಸಾಗೋಣ".

ಮಂಗಲದೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.

ಬಹಿರಂಗ ಅಧಿವೇಶನ

ಸಂಗಮೇಶ್ವರ ದೇವಾಲಯದ ಮುಂದಿನ ಶಿಲಾಮಂಟಪವೇ ವೇದಿಕೆ. ಹಿಂಬ ದಿಯ ನೀಲಾಗಸ, ಹಸಿರು ಗಿಡಗಳೇ ತೆರೆ. ಬಸವ ಸಾಗರದ ಅಲೆಗಳಿಂದ ಪ್ರಾರ್ಥನಾ ಗೀತೆ. ಜಲಾಶಯದ ಮೇಲಿನಿಂದ ಬೀಸಿ ಬರುವ ತಂಗಾಳಿಯಿಂದ ಅಪೂರ್ವ ಸ್ವಾಗತ. ಅತ್ಯಂತ ಚೇತೋಹಾರಿಯಾದ ಭಾವುಕ ಸನ್ನಿವೇಶ. ಸಮ್ಮೇಳನದ ವಿವರ ಗಳನ್ನು ಜನರಿಗೆ ತಲ್ಪಿಸಲು ಇದ್ದ ಕಾಲಾವಧಿ ಬಹುಸ್ವಲ್ಪ. ಆದರೆ ದೂರದೂರದ ಸ್ಥಳಗಳಿಂದ ಮತ್ತು ಕೂಡಲ ಸಂಗಮದ ಸುತ್ತಲಿನ ಪ್ರದೇಶಗಳಿಂದ ಜನರು ಧಾವಿಸಿ ಬಂದ ಸಂಖ್ಯೆ, ಅವರೆಲ್ಲರಿಗೆ ಈ ಚಾರಿತ್ರಿಕ ಮಹಾನ್ ಸ್ಥಳದ ರಕ್ಷಣೆಯಲ್ಲಿ ಎಂತಹ ಆಸಕ್ತಿ ಇದೆ ಎಂಬುದನ್ನು ಪ್ರತಿಪಾದಿಸುತ್ತಿತ್ತು.

ಮೊದಲನೆಯದಾಗಿ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಮಹಾಂತ ಸ್ವಾಮಿ ಗಳು ಎಲ್ಲ ಮಠಾಧೀಶರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. "ಅತ್ಯಂತ ಅವ ಸರದಲ್ಲಿ ಸಂಘಟಿತವಾದ ಈ ಸಮ್ಮೇಳನವು ಬಲು ಮಹತ್ವಪೂರ್ಣ, ಸುಮಾರು ಅರವತ್ತು ಜನ ಮಠಾಧೀಶರು ನಮ್ಮ ಹೃತ್ಪೂರ್ವಕ ಕರೆ ಮನ್ನಿಸಿ ಧಾವಿಸಿದ್ದಾರೆ. ಅವರುಗಳೆಲ್ಲ ಕೇವಲ ವ್ಯಕ್ತಿಗಳಲ್ಲ ಶಕ್ತಿಗಳು, ಸಮಾಜದ ಪ್ರತಿನಿಧಿಗಳು. ಅವರುಗಳ ಹಿಂದೆ ಸಮಾಜವಿದೆ, ಅನುಯಾಯಿತ್ವವಿದೆ. ಈ ಒಂದು ಮಹತ್ವಪೂರ್ಣ ಸನ್ನಿ ವೇಶದಿಂದಾಗಿ ಎಲ್ಲರೂ ಒಂದು ವೇದಿಕೆಯ ಮೇಲೆ ಬರುವಂತಾದುದೊಂದು ವಿಶೇಷ.

ಇಂದು ತಾವೆಲ್ಲರೂ ಕೂಡಲ ಸಂಗಮವನ್ನು ಪ್ರವೇಶಿಸುವಾಗ ಒಂದು ಮಹ ತ್ವದ ಪ್ರಸಂಗವನ್ನು ಗಮನಿಸಿರಬಹುದು. ಅದುವೇ ಬಸವ ಧರ್ಮ ಪೀಠದ ನಾಮ ಫಲಕ. ತಾಯಿಯವರು (ಜಗದ್ಗುರು ಮಾತೆ ಮಹಾದೇವಿ) ಸಂಗಮ ಕ್ಷೇತ್ರಕ್ಕೆ ಆಗ ಮಿಸಿ, ಇಲ್ಲಿ ಒಂದು ಧಾರ್ಮಿಕ ಕೇಂದ್ರವನ್ನು ಮಾಡುತ್ತಿರುವುದು ನಮಗೆಲ್ಲ ಅತೀವ ಹರ್ಷವನ್ನು ತಂದಿದೆ. ಇಷ್ಟು ದಿವಸಗಳ ಕಾಲ ಈ ಕ್ಷೇತ್ರ ತಾಯಿಯಿಲ್ಲದ ತವರಾ ಗಿತ್ತು. ಈಗ ತಾಯಿಯ ಆಗಮನವಾಗಿರುವುದರಿಂದ ಇದಕ್ಕೆ ಚೈತನ್ಯ ಬಂದು ಸರ್ವಾಂಗ ಸುಂದರವಾಗಿ ಬೆಳೆಯುವ ಬಗ್ಗೆ ಸಂದೇಹವೇ ಇಲ್ಲ. ಎಲ್ಲರೂ ಒಟ್ಟಾಗಿ ಶ್ರಮಿಸುವ ಕಾಲವೀಗ ಬಂದಿದೆ."ಎಂದರು. ಸ್ವಾಗತ ಭಾಷಣದ ನಂತರ ಮಠಾಧಿ ಪತಿಗಳ ಸಭೆಯಲ್ಲಿ ತೆಗೆದುಕೂಂಡ ಹತ್ತು ನಿರ್ಣಯಗಳನ್ನು ಮಠಾಧಿಪತಿಗಳ ಸಮಿ ತಿಯ ಗೌರವ ಕಾರ್ಯದರ್ಶಿ ಪೂಜ್ಯ ಮಾತಾಜಿಯವರು ಓದಿ, ಸಾರ್ವಜನಿಕರಿಂದ ಅನುಮೋದನೆ ಪಡೆದರು.

ದೇವನ ಪಿತೃತ್ವ, ಮಾನವ ಭ್ರಾತೃತ್ವವನ್ನು ಒಪ್ಪಿ, ಮಾನವರೆಲ್ಲರೂ ಸಮಾನರು ಎಂದು ಸಾಮಾಜಿಕ ಸಮತೆಯನ್ನು ಸಾರುವ ತತ್ವವೇ ಶಿವಾಚಾರ.

ಧರ್ಮದ ಗುರಿ ವಿಶ್ವ ಕುಟುಂಬತ್ವ.

ಕೂಡಲ ಸಂಗಮ ಸುಕ್ಷೇತ್ರದಲ್ಲಿ ದಿ. ೨೩-೭-೧೯೮೭ ರಂದು ನಡೆದ ಮಠಾಧಿಪತಿಗಳ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳು

೧. **ಕೂಡಲ ಸಂಗಮನಾಥನ ದೇವಾಲಯವು ಇದ್ದಲ್ಲಿಯೇ ಭದ್ರವಾಗಬೇಕು.**

ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ನಿರ್ಮಾಣವಾದ ಬಸವಸಾಗರ (ನಾರಾಯಣಪುರ) ಅಣೆ ಕಟ್ಟಿನಿಂದಾಗಿ ಪ್ರಸಿದ್ಧ ಕೂಡಲ ಸಂಗಮೇಶ್ವರ ದೇವಾ ಲಯವು ಅಳಿವು-ಉಳಿವಿನ ಪ್ರಶ್ನೆಯನ್ನು ಎದುರಿಸುತ್ತಿದೆಯಷ್ಟೇ.

ಸಂಗಮೇಶ್ವರ ದೇವಾಲಯವು ಜಲಾಶಯದ ನೀರಿನಿಂದ ಮುಳುಗಡೆಯಾಗು ತ್ತದೆ ಎಂಬ ತಪ್ಪು ಕಲ್ಪನೆಯನ್ನು ಹುಟ್ಟಿಸಿ ಹಿಂದಿನ ಕರ್ನಾಟಕ ಸರ್ಕಾರವು ಗುಡಿಯ ಸ್ಥಳಾಂತರಕ್ಕೆ ಹಲವಾರು ಗಣ್ಯರು ಮತ್ತು ಮಠಾಧಿಕಾರಿಗಳಿಂದ ಒಪ್ಪಿಗೆಯನ್ನು ಪಡೆಯಿತು. ಆದರೆ ಇದೀಗ ಮಠಾಧಿಕಾರಿಗಳು, ಸಮಾಜದ ಹಿತಚಿಂತಕರು ದೇವಾಲಯವು ಮುಳುಗಡೆಯಾಗದ ಮಟ್ಟದಲ್ಲಿದೆ ಎಂದು ತಿಳಿದ ಬಳಿಕ ದೇವಾಲಯ ವನ್ನು ಇದ್ದಲ್ಲಿಯೇ ಭದ್ರಪಡಿಸಿಕೊಡಲು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿದಾಗ ಮಠಾಧಿಕಾರಗಳಲ್ಲಿಯೇ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿದೆ ಎಂದು ಸರ್ಕಾರವು ನುಣುಚಿಕೊಂಡು ಪಾರಾಗಲು ಯತ್ನಿಸಿತು.

"ಮಠಾಧಿಕಾರಿಗಳಲ್ಲಿ ಈಗ ಯಾವ ಭಿನ್ನಾಭಿಪ್ರಾಯವೂ ಇಲ್ಲ ಮೊದಲು ಭಿನ್ನಾಭಿಪ್ರಾಯ ಉಂಟಾಗಿದ್ದುದು ಸರ್ಕಾರವೇ ಹುಟ್ಟಿಸಿದ ತಪ್ಪು ಕಲ್ಪನೆಯಿಂದ", ಎಂದು 28-5-1987 ರಂದು ಬೆಂಗಳೂರಿನಲ್ಲಿ ಸಭೆ ಸೇರಿದ ಮಠಾಧಿಪತಿಗಳು ಒಮ್ಮ ತದ ನಿರ್ಣಯ ಕೈಗೊಂಡು ಸರ್ಕಾರಕ್ಕೆ ಒಮ್ಮತದ ಮನವರಿಕೆ ಮಾಡಿಕೊಟ್ಟರು. ಜೂನ್ 15 ರ ಗಡುವನ್ನು ನಿರ್ಧಾರ ತೆಗೆದುಕೊಳ್ಳಲು ಸರ್ಕಾರಕ್ಕೆ ಕೊಟ್ಟರು, ಅಂದಿನಿಂದ ಇಂದಿನವರೆಗೆ ತಾಳ್ಮೆಯಿಂದ ಕಾಯ್ದುದಾಯಿತು.

ಈ ಮಧ್ಯೆ ಸರ್ಕಾರವು ಇನ್ನಷ್ಟು ಸಮಯವನ್ನು ವ್ಯರ್ಥಮಾಡಲು ಉದ್ದೇಶಿಸಿ ದೆಯೋ ಎಂಬಂತೆ ತಜ್ಞರ ಸಮಿತಿಯೊಂದನ್ನು ನಿಯಮಿಸಿ ವರದಿ ಸಲ್ಲಿಸಲು ಅದಕ್ಕೆ ಆರು ತಿಂಗಳ ಕಾಲಾವಕಾಶ ನೀಡಿದೆ. ಇದು ಜನರ ಕಣ್ಣಿಗೆ ಮಣ್ಣೆರೆಚುವ ತಂತ್ರ ವಷ್ಟೇ ಅಲ್ಲ ಮಠಾಧಿಕಾರಿಗಳ, ಅಖಿಲ ಬಾರತ ವೀರಶೈವ ಮಹಾಸಭೆಯವರ ಮತ್ತು ಹಲವಾರು ಸಂಘ-ಸಂಸ್ಥೆಗಳ ಬೇಡಿಕೆಗೆ ಕಾಸಿನ ಕಿಮ್ಮತ್ತನ್ನೂ ಕೊಡದ ದಿವ್ಯ ನಿರ್ಲಕ್ಷ್ಯ ವನ್ನು ಸ್ಪಷ್ಟಪಡಿಸುತ್ತದೆ.

ಹೀಗಾಗಿ ಇಂದು ಮಠಾಧಿಪತಿಗಳ ಈ ಸಮಾವೇಶವು ಕೂಡಲ ಸಂಗಮೇಶ್ವರ ದೇವಾಲಯವನ್ನು ಇದ್ದಲ್ಲಿಯೇ ಭದ್ರಪಡಿಸಲು,ಅತ್ಯಂತ ತೀವ್ರವಾಗಿ ಕಾರ್ಯೋನ್ಮುಖ

ವಾಗಲು ಸರ್ಕಾರವನ್ನು ಒತ್ತಾಯಿಸುತ್ತದೆ. ಇಷ್ಟು ಮಾತ್ರವಲ್ಲ ಸರ್ಕಾರಕ್ಕೆ ಇದ್ದಲ್ಲಿಯೇ ಉಳಿಸಿಕೊಡಲು ಮನಸ್ಸು ಮತ್ತು ಧೈರ್ಯವಿಲ್ಲದಿದ್ದರೆ ಆಗ ಮಠಾಧೀಶರ ಸಮಿತಿಗೇ ಹೊಣೆಗಾರಿಕೆ ಕೊಟ್ಟು ಆರ್ಥಿಕ ನೆರವನ್ನು ಒದಗಿಸಿಕೊಟ್ಟರೆ ಮಠಾಧೀಶರೇ ದೇವಾಲಯುವನ್ನು ಸಂರಕ್ಷಿಸಬೇಕು ಎಂಬ ನಿರ್ಣಯ ಸಹ ಕೈಗೊಳ್ಳಲಾಗಿದೆ.

೨. ನೂತನ ಸಂಗಮ ಸಂಕೀರ್ಣದಲ್ಲಿ ಅಂತರಾಷ್ಟ್ರೀಯ ಬಸವ ತತ್ತ್ವ ಸಂಶೋಧನ ಕೇಂದ್ರ ಸ್ಥಾಪನೆ.

ಕೇವಲ ದೇವಾಲಯ ರಕ್ಷಣೆಯಿಂದಲೇ ಹೆಚ್ಚಿನ ವಿಧಾಯಕ ಕಾರ್ಯ ಸಾಧ್ಯ ವಾಗದೆಂದು ಅರಿತು ಶ್ರೀ ದೇವರಾಜು ಅರಸು ಸರ್ಕಾರವು ಅಂತರಾಷ್ಟ್ರೀಯ ಬಸವ ತತ್ತ್ವ ಸಂಶೋಧನ ಕೇಂದ್ರದ ಸ್ಥಾಪನೆಗೆ ಆಶ್ವಾಸನೆ ಕೊಟ್ಟಿತ್ತು. ಎಂದಿನಿಂದಲೂ ಈ ಬೇಡಿಕೆಯನ್ನು ಸರ್ಕಾರದ ಮುಂದೆ ಸಮಾಜದ ಗಣ್ಯರು ಇಡುತ್ತಲೇ ಬಂದಿದ್ದಾರೆ. ಅದರಂತೆ ಇಂದಿನ ಘನ ಸರ್ಕಾರವು ಇದಕ್ಕೆ ಮಾನ್ಯತೆ ನೀಡಿ, ನೂತನ ಸಂಗಮ ಸಂಕೀರ್ಣದಲ್ಲಿ ಯೋಜನೆಯೊಂದನ್ನು ರೂಪಿಸಿ, ಬಸವ ತತ್ತ್ವ ಪ್ರಸಾರ ಕೇಂದ್ರವನ್ನು ಸ್ಥಾಪಿಸಬೇಕು.

ಬೃಹತ್ತಾದ ಬಸವ ಸ್ಮಾರಕ ಮಂಟಪ, ಸಂಶೋಧನ ಸಂಸ್ಥೆ, ಗ್ರಂಥಾಲಯ, ಬೃಹತ್ ಗ್ರಂಥ ಭಂಡಾರ, ಶರಣೋದ್ಯಾನ, ಸಮುದಾಯ ಭವನ ಮುಂತಾದುವುಗಳ ಮೂಲಕ ಜಾಗತಿಕ ಮಟ್ಟದ ಸಂಶೋಧನ ಕೇಂದ್ರವೊಂದನ್ನು ರೂಪಿಸಬೇಕು.

೩. ಸಂಗಮೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಇತರ ಬೇಡಿಕೆಗಳು.

ಈ ನಾಡಿನ ಆರಾಧ್ಯದೈವ ಸಂಗಮೇಶ್ವರನ ಜಾತ್ರೆ ಬಹಳಷ್ಟು ಜನರನ್ನು ಆಕರ್ಷಿಸುವಂತಹುದು. ಈ ಜಾತ್ರೆಯ ಪ್ರಮುಖ ಚಟುವಟಿಕೆ ರಥೋತ್ಸವ. ಈಗ ಒಂದು ಬೃಹತ್ತಾದ ಮತ್ತು ಅನವಶ್ಯಕವಾದ ಒಂದು ಏರಿಯು ಕಟ್ಟಲ್ಪಟ್ಟಿರುವ ಕಾರಣ ಇದು ದೇವಸ್ಥಾನದ ಮಹಾದ್ವಾರಕ್ಕೆ ಅಡ್ಡನಿಂತು ಮುಖ್ಯದ್ವಾರದ ಅಂದವನ್ನು ವಿರೂಪಗೊಳಿಸಿದೆ. ಮತ್ತು ಮಲಪ್ರಭಾ-ಕೃಷ್ಣಾನದಿಗಳ ಹಿನ್ನೀರು ಕೇವಲ ಮೂರು ಅಡಿಯಷ್ಟು ಮಾತ್ರ, ಅದೂ ಜಲಾಶಯದಲ್ಲಿ ತುಂಬು ಮಟ್ಟಕ್ಕೆ ಸಂಗ್ರಹಿತವಾದಾಗ ನಿಲ್ಲುವುದರಿಂದ, ಇಂತಹ ಸೈಂಧವಾಕಾರದ ಏರಿಯು ಅನವಶ್ಯಕವೆನಿಸದಿರದು. ಈ ಏರಿಯಿಂದ ಆಗುವ ತೊಂದರೆಗಳು.

೧. ತೇರು ಎಳೆಯಲು ಮೈದಾನವಿಲ್ಲದಿರುವುದು.

೨. ವಾಹನಗಳನ್ನು ತುಂಬಾ ದೂರದಲ್ಲಿ ನಿಲ್ಲಿಸಿ ನಡೆದು ಹೋಗುವ ಅನಿವಾರ್ಯತೆ ಒದಗುವುದು.

೩. ಏರಿಯ ಮೇಲೆ ಹೋದ ವಾಹನಗಳು ತಿರುಗಲು ಸ್ಥಳವೇ ಇಲ್ಲವಾಗುವುದು.

ಆದ್ದರಿಂದ ಈ ಏರಿಯ ಎತ್ತರವನ್ನು ಕಮ್ಮಿ ಮಾಡಿ, ಮಣ್ಣನ್ನು ಇನ್ನಷ್ಟು

ವಿಸ್ತಾರವಾಗಿ ಹರಡುವುದು ಮೊದಲನೆಯ ಪರಿಹಾರ. ತುಂಬು ಜಲಾಶಯದ ನೀರಿನ ಮಟ್ಟಕ್ಕಿಂತಲೂ ನಾಲ್ಕೈದು ಅಡಿ ಎತ್ತರದಲ್ಲಿ ಏರಿಯನ್ನು ವಿಸ್ತಾರವಾಗಿ ಮಾಡಿದರೆ ಇದು ಒಂದೇ ಪಟ್ಟಿಗೆ ಅನೇಕ ಸಮಸ್ಯೆಗಳನ್ನು ಬಗೆಹರಿಸಿ ಕೆಳಕಂಡ ಅನುಕೂಲತೆಗಳನ್ನು ಒದಗಿಸುವುದು.

೧. ದೇವಾಲಯದ ಮಹಾದ್ವಾರಕ್ಕೆ ಅಡ್ಡನಿಂತ ಭಾಗವನ್ನು ತೆಗೆದು ಉತ್ತಮ ದೃಶ್ಯವನ್ನು ಒದಗಿಸುವುದು.

೨. ಅಲ್ಲಿರುವ ಮಣ್ಣನ್ನೇ ವಿಸ್ತಾರವಾಗಿ ಹರಡಿದಾಗ ತೇರಿನ ಸಂಚಾರಕ್ಕೆ ಬಹಳಷ್ಟು ಅನುಕೂಲವಾಗುವುದು.

೩. ವಾಹನಗಳು ಗುಡಿಯ ಮಹಾದ್ವಾರದ ಸಮೀಪದವರೆಗೆ ಹೋಗಿಬರಬಲ್ಲುವು.

೪. ವಾಹನಗಳನ್ನು ನಿಲ್ಲಿಸಲು, ತಿರುಗಿಸಲು ಸ್ಥಳಾವಕಾಶವು ದೊರೆಯುವುದು.

ಚಕ್ಕಡಿ ವಾಹನಗಳನ್ನು ನಿಲ್ಲಿಸಲು ಅಂಗಡಿ ಸಾಲು ಮುಂತಾಗಿ ಜಾತ್ರೆ ಮತ್ತು ಶರಣ ಮೇಳದ ಕಾಲದಲ್ಲಿ ಹಾಕಲು ಅನುಕೂಲವಾಗುವುದು. ಸರ್ಕಾರವು ಈ ಎಲ್ಲ ಉದ್ದೇಶಗಳಿಗಾಗಿ ನದಿಯ ದಂಡೆಯಿಂದ ಹಿಡಿದು ಸೀತೀಮನಿ ರಸ್ತೆಯವರೆಗಿನ ಮೈದಾನವನ್ನು ಮಟ್ಟಸ ಮಾಡಿ, ಒಂದು ಪ್ರಾರ್ಥನಾ ಗೋಪುರವನ್ನು ಕಟ್ಟಿಸಿಕೊಡಬೇಕು. ಇದು ವಾರ್ಷಿಕ ಬಸವ ಜಯಂತಿ ಕಾರ್ಯಕ್ರಮಕ್ಕೂ ಉಪಯೋಗವಾಗುವುದು.

೪. ರಾಷ್ಟ್ರೀಯ ಹೆದ್ದಾರಿಯ ಮೇಲೆ ಮಹಾದ್ವಾರ

ಚಿತ್ರದುರ್ಗ-ಷೋಲ್ಲಾಪುರ ರಾಷ್ಟ್ರೀಯ ಹೆದ್ದಾರಿಯ ಮೇಲೆ, ಕೂಡಲ ಸಂಗಮಕ್ಕೆ ತಿರುಗುವ ಸ್ಥಾನದಲ್ಲಿ ಒಂದು ದೊಡ್ಡ ವೃತ್ತವನ್ನು ಮಾಡಿ, "ಕೂಡಲ ಸಂಗಮ ವೃತ್ತ" ಎಂದು ಹೆಸರಿಟ್ಟು ಮಹಾದ್ವಾರವೊಂದನ್ನು ನಿರ್ಮಾಣ ಮಾಡುವುದು. ಉಳಿದ ಮೂರು ರಸ್ತೆಗಳಲ್ಲಿ ಬೃಹತ್ತಾದ ಕಮಾನುಗಳ ರಚನೆ ಮಾಡಿ, ನಾಮ ಫಲಕ ಹಾಕಿಸುವುದು ಸಂಗಮ ರಸ್ತೆಯ ಮೇಲೆ ನಿರ್ಮಾಣ ಮಾಡುವ ಮಹಾದ್ವಾರದ ಬಳಿಯ ಅರ್ಧವೃತ್ತದಲ್ಲಿ ಸಂಗಮೇಶ್ವರನ (ಯೋಗಿ ಶಿವನ) ಸುಂದರ ವಿಗ್ರಹವನ್ನು ಮತ್ತು ಶ್ರೀ ಬಸವಣ್ಣನವರ ವಿಗ್ರಹವನ್ನು ಸ್ಥಾಪಿಸುವುದು, ಸಂಗಮ ಕ್ಷೇತ್ರದ ಮಹತ್ವವನ್ನು ಒಂದು ಬದಿಗೆ, ಬಸವಣ್ಣನವರ ಪರಿಚಯವನ್ನು ಇನ್ನೊಂದು ಬದಿಗೆ ಫಲಕ (Board) ರೂಪದಲ್ಲಿ ಹಾಕಿಸುವುದು. ಸಂಗಮ ವೃತ್ತ (Circle) ದಿಂದ ಸಂಗಮೇಶ್ವರ ದೇವಾಲಯದವರೆಗೆ ಕನಿಷ್ಟ ಕಿಲೋಮೀಟರಿಗೆ ಒಂದರಂತೆ ಬಸವಣ್ಣನವರ ವಚನಗಳ ಶಿಲಾಫಲಕ ಹಾಕಿಸುವುದು,

೫. ಶರಣಮೇಳಕ್ಕೊಂದು ಪ್ರಾರ್ಥನಾ ಮೈದಾನ

ಬಸವ ತತ್ತ್ವಾಭಿಮಾನಿಗಳು ವರ್ಷಕ್ಕೊಂದು ದಿನ ಶರಣಮೇಳ ಯಾತ್ರೆ ಕೈಗೊಳ್ಳುವುದರಿಂದ, ಈ ಶರಣ ಮೇಳವನ್ನು ಪ್ರತಿವರ್ಷ ಮಕರ ಸಂಕ್ರಾಂತಿಯಂದು

(ಇಂಗ್ಲೀಷ್ ದಿನಾಂಕ ಜನವರಿ 14ರಂದು) ಅಂದರೆ ಬಸವಣ್ಣನವರಿಗೆ ಮಹತ್ವಪೂರ್ಣ ವಾದ ದಿವ್ಯಾನುಭವವಾದ ದಿವಸದಂದು ಸೇರಲು ಒಮ್ಮತದ ನಿರ್ಣಯ ಕೈಗೊಂಡಿರು ವುದರಿಂದ ಸರ್ಕಾರವು ಪ್ರಾರ್ಥನಾ ಗೋಪುರ ಮತ್ತು ಪ್ರಾರ್ಥನಾ ಮೈದಾನವನ್ನು ಸಿದ್ಧಪಡಿಸಿ ಕೊಡುವುದು. ಈ ಕಟ್ಟಿರುವ ಬೃಹತ್ ಏರಿಯ ಪಕ್ಕದಲ್ಲಿ ಕೃಷ್ಣಾ ನದಿಯ ತುಂಬು ನೀರಿನ ಮಟ್ಟದ ಗಡಿಯಾಚೆಗೆ ಇರುವ, ವಿಸ್ತಾರವಾದ ಮೈದಾನವು ಸಾಮೂಹಿಕ ಪ್ರಾರ್ಥನೆಗೆ ಸೂಕ್ತವಾಗಿರುವ ಕಾರಣ ಅದನ್ನು ಸರ್ಕಾರವು ಸಿದ್ಧಪಡಿಸಿ ಒದಗಿಸಿ ಕೊಡಬೇಕು.

ಬಸವ ಧರ್ಮೀಯರ ಕೇಂದ್ರ ಸ್ಥಾನ ಕೂಡಲ ಸಂಗಮವಾಗಿರುವ ಕಾರಣ ಲಕ್ಷಾಂತರ ಜನರು ಬಂದು ಸಮುದಾಯ ಪ್ರಾರ್ಥನೆಗೆ ನಿಲ್ಲುವಂತಹ ಮೈದಾನವು ಇದರಿಂದ ದೊರೆಯುವುದಲ್ಲದೆ ಜಾತ್ರೆಯ ಮತ್ತು ಮೇಳದ ಕಾಲದಲ್ಲಿ ಜನತೆ ಬೀಡು ಬಿಡಲು ಅನುಕೂಲಕರವಾಗುವುದು.

೬. ಪ್ರವಾಸಿಗಳು ಮತ್ತು ಯಾತ್ರಾರ್ಥಿಗಳಿಗೆ ಸೌಲಭ್ಯ.

ಯಾತ್ರಿಕರಿಗಾಗಿ ಧರ್ಮಛತ್ರಗಳನ್ನು, ವಿವಿಧ ಆರ್ಥಿಕ ಮಟ್ಟದ ಪ್ರವಾಸಿಗಳಿಗಾಗಿ ಪ್ರವಾಸಿ ಮಂದಿರವನ್ನು-ಅಂದರೆ ಕನಿಷ್ಟ ಐನೂರು ಪ್ರವಾಸಿಗಳಿಗೆ ಕೋಣೆಗಳನ್ನು ಕಟ್ಟಿಸುವುದು. ವ್ಯವಸ್ಥಿತವಾಗಿ ಅಂಗಡಿ ಮಳಿಗೆಗಳನ್ನು, ಉಪಾಹಾರ ಗೃಹಗಳನ್ನು ಕಟ್ಟಿಸುವುದು. ಯಾತ್ರಾರ್ಥಿಗಳು ಮತ್ತು ಸ್ಥಳೀಯರಿಗೆ ಅನುಕೂಲ ವಾಗುವಂತೆ ಆಸ್ಪತ್ರೆಯನ್ನು ಕಟ್ಟಿಸುವುದು.

ರಾಷ್ಟ್ರೀಯ ಹೆದ್ದಾರಿಯ ಮೇಲೆ ಹೋಗುವ ಸಾರಿಗೆ ಸ್ಥಂಸ್ಥೆಗಳ ವಾಹನಗಳು ಸಂಗಮಕ್ಷೇತ್ರದೊಳಕ್ಕೆ ಬಂದು ಹೋಗುವಂತೆ ಸರ್ಕಾರವು ಅನುಕೂಲತೆ ಕಲ್ಪಿಸಬೇಕು.

ರಾಜಧಾನಿ ಬೆಂಗಳೂರು ಮತ್ತು ಎಲ್ಲಾ ಕಡೆಯಿಂದ ಕೂಡಲ ಸಂಗಮಕ್ಕೆ ನೇರ ವಾದ ಒಂದು ಬಸ್ಸು ಬರುವಂತಾಗಬೇಕು ಅಥವಾ ಬಾಗಿಲುಕೋಟೆಗೆ ಬರುವ ಬಸ್ಸು ಮುಂದುವರಿದು ಬರಬೇಕು. ಕೂಡಲ ಸಂಗಮದಿಂದ ಉಳವಿ, ಕೂಡಲ ಸಂಗಮ ದಿಂದ ಬಸವಕಲ್ಯಾಣ ಕೂಡಲ ಸಂಗಮದಿಂದ ಶೋಲ್ಲಾಪುರ, ಸಂಗಮದಿಂದ ಬಾಗೇವಾಡಿ ಹೀಗೆ ಶರಣರ ಪ್ರಸಿದ್ಧ ಕ್ಷೇತ್ರಗಳಿಗೆ ಪ್ರವಾಸ ಸಂಪರ್ಕ ಕಲ್ಪಿಸಬೇಕು.

೭. ನಾರಾಯಣಪುರ ಅಣೆಕಟ್ಟಿನ ನಾಮಫಲಕ ನಿರ್ಮಾಣ,

ಈಗಾಗಲೇ ಬಸವಸಾಗರವೆಂದು ನಾರಾಯಣಪುರ ಅಣೆಕಟ್ಟೆಗೆ ನಾಮಕರಣ ಮಾಡಿದ್ದಕ್ಕೆ ಕರ್ನಾಟಕ ಸರ್ಕಾರವನ್ನು ನಾವು ಅಭಿನಂದಿಸುತ್ತೇವೆ. ಅಣೆಕಟ್ಟಿನ ಎರಡೂ ಮಾರ್ಗಗಳ ತುದಿಯಲ್ಲಿ ಭವ್ಯವಾದ ಕಮಾನನ್ನು ನಿರ್ಮಾಣ ಮಾಡಿ, "ಬಸವ ಸಾಗರ" ಎಂದು ಶಿಲಾಫಲಕದಲ್ಲಿ ರಚಿಸುವ ಕಾರ್ಯವನ್ನು ತೀವ್ರವಾಗಿ ಕೈಗೊಳ್ಳಬೇಕು. ಮತ್ತು ಬಸವೇಶ್ವರರ ಕಂಚಿನ ಪುತ್ಥಳಿಯನ್ನು ಸ್ಥಾಪಿಸಬೇಕು. ಅಣೆ

ಕಟ್ಟು-ಜಲಾಶಯಗಳಿಗೆ ಬಸವಸಾಗರ ಎಂದು ಬಳಸುವ ಪರಿಪಾಠವನ್ನು ಬಳಕೆಗೆ ತಂದು ಎಲ್ಲ ಸರ್ಕಾರಿ ದಾಖಲೆಗಳಲ್ಲಿ ತಿದ್ದುಪಡಿ ತರಬೇಕು. ಭಾರತ ಮತ್ತು ಕರ್ನಾಟಕ ಭೂಪಟಗಳಲ್ಲಿ ಬಸವ ಸಾಗರವೆಂದು ಬರೆಸಬೇಕು.

೮. ಅಂತರ ರಾಷ್ಟ್ರೀಯ ಪ್ರವಾಸಿ ಕೇಂದ್ರ.

ಚಾರಿತ್ರಿಕ ಸಂಗಮೇಶ್ವರ ದೇವಾಲಯ, ಬಸವಣ್ಣನವರ ಐಕ್ಯಮಂಟಪ ಗಳಿಂದಾಗಿ ಕೂಡಲ ಸಂಗಮವು ಅಂತರ ರಾಷ್ಟ್ರೀಯ ಪ್ರವಾಸಿ ಕೇಂದ್ರವಾಗಲಿರುವು ದರಿಂದ ಇದಕ್ಕೆ ಅಂತರ ರಾಷ್ಟ್ರೀಯ ಪ್ರವಾಸಿ ಕೇಂದ್ರದ ಸೌಲಭ್ಯವನ್ನೊದಗಿಸಬೇಕು.

ಜಗತ್ತಿನ ವಿವಿಧ ಪ್ರವಾಸಿಗಳೇ ಅಲ್ಲದೆ ಎಲ್ಲ ಬಸವ ತತ್ವಾನುಯಾಯಿಗಳು ಶರಣ ಮೇಳಕ್ಕೆ ಜಗತ್ತಿನ ವಿವಿಧ ಭಾಗಗಳಿಂದ ಬರುವ ಕಾರಣ, ಮುಸ್ಲೀಮರಿಗೆ ಮೆಕ್ಕಾ, ಬೌದ್ಧರಿಗೆ ಬುದ್ಧಗಯೇ, ಸಾಂಪ್ರದಾಯಿಕ ಹಿಂದುಗಳಿಗೆ ಕಾಶಿ, ಸಿಖ್ಖರಿಗೆ ಅಮೃತಸರ, ಕ್ರೈಸ್ತರಿಗೆ ಜೆರೂಸಲೆಮ್‌ಗಳಂತೆ ಸಂಗಮ ಕ್ಷೇತ್ರವು ಜಾಗತಿಕ ಮಟ್ಟದ ಧರ್ಮಕ್ಷೇತ್ರವಾಗಲಿರುವುದರಿಂದ ಸರ್ಕಾರವು ಈ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯನ್ನು ಕೈಗೊಳ್ಳಬೇಕು.

ಅಂತರ ರಾಷ್ಟ್ರೀಯ ಪ್ರವಾಸಿ ಭೂಪಟದಲ್ಲಿ ಸಂಗಮ ಕ್ಷೇತ್ರವನ್ನು ಗುರುತಿಸು ವುದೇ ಅಲ್ಲದೆ, ವಾಯು ಸಂಪರ್ಕವನ್ನು ಕಲ್ಪಿಸಬೇಕು. ಸೂಕ್ತ ಸೌಲಭ್ಯಗಳ ಹೋಟೆಲ್ಲುಗಳ ನಿರ್ಮಾಣ ಮಾಡಬೇಕು. ಇಡೀ ಮಾನವ ಕುಲಕ್ಕೆ ಸಮತಾವಾದದ ಸಂದೇಶವನ್ನು ಪ್ರಪ್ರಥಮವಾಗಿ ಬೀರಿದ ಬಸವಣ್ಣನವರ ಸ್ಮಾರಕದಿಂದಾಗಿ ಜಗತ್ತಿಗೆ ಸಮತಾವಾದದ ಸಂದೇಶ ಸಾರಿದ ಪ್ರಥಮಭೂಮಿ ಕರ್ನಾಟಕ ಎಂಬ ಕೀರ್ತಿಗೆ ರಾಜ್ಯ ವನ್ನು ಏರಿಸಿದಂತಾಗುವುದು.

೯. ಬಸವ ಜಯಂತಿ ಉತ್ಸವ.

ಬಸವಣ್ಣನವರ ವಿದ್ಯಾಭೂಮಿ, ತಪೋಭೂಮಿ, ಐಕ್ಯಸ್ಥಾನ ಕೂಡಲ ಸಂಗಮ ಸುಕ್ಷೇತ್ರದಲ್ಲಿ ಪ್ರತಿವರ್ಷವೂ ಅಕ್ಷಯ ತೃತೀಯದಂದು, ವೈಶಾಖ ಮಾಸದಲ್ಲಿ ಬರುವ ಬಸವ ಜಯಂತಿಯನ್ನು ನಾಡಹಬ್ಬವಾಗಿ ಆಚರಿಸುವುದು. ಇದಕ್ಕೆ ಸರ್ಕಾರದಿಂದ ಆರ್ಥಿಕ ನೆರವನ್ನು ಪಡೆಯುವುದು.

೧೦, ಕೂಡಲ ಸಂಗಮ ಕ್ಷೇತ್ರದ ರಕ್ಷಣೆ ಮತ್ತು ಅಭಿವೃದ್ಧಿಗಾಗಿ ಒಂದು ಧಾರ್ಮಿಕ ಸಲಹಾ ಸಮಿತಿ.

ಲಿಂಗವಂತ ಧರ್ಮೀಯರು ಮತ್ತು ಬಸವ ತತ್ವಾಭಿಮಾನಿಗಳ ಸುಕ್ಷೇತ್ರ ಕೂಡಲ ಸಂಗಮದಲ್ಲಿ ಆಗಬೇಕಾದ ಕಾರ್ಯಗಳಲ್ಲಿ ಯಾವುದೇ ಧಾರ್ಮಿಕ, ತಾತ್ವಿಕ ದೋಷ ಬರದಂತೆ ಕಾಲಕಾಲಕ್ಕೆ ಮಾರ್ಗದರ್ಶನ ಮಾಡಲು, ಸಲಹೆ ನೀಡಲು ಅಖಿಲ ಭಾರತ ವೀರಶೈವ ಮಹಾಸಭೆ, ಅದರ ಆಶ್ರಯದ ಮಠಾಧಿಪತಿಗಳ ಸಮಿತಿ, ಮತ್ತು

ಇತರ ಬಸವ ತತ್ತ್ವಾಭಿಮಾನಿಗಳ ಸಂಘ-ಸಂಸ್ಥೆಗಳು ಸಿದ್ಧವಿರುವ ಕಾರಣ ಸರ್ಕಾರವು ಈ ಸಮಿತಿಗಳ ಸಲಹೆಯೊಡನೆ ಮುನ್ನಡೆಯ ಬೇಕೆಂದು ನಿರ್ಣಯಿಸಲಾಗಿದೆ.

ಸಂಗಮೇಶ್ವರ ದೇವಾಲಯದ ಪುನರ್‌ನಿರ್ಮಾಣ, ರಾಷ್ಟ್ರೀಯ ಹೆದ್ದಾರಿಯ ಬದಿಯ ಮಹಾದ್ವಾರ, ಪ್ರಾರ್ಥನಾ ಗೋಪುರ ಬಸವ ಮಂಟಪ ಸ್ಮಾರಕ ಕಟ್ಟಡ ಮುಂತಾದುವುಗಳ ರಚನೆಯ ಬಗ್ಗೆ ತಾತ್ತ್ವಿಕ ನಿರ್ಣಯದ ಮೇಲೆ ನಕ್ಷೆಗಳನ್ನು ಒದಗಿಸುವ ಕರ್ತವ್ಯವನ್ನು ಈ ಸಮಿತಿಗಳವರು ಮಾಡಬೇಕೆಂದು ನಿರ್ಣಯಿಸಲಾಗಿದೆ.

ಮೇಲೆ ಕಾಣಿಸಿದ ಎಲ್ಲ ನಿರ್ಣಯಗಳನ್ನು ಮಠಾಧಿಪತಿಗಳ ಈ ಸಮಾವೇಶವು ಒಕ್ಕೊರಲಿನಿಂದ ಸ್ವೀಕರಿಸಿ, ಸರ್ಕಾರವು ಇವುಗಳ ಕಡೆಗೆ ತೀವ್ರವಾಗಿ ಗಮನಕೊಡಬೇಕೆಂದು ಒತ್ತಾಯಿಸುತ್ತದೆ.

ಬಸವ ಪಂಚಮಿ ೩೦-೭-೧೯೮೭ರಿಂದ ಹೋರಾಟ ಆರಂಭಿಸಲು ಕರೆ

ಆದರೆ ಇನ್ನು ತಾಳ್ಮೆಯಿಂದ ಕಾಯುವ ಸಮಯವು ದಾಟಿ ಹೋಗಿದೆ. ಆದ್ದರಿಂದ ಅನಿವಾರ್ಯವಾಗಿ ಅಹಿಂಸಾತ್ಮಕ ಚಳುವಳಿಗೆ ಕರೆಯನ್ನು ಕೊಡುವ ಸನ್ನಿವೇಶವನ್ನು ಸರ್ಕಾರವು ತಂದು ಒದಗಿಸುತ್ತಿದೆ ಎಂದು ಸಂಶಯ ಪಡುವ ಕಾಲವು ಒದಗಿದೆ.

ಈ ಎಲ್ಲ ಇತಿಹಾಸದ ಹಿನ್ನೆಲೆಯಲ್ಲಿ ಸಂಗಮೇಶ್ವರ ದೇವಾಲಯವನ್ನು ಉಳಿಸಿಕೊಳ್ಳುವ ಸಲುವಾಗಿ ಹಂತಹಂತವಾಗಿ ಚಳುವಳಿಯನ್ನು ಮಾಡಲು ಇದೀಗ ನಿರ್ಧರಿಸಲಾಗಿದೆ. ಮೊದಲನೆಯ ಹಂತದ ಚಳುವಳಿಯು ಅಹಿಂಸಾತ್ಮಕವಾಗಿದ್ದು, ನಾಡಿನಾದ್ಯಂತ ಸಂಘ-ಸಂಸ್ಥೆ-ಮಠಮಾನ್ಯಗಳವರು ಮೆರವಣಿಗೆಯಲ್ಲಿ ಹೋಗಿ ಜಿಲ್ಲಾಧಿಕಾರಿಗಳನ್ನು ಕಂಡು ಸಂಗಮೇಶ್ವರ ದೇವಾಲಯವನ್ನು ಇದ್ದಲ್ಲಿಯೇ ಆಧುನಿಕ ತಂತ್ರಜ್ಞಾನ ಬಳಸಿ ಭದ್ರಪಡಿಸಬೇಕೆಂಬ ಬಗ್ಗೆ ಮನವಿಗಳನ್ನು ಸಲ್ಲಿಸಿ, ಸರ್ಕಾರಕ್ಕೆ ತೀವ್ರವಾಗಿ ಕಾರ್ಯೋನ್ಮುಖವಾಗಲು ಒತ್ತಡ ತರುವುದು.

ಈ ಅಹಿಂಸಾತ್ಮಕ ಚಳುವಳಿಯನ್ನು ಇದೇ ತಿಂಗಳ 30ನೆಯ ತಾರೀಖು, ಶ್ರಾವಣ ಶುದ್ಧ ಪಂಚಮಿಯಂದು ಒದಗಿ ಬರುವ ಬಸವ ಪಂಚಮಿಯಂದು ಆರಂಭಿಸಬೇಕು. ಬಸವ ಪಂಚಮಿಯಂದು ಸಮಾಜ ಬಾಂಧವರು, ತತ್ತ್ವಾಭಿಮಾನಿಗಳು ಒಂದೆಡೆ ಸೇರಿ ಬಸವಣ್ಣನವರ ಭಾವಚಿತ್ರದ ಮುಂದೆ, ಕೂಡಲ ಸಂಗಮ ದೇವಾಲಯ ರಕ್ಷಣೆಗೆ ಪಣತೊಟ್ಟು ಮನವಿ ಸಲ್ಲಿಸಲು ಆರಂಭಿಸಬೇಕು.

ಇಷ್ಟಾಗಿಯೂ ನಿರ್ಧಾರ ಕೈಗೊಳ್ಳಲು ಸರ್ಕಾರವು ವಿಳಂಬ ನೀತಿಯನ್ನು ಅನುಸರಿಸಿದರೆ ಚಳುವಳಿಯನ್ನು ತೀವ್ರಗೊಳಿಸಿ ರಾಸ್ತಾರೋಕೋ, ರೈಲ್‌ರೋಕೋ,

ಅನ್ನ ಸತ್ಯಾಗ್ರಹ, ಬಂದ್ ಮುಂತಾಗಿ ಸಂಯೋಜಿಸುವುದು, ಅಖಿಲ ಭಾರತ ವೀರಶೈವ ಮಹಾಸಭೆ ಮತ್ತು ವೀರಶೈವ ಮಠಾಧಿಪತಿಗಳ ಸಮಿತಿ, ರಾಷ್ಟ್ರೀಯ ಸಮಗ್ರತಾ ಸಂಘಟನೆ, ಮತ್ತು ಇನ್ನಿತರ ತತ್ತ್ವಾಭಿಮಾನಿ ಸಂಸ್ಥೆಗಳ ಜಂಟಿ ಕರೆಗೆ ಅನುಸಾರವಾಗಿ ಬಸವ ತತ್ತ್ವಾಭಿಮಾನಿಗಳು, ಧರ್ಮಾಭಿಮಾನಿಗಳು ಚಳುವಳಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಸರ್ಕಾರವು ಮಠಾಧೀಶರನ್ನು, ಜನಸಮುದಾಯವನ್ನು ಉಗ್ರ ಚಳುವಳಿಗೆ ಪ್ರೋತ್ಸಾಹಿಸದೆ ತೀವ್ರವಾಗಿ ಆಶ್ವಾಸನೆಗಳನ್ನು ನೀಡಿ, ಆದಷ್ಟು ಬೇಗನೆ ದೇವಾಲಯ ರಕ್ಷಣೆಗೆ ಯೋಜನೆಯನ್ನು ರೂಪಿಸುವುದೆಂದು ವಿಶ್ವಾಸಪೂರ್ವಕವಾಗಿ ನಂಬೋಣ.

"ಸಮಾಜದ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಎಲ್ಲರೂ ಒಟ್ಟಾಗಿ ಪ್ರಯತ್ನಿಸಬೇಕು. ಸಾಮೂಹಿಕವಾದೊಂದು ಸಾಮಾನ್ಯ ವೇದಿಕೆ ಇಲ್ಲದಿರುವುದರಿಂದ ಏನಾದರೂ ಸಮಸ್ಯೆಗಳು ಹುಟ್ಟಿದಾಗ ಚಿಂತನೆ ಮಾಡಲು ಅವಕಾಶವಿರದು. ಹೀಗಾಗಿ ಬೆಂಕಿಬಿದ್ದಾಗ ಭಾವಿ ತೋಡುವ ಪ್ರಯತ್ನ ಆರಂಭವಾಗುತ್ತದೆ. ಕೂಡಲ ಸಂಗಮದ ವಿಷಯದಲ್ಲಿಯೂ ಸಾಮೂಹಿಕ ಚರ್ಚೆ ಮಾಡಿ ಮಠಾಧಿಕಾರಿಗಳು ನಿರ್ಧಾರಕ್ಕೆ ಬರದೆ ತಾವು ತಾವೇ ನಿರ್ಧಾರಮಾಡಿದ್ದರಿಂದ ಈ ಪರಿಸ್ಥಿತಿಯಾಯಿತು. ಇನ್ನು ಮುಂದೆಯಾದರೂ ಎಲ್ಲರೂ ಕೂಡಿ ಆಲೋಚನೆ ಮಾಡುವಂತೆ ಕಾರ್ಯಮಾಡುವಂತೆ ಆಗಬೇಕು. ದೇವಾಲಯವು ಇದ್ದಲ್ಲಿಯೇ ಉಳಿಯಬೇಕು ಎಂದು ಮಠಾಧಿಕಾರಿಗಳು ಪುನರಾಲೋಚನೆ ಮಾಡಿ ಹೇಳುವುದನ್ನು, ತಮ್ಮ ಪ್ರತಿಷ್ಠೆಗೆ ಕುಂದುಂಟು ಮಾಡುವಂಥಾದ್ದು ಎಂದು ಭಾವಿಸಬಾರದು. ಅದೇ ರೀತಿ ಸರ್ಕಾರವಾದರೂ ಮರುಚಿಂತನೆ ಮಾಡಬೇಕು. ತನ್ನ ಆಲೋಚನೆಯ ದಿಕ್ಕನ್ನು ಬದಲಿಸಿಕೊಂಡರೆ ಅದರಿಂದ ಪ್ರತಿಷ್ಠೆಗೆ ಧಕ್ಕೆ ಬರದೆ, ಜನಾಭಿಪ್ರಾಯವನ್ನು ಎತ್ತಿ ಹಿಡಿದ ಗೌರವಕ್ಕೆ ಪಾತ್ರವಾಗುವುದೆಂದು ಪೂಜ್ಯ ಮಾತಾಜಿಯವರು ಹೇಳಿದರು.

ಪ್ರತಿವರ್ಷವೂ ಒಂದು ಶರಣಮೇಳವನ್ನು 'ಬಸವ ಕ್ರಾಂತಿದಿನ' (ಸಂಕ್ರಾಂತಿ)ದಂದು ಮಾಡಲಿದ್ದು, ಇದು ಎಲ್ಲರನ್ನೂ ಬೆಸೆಯುವ ಕಾರ್ಯವನ್ನು ಮಾಡುವುದೆಂದು ತಿಳಿಸಿದರು.

ಮಠಾಧಿಪತಿಗಳ ಸಮಿತಿಯ ಕಾರ್ಯಾಧ್ಯಕ್ಷ ಪೂಜ್ಯ ಶ್ರೀ ಶಿವರುದ್ರ ಸ್ವಾಮಿಗಳು, ಬೇಲೀಮಠ, ಬೆಂಗಳೂರು. ಅವರು ಮಾತನಾಡಿ ಮಠಾಧಿಕಾರಿಗಳಲ್ಲಿ ಯಾವುದೇ ಭಿನ್ನಾಭಿಪ್ರಾಯವು ಉಳಿದಿಲ್ಲ. ಅದು ಉಂಟಾಗಿದ್ದುದು ಕೇವಲ ತಪ್ಪು ಕಲ್ಪನೆಯಿಂದ. ಅದೀಗ ನಿವಾರಣೆಯಾಗಿದೆ. ಆದ್ದರಿಂದ ಈವರೆಗೆ ಮಠಾಧಿಕಾರಿಗಳ ಮೇಲೆ ಹೊಣೆ ಹಾಕಿ ತಪ್ಪಿಸಿ ಕೊಳ್ಳುತ್ತಿದ್ದ ಸರ್ಕಾರ ಇನ್ನು ಕಾಲಹರಣ ಮಾಡದಂತೆ ಎಚ್ಚರ ವಹಿಸಬೇಕಾಗಿದೆ." ಎಂದು ಮಾರ್ಮಿಕವಾಗಿ ಮಾತನಾಡಿದರು.

ಮೂರುಸಾವಿರ ಮಠಾಧೀಶರು ಆಶೀರ್ವಚನ ನೀಡುತ್ತ "ಮಠಾಧಿಪತಿಗಳ ಈ ಸಮ್ಮೇಳನದ ಹಿಂದೆ ಯಾವ ರಾಜಕೀಯ ಉದ್ದೇಶವೂ ಇಲ್ಲ. ಇದು ಸರ್ಕಾರಿ ವಿರೋಧಿ ಚಳುವಳಿಯೂ ಅಲ್ಲ. ನಮ್ಮ ಧರ್ಮ-ಸಂಸ್ಕೃತಿಗೆ ಸಂಬಂಧಿಸಿದ ಒಂದು ಸ್ಥಾನವನ್ನು ರಕ್ಷಿಸಿಕೊಡಿ ಎಂಬ ಬೇಡಿಕೆಯನ್ನು ಸರ್ಕಾರದ ಮುಂದಿಡುವುದಷ್ಟೇ ಈ ಸಮ್ಮೇಳನದ ಗುರಿ. ಯಾರಾದರೂ ದಾನಿಗಳು ಜಮೀನನ್ನು ದಾನಮಾಡಲು ಮುಂದಾದರೆ ನಾವು ಮೂರು ಸಾವಿರ ಮಠದ ಶಾಖಾ ಮಠವನ್ನು ಇಲ್ಲಿ ಮಾಡಲು ಸಿದ್ಧರಿದ್ದೇವೆ. ನಾವು ಮಠವನ್ನು ಕಟ್ಟುವುದಕ್ಕೆ ಅವಸರ ಮಾಡುವುದಿಲ್ಲ. ಈ ಕ್ಷೇತ್ರ ಸುಂದರವಾಗಿ ಬೆಳೆದ ನಂತರ ಕಟ್ಟುತ್ತೇವೆ. ನೀವುಗಳು ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಬಂದು ನೆರೆದಿರುವುದನ್ನು ನೋಡಿದರೆ ಈ ಕ್ಷೇತ್ರದ ಬಗ್ಗೆ ನಿಮಗಿರುವ ಉತ್ಕಟ ಭಾವನೆ ವ್ಯಕ್ತವಾಗುತ್ತದೆ" ಎಂದರು.

ಸಂಗಮೇಶ್ವರ ದೇವಾಲಯದ ಟ್ರಸ್ಟ್ ಕಮಿಟಿ ಚೇರ್ಮನ್ನರು ಉತ್ಸಾಹೀ ತರುಣ ಕಾರ್ಯಕರ್ತರೂ ಆದ ಶ್ರೀ ಎಸ್. ಜಿ. ಪಾಟೀಲರು ಮಾತನಾಡಿ, "ಇಷ್ಟೊಂದು ಜನ ಮಠಾಧೀಶರು ಇಲ್ಲಿಗೆ ಬಂದಿರುವುದನ್ನು ನೋಡಿ ನಮಗೆಲ್ಲ ಆನಂದ-ಆಶ್ಚರ್ಯ ಉಂಟಾಗಿವೆ. ಒಂದು ವೇದಿಕೆಯ ಮೇಲೆ ಇವರೆಲ್ಲ ಆಸೀನರಾಗಿರುವುದನ್ನು ಕಂಡಾಗ ಅನುಭವ ಮಂಟಪದ ದೃಶ್ಯ ಕಣ್ಣಿಗ ಕಟ್ಟುತ್ತದೆ. ಸಂಗಮೇಶ್ವರನ ನೆವದಿಂದಲಾದರೂ ಅಂತೂ ಎಲ್ಲರೂ ಒಂದು ಗೂಡಿರುವುದು ಅತ್ಯಂತ ಶುಭ ಸಂಗತಿಯು. ದೇವಸ್ಥಾನದ ಟ್ರಸ್ಟಿನವರೇ ದೇವಾಲಯವನ್ನು ಕೀಳಲು ಕಾರಣ ಎಂಬ ಅಪಪ್ರಚಾರ ಉಂಟಾಗಿದೆ. ನಾವೂ ಹಾಗೇ ಬಯಸಿದವರಲ್ಲ ತಾಂತ್ರಿಕ ವಿಷಯದಲ್ಲಿ ಮಾಹಿತಿ ಇಲ್ಲದೆ, ಬೇರೊಂದು ಜಾಗದಲ್ಲಿಯಾದರೂ ದೇವಾಲಯ ಉಳಿಯಲಿ ಎಂದು. ಮೂಲ ಲಿಂಗವಾದರೂ ಸುರಕ್ಷಿತವಾಗಿ ಉಳಿಯಬೇಕೆಂದು ಬಯಸಿದವರು. ಆದ್ದರಿಂದ ಇಂದು ಎಲ್ಲರ ಎದುರಿಗೇ ದೇವಾಲಯ ಸುರಕ್ಷಿತವಾಗಿ ಉಳಿಯಬೇಕೆಂಬುದು ನಮ್ಮ ಅಪೇಕ್ಷೆ ಎಂದು ಘೋಷಿಸುತ್ತೇನೆ".

ಬಸವ ಧರ್ಮ ಪೀಠದ ಗೌರವಾಧ್ಯಕ್ಷರು, ವಿಶ್ವಕಲ್ಯಾಣ ಮಿಷನ್ ಸಂಸ್ಥೆಯ ಅಧ್ಯಕ್ಷರೂ ಆದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು ಕೆಲವು ಮಹತ್ವಪೂರ್ಣ ಸಂಗತಿಗಳನ್ನು ಪ್ರತಿಪಾದಿಸಿದರು.

"ಇಂದು ನನಗೆ ಭಾವ ತುಂಬಿ ಬಂದಿದೆ. ಮಾತನಾಡಲು ಶಬ್ದಗಳು ಸಾಲವು. ನಮ್ಮ ಎಡಗಡೆ ಬದಿಗೆ ಅಪ್ಪನ ಸ್ಥಾನ (ಬಸವೇಶ್ವರ ಐಕ್ಯಮಂಟಪ) ಬಲಬದಿಗೆ ಅಜ್ಜನ ಸ್ಥಾನ (ಸಂಗಮೇಶ್ವರ ಗುಡಿ) ಹಿಂದೆ ಕೃಷ್ಣಾನದಿಯ ಅಲೆಗಳ ಕಲರವ. ದೇವನ ಸಂಕಲ್ಪದಂತೆಯೇ ನಾವಿಂದು ನೆರೆದಿದ್ದೇವೆ. ಸಂಗಮೇಶ್ವರ ದೇವಾಲಯ ಕುರಿತು ಎಲ್ಲರೂ ಪ್ರತಿಪಾದಿಸಿದ್ದಾರೆ; ನಿರ್ಣಯಗಳು ಮಂಡಿಸಲ್ಪಟ್ಟಿವೆ. ಅದಕ್ಕೆ

ನಮ್ಮೆಲ್ಲರ ಅನುಮೋದನೆಯಿದೆ. ನಾನು ವಿಶೇಷವಾಗಿ ಒಂದೆರಡು ಮಾತುಗಳನ್ನು ಕುರಿತು ಹೇಳುತ್ತೇನೆ."

"ಕೂಡಲ ಸಂಗಮಕ್ಕೆ ಬಂದ ಮೇಲೆ ಒಂದು ದಿನ ನಾನು ಅಡ್ಡಾಡುತ್ತ ಹೋಗುತ್ತಿದ್ದೆ. ಅಲ್ಲಿ ಒಬ್ಬ ಕಾಯಕ ಜೀವಿ ಕಟ್ಟಿಗೆ ಕಡಿದು ಹೊರೆ ಕಟ್ಟುತ್ತಿದ್ದ. ಅವನು ಒಂದೇ ಒಂದು ಕಡೆ ಕಟ್ಟಿದ. ಇನ್ನೊಂದು ಕಡೆ ಬಿಚ್ಚಿದ್ದರಿಂದ ಎತ್ತಲು ಆಗಲಿಲ್ಲ ಸರಿ, ಮಧ್ಯೆ ಒಂದು ಕಟ್ಟು ಹಾಕಿದ ಎರಡೂ ತುದಿಗೆ ಚದುರಿದವು ಆಗಲೂ ಎತ್ತಿ ಹೊರಲು ಆಗಲಿಲ್ಲ ಆಗ ನಾನು ಹೇಳಿದೆ: "ತಮ್ಮಾ, ಮೂರು ಕಟ್ಟು ಹಾಕು ಅಂದರೆ ಕಟ್ಟಿಗೆ ಚದುರವು, ಹೊರಲು ಸುಲಭ" ಎಂದೆ. ಅದೇ ರೀತಿ ಯಾವುದೇ ಸಮಾಜ ಎಂಬ ಕಟ್ಟಿಗೆ ಹೊರೆ ಕಟ್ಟಲು 3 ಕಟ್ಟು ಬೇಕು. ಧರ್ಮಗುರು-ಧರ್ಮಶಾಸ್ತ್ರ-ಧರ್ಮಕ್ಷೇತ್ರ ಎಂಬುವವೇ ಆ ಮೂರು ಕಟ್ಟುಗಳು. ಬಸವಣ್ಣ-ವಚನ ಸಾಹಿತ್ಯ-ಕೂಡಲ ಸಂಗಮ ಎಂಬ ಮೂರು ಕಟ್ಟುಗಳನ್ನು ಹಾಕಿ ಈ ಸಮಾಜ ಹೊರೆಯನ್ನು ಕಟ್ಟೋಣ."

ಈ ಉದಾಹರಣೆ-ತತ್ತ್ವಗಳಿಂದ ಜನರು ಹರ್ಷಿತರಾಗಿ ಚಪ್ಪಾಳೆ ತಟ್ಟಿದರು,

"ಕೆಲವರು ಕೇಳುತ್ತಾರೆ, ಬಸವಣ್ಣನವರ ವಿಚಾರಗಳು, ವಚನ ಸಾಹಿತ್ಯ ಅಷ್ಟು ಮಾರ್ಮಿಕವಾಗಿ ಉದ್ಬೋಧಕವಾಗಿ ಇದ್ದರೆ ಅದೇಕೆ ನಮ್ಮ ಸಮಾಜದ-ದೇಶದ ಸಮಸ್ಯೆ ಪರಿಹಾರವಾಗಿಲ್ಲ ಎಂದು. ನೋಡಿ, ಉತ್ಕೃಷ್ಟವಾದ ಬೀಜಗಳು ಇದ್ದ ಮಾತ್ರಕ್ಕೆ ಬೆಳೆ ಬರದು. ನಮ್ಮ ಧರ್ಮಗುರುಗಳು, ಜನರು ಈ ಬೀಜಗಳನ್ನು ಪ್ಲಾಸ್ಟಿಕ್ ಚೀಲ ಸಮೇತ ಬಿತ್ತುತ್ತಾರೆ ಅಂದರೆ ಅವು ಹೇಗೆ ಮೊಳೆಯುತ್ತವೆ? ಅಂದರೆ ಆಚಾರ ಎಂಬ ಪ್ಲಾಸ್ಟಿಕ್ ಚೀಲದಲ್ಲಿ ಇರುವ ವಿಚಾರ, ತತ್ತ್ವ ಎಂಬ ಬೀಜಗಳನ್ನು ಅವುಗಳ ಮೂಲಾರ್ಥ ಗ್ರಹಿಸಿ ಸಮಾಜ ಕ್ಷೇತ್ರದಲ್ಲಿ ಬಿತ್ತಬೇಕು. ಇಲ್ಲವಾದರೆ ಅವು ಹೇಗೆ ಬೆಳೆಯಬಲ್ಲವು?"

"ಇಬ್ಬರು ಕೃಷಿಕರಿದ್ದಾರೆ ಎಂದು ಕೊಳ್ಳಿ ಒಬ್ಬನಿಗೆ ಉತ್ತಮ ಗುಣಮಟ್ಟದ ಬೀಜ ಲಭ್ಯವಾಗಿದೆ. ಇನ್ನೊಬ್ಬನಿಗೆ ಸಾಮಾನ್ಯ ಗುಣ ಮಟ್ಟದ ಬೀಜ ಲಭ್ಯವಾಗಿದೆ. ಆದರೆ ಎರಡನೆಯವನೇ ಒಳ್ಳೆಯ ಫಸಲನ್ನು ಪಡೆಯುತ್ತಿದ್ದಾನೆ ಇದರ ಅರ್ಥವೇನು? ಎರಡನೆಯವನು ಉತ್ತಮ ಒಕ್ಕಲಿಗ ಎಂದು ತಾನೆ? ಅವನು ಪ್ರಾಮಾಣಿಕ ಪರಿಶ್ರಮ ಮಾಡುತ್ತಿದ್ದಾನೆ ಎಂದೇ ನಾವು ಊಹಿಸಬೇಕಾಗುತ್ತದೆ. ಹಾಗೆಯೇ ಇಂದು ಜಾತಿವರ್ಣ ವರ್ಗರಹಿತ ಸಮಾಜವನ್ನು ಕಟ್ಟುವಲ್ಲಿ ನೆರವಾಗುವ ಅತ್ಯಮೂಲ್ಯ ಸೂತ್ರಗಳಂತಿವೆ ವಚನಗಳು ಅವುಗಳನ್ನು ಸಮಾಜದಲ್ಲಿ ಸರಿಯಾಗಿ ಬಿತ್ತಿ ಬೆಳೆಸಿಲ್ಲ ಎಂದರೆ ಇದರರ್ಥವೇನು? ನಾವು (ಅಂದರೆ ಧರ್ಮ ಗುರುಗಳೆಂಬ ಕೃಷಿಕರು) ಪ್ರಾಮಾಣಿಕವಾಗಿ, ಪರಿಶ್ರಮ ಪಟ್ಟು ಕೆಲಸ ಮಾಡಿಲ್ಲವೆಂದು ತಾನೆ?

ಕೆಲವು ಮೂಢರಿದ್ದಾರೆ. ಅವರು ಬಸವಣ್ಣನವರನ್ನು ಗುರುವೆನ್ನಲು ಸಿದ್ಧರಿಲ್ಲ ಜಾತಿವಾದಿ ಗುಂಪುಗಳ ಸುದ್ದಿ ಬಿಟ್ಟು ಬಿಡಿ. ವಿರಕ್ತರನ್ನು ತೆಗೆದುಕೊಂಡರೆ ಅವರ ಆದ್ಯರು ಬಸವಣ್ಣನವರು ಮತ್ತು ಪ್ರಭುದೇವರು. ವಿರಕ್ತರಿಗೆ ಕೊಡಲ್ಪಡುವ ಮಂತ್ರವು "ಶ್ರೀ ಗುರು ಬಸವ ಲಿಂಗಾಯ ನಮಃ." ಹಲವಾರು ವಿರಕ್ತರು ತಾವು ಗುರುಗಳು, ಜಗದ್ಗುರುಗಳು ಎಂದು ಕೊಳ್ಳುತ್ತಾರೆ. ಆದರೆ ತಮ್ಮ ಆದಿಗುರುವಾದ ಬಸವಣ್ಣನನ್ನು ಗುರು ಎನ್ನರು. ನೋಡಿ, ಯಾರಿಗೇ ಆದರೂ ಗುರುತ್ವ ಬರಬೇಕಾ ದರೆ ಅರ್ಹತೆಯಿಂದಲಾದರೂ ಬರಬೇಕು. ಅಥವಾ ಪರಂಪರೆಯಿಂದಲಾದರೂ ಬರಬೇಕು ದೇಸಾಯಿಯ ಮಗ ದೇಸಾಯಿಯಾಗುವಂತೆ. ಪಾಟೀಲನ ಮಗ ಪಾಟೀಲ ನೆನ್ನಿಸಿಕೊಳ್ಳುವಂತೆ ಬಸವಣ್ಣನವರು, ಪ್ರಭುದೇವರು ಗುರುವಾದರೆ ತಾನೇ ಅವರ ಪರಂಪರೆಯವರೂ ಗುರು-ಜಗದ್ಗುರುವಾಗಬಲ್ಲರು, ಈ ಸರಳ ಸೂತ್ರವನ್ನೂ ಅರಿಯ ದಿದ್ದರೆ ಏನು ಮಾಡುವುದು."

ಪೂಜ್ಯ ಸದ್ಗುರು ಲಿಂಗಾನಂದ ಸ್ವಾಮಿಗಳ ಒಂದೊಂದು ಮಾತನ್ನೂ ಹರ್ಷದಿಂದ ಸ್ವೀಕರಿಸಿ ಜನರು ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಅಧ್ಯಕ್ಷರಾಗಿದ್ದ ಶ್ರೀ ಐ. ಎಂ. ಮುಗದುಮ್‌ರವರು ಮಾತನಾಡಿದರು. "ಸಂಗ ಮೇಶ್ವರ ದೇವಾಲಯ ಸಂರಕ್ಷಣೆ ಕುರಿತು ಒಮ್ಮತವು ರೂಪುಗೊಂಡಿರುವುದು ಹರ್ಷದ ಸಂಗತಿ. ಯಾರೋ ಒಬ್ಬರು ಒಂದು ಪ್ರಶ್ನೆ ಕೇಳಿದ್ದಾರೆ ಕೆಲವರು ಮಠಾಧಿಕಾರಿಗಳು ಈ ನಿರ್ಣಯ ಅಧಿಕೃತವಲ್ಲ ಎಂದು ನುಡಿದರೆ ಏನು ಮಾಡಬೇಕು ಎಂದು. ನೋಡಿ ಒಂದು ಆರ್ಕೆಸ್ಟ್ರಾಗೆ ನಾವು ಸಿದ್ಧತೆ ನಡೆಸುತ್ತೇವೆ. ತರಬೇತಿಗೆ ಕರೆಯುತ್ತೇವೆ ಆಗ ಬರದೆ ಆರ್ಕೆಸ್ಟ್ರಾಕ್ಕೆ ನೇರವಾಗಿ ಬಂದು ಅಪಸ್ವರ ನುಡಿಸಿದರೆ ಸಮೂಹದಿಂದ ಆಚೆ ಕಳಿಸಬೇಕಾಗುತ್ತದೆ. ಹಾಗೆ ಸಾಕಷ್ಟು ಆಮಂತ್ರಣ ಕಳಿಸಿದ್ದೇವೆ, ಅವಕಾಶ ನೀಡಿದ್ದೇವೆ, ಸಂದೇಹಗಳಿದ್ದರೆ ಚರ್ಚಿಸಿರಿ ಎಂದಿದ್ದೇವೆ. ಇಷ್ಟಾದರೂ ಯಾವುದರಲ್ಲಿಯೂ ಸಹ ಭಾಗಿಯಾಗದೆ ಪ್ರತಿಷ್ಠೆಯನ್ನು ಪ್ರದರ್ಶಿಸಿದರೆ ಅನಿವಾರ್ಯವಾಗಿ ನಿರ್ಲಕ್ಷಿಸಬೇಕಾಗು ತ್ತದೆ. ಒಮ್ಮತಕ್ಕೆ ಬರದಾಗ ಬಹುಮತವು ಕಾರ್ಯ ಮಾಡುತ್ತದೆಯಷ್ಟೆ. ಈಗ ಎಲ್ಲರೂ ಒಂದಾಗಿ ಸರ್ಕಾರದ ಮುಂದೆ ಬೇಡಿಕೆ ಇಡುವುದು; ಅದರ ಕಾರ್ಯಾಚರಣೆ ಗಾಗಿ ಯತ್ನಿಸುವುದೊಂದೇ ಉಳಿದಿರುವುದು." ಎಂದು ಸಮಾರೋಪ ಮಾಡಿದರು.

ಶ್ರೀ ದಯಾನಂದ ಸ್ವಾಮಿಗಳು ಶರಣು ಸಮರ್ಪಣೆ ಮಾಡಿದ ನಂತರ ಸಾಮೂ ಹಿಕವಾಗಿ ಮಂಗಲವಾಯಿತು.

* *

ಜೀವನ ಭೂಗತ ರೈಲಿದ್ದ ಹಾಗೆ; ಪಯಣಕ್ಕಿಂತ ಹೆಚ್ಚು ಕಾಲ ಕೊಳವೆಗಳನ್ನು ಪಾರುಮಾಡುವುದರಲ್ಲೇ ಕಳೆಯುತ್ತೀರಿ.

ಜೀವನ ಟ್ಯಾಕ್ಸಿಯಂತೆ ಕೂಡ; ಮೀಟರು ನೀವು ನಿಂತಾಗಲೂ ಟಿಕಿಟಿಕಿಸು ತ್ತಿರುತ್ತದೆ.

ಒಂದು ಹೃದಯ ಸ್ಪರ್ಶಿ ಸನ್ನಿವೇಶ

—ಮಾತಾಜಿ

18-7-1987 ಶನಿವಾರ, ಬಾಗಿಲುಕೋಟೆಯಲ್ಲಿ ಚರಂತಿ ಮಠದ ಶಿವಾನು ಭವ ಮಂಟಪದ ಮೈದಾನದಲ್ಲಿ ಪ್ರವಚನವು ದಿನದಿನಕ್ಕೆ ಕಳೆಯೇರಿ ಅತ್ಯಂತ ಯಶಸ್ವಿ ಯಾಗಿ ನಡೆದಿದೆ. ಮುಕ್ತಾಯದ ದಿನಗಳಲ್ಲಿ ಭಾಗವಹಿಸಲು ನಾನು ಹೋಗಿದ್ದೆ. 12-7-1987 ರಿಂದ ನನ್ನ ಪ್ರವಚನ. ಪ್ರವಚನ ನಡೆಯುತ್ತಿರುವಾಗ ಒಬ್ಬರು ವಯೋವೃದ್ಧರಾದ, ಕಾಯವು ಮಾಗಿ ಹಣ್ಣಾದ ಸ್ವಾಮಿಗಳು ಬಂದು ಬಿಟ್ಟರು. ಅವರು ಯಾರೆಂಬ ಪರಿಚಯ ನನಗೆ ಅಷ್ಟಾಗಿ ಇಲ್ಲ. ವೇದಿಕೆಯ ಮೇಲೆ ಮತ್ತೊಂದು ಕುರ್ಚಿಯಿಲ್ಲ. ಆಗ ಪೂಜ್ಯ ಅಪ್ಪಾಜಿ ಅವರನ್ನು ಸ್ವಾಗತಿಸಿ ತಮ್ಮ ಕುರ್ಚಿಯನ್ನು ಕೊಟ್ಟು ತಾವು ನಿಂತರು. (ಜನರು ಈ ಅನಿರೀಕ್ಷಿತ ಘಟನೆಯಿಂದ ಭಾವ ಪುಳಕಿತ ರಾಗಿ ಚಪ್ಪಾಳೆ ತಟ್ಟಿದರು.) ಅಷ್ಟರಲ್ಲಿ ಕಾರ್ಯಕರ್ತ ಬಸವರಾಜ ಕುರ್ಚಿ ತೆಗೆದು ಕೊಂಡು ಓಡಿ ಬಂದು ಅಪ್ಪಾಜಿಗೆ ಕೊಟ್ಟನು.

ನಾವುಗಳು ಅಪ್ಪಾಜಿಯನ್ನು ಕಾಣದವರೇನಲ್ಲ : ಅತ್ಯಂತ ಸಮೀಪವರ್ತಿಗಳು ; ಆದರೂ...ಅಂದು ಮತ್ತೊಮ್ಮೆ "ನಮ್ಮ ಅಪ್ಪಾಜಿ ಬಹಳ ದೊಡ್ಡವರು." ಎನ್ನಿಸಿ ಹೃದಯ ತುಂಬಿ ಬಂದಿತು. (ಅದೇ ಸಂದರ್ಭದಲ್ಲಿ ಪ್ರವಚನ ಮಾಡುತ್ತಿದ್ದ ನಾನು ಗುರುಗಳು ಎದ್ದು ನಿಂತಿದ್ದಾಗಲೂ ನಾನು ಎದ್ದು ನಿಲ್ಲಲಿಲ್ಲವಲ್ಲ ಎಂದುಕೊಂಡು ಪಶ್ಚಾ ತ್ತಾಪವೆನಿಸಿತು.)

'ತಾವು ಮಾತಾಡುವಿರಾ ?' ಎಂದು ಅಪ್ಪಾಜಿ ಆ ಸ್ವಾಮೀಜಿಗಳನ್ನು ಕೇಳಿದಾಗ ಅವರು ಹರ್ಷದಿಂದ ಒಪ್ಪಿದರು. ಅವರ ಮಾತುಗಳು ಬಲು ವಿಶೇಷವಾಗಿವೆ.

"ನಾನು 97 ವರ್ಷದ ವೃದ್ಧ. ನಾನು ಭಾಷಣಕಾರನಲ್ಲ. ಇಂದು ನಾನಾಗಿ ಸ್ವತಃ ಇಲ್ಲಿಗೇ ಬಂದಿದ್ದೇನೆ. ಏಕೆ ಗೊತ್ತೆ ? ನಿಮ್ಮ ಮುಂದೆ, ಅಂದರೆ ಬಾಗಿಲು ಕೋಟೆಯ ಮಹಾಜನರ ಮುಂದೆ ನನ್ನ ಹೃದಯವನ್ನು ಬಿಚ್ಚಿಡಲು.

ಈ ಊರಿನಲ್ಲಿ ಲಿಂಗಾನಂದ ಸ್ವಾಮಿಗಳ ಪ್ರವಚನ ಆರಂಭವಾಯಿತು ಎಂಬುದು ತಿಳಿದಾಗ ನಾನು ಸಂತೋಷ ಪಡಲಿಲ್ಲ ; ವಿರೋಧಿಸಿದೆ. ಪ್ರವಚನಕ್ಕೆ ಜಾಗವನ್ನೇಕೆ ಕೊಟ್ಟುದು ಎಂದು ಚರಂತಿ ಮಠದ ಸ್ವಾಮಿಗಳನ್ನು ಕೇಳಿದೆ. ಅದರೆ...ಬರಬರುತ್ತ ಪ್ರವಚನ ಮಾಡಿದ ಪರಿಣಾಮ, ಬೀರಿದ ಪ್ರಭಾವ, ಜನರಲ್ಲಿ ಆದ ಪರಿವರ್ತನೆ ಕಂಡು ಆಶ್ಚರ್ಯಗೊಂಡೆ. ನಾನು ವಿರೋಧಿಸಿದ್ದು ಮಹಾಪರಾಧವಾಯಿತು ಎಂದು

ಕೊಂಡೆ. ನನ್ನ ಬದುಕಿನಲ್ಲಿ ನಾನು ಮಾಡಿದ್ದು ಕೇವಲ ತಪಸ್ಸನ್ನು. ಈ ತಪಸ್ಸಿನ ಫಲವಾಗಿಯೇ ಈ ಉಭಯ ಮಹಾತ್ಮರು ಅವತಾರಿಪುರುಷರಾಗಿ ಬಂದಿದ್ದಾರೆ ಎಂದೆನ್ನಿಸ ತೊಡಗಿತು. "ಬಸವಾ, ಬಸವಾ... ಎಂದು ಸದಾ ನನ್ನ ಪಾಡಿಗೆ ನಾನು ನಾಮಸ್ಮರಣೆ ಮಾಡುತ್ತಿದ್ದೆ. ಇಂತಹ ಬಸವ ಮಂತ್ರ ಎಲ್ಲರ ಬಾಯಿಯಲ್ಲಿ, ಕಿವಿಯಲ್ಲಿ ಉಲಿಯುವಂತೆ ಮಾಡಿದ ಈ ಮಹಾತ್ಮರನ್ನು ವಿರೋಧಿಸಿದೆನಲ್ಲ ಎಂದು ಪಶ್ಚಾತ್ತಾಪ ಪಟ್ಟು, ನಿಮ್ಮೆಲ್ಲರ ಮುಂದೆ ಇದನ್ನು ಹೇಳಿ ನನ್ನ ತಪ್ಪನ್ನು ಒಪ್ಪಿಕೊಳ್ಳಬೇಕೆಂದು ಬಂದಿದ್ದೇನೆ. ಇದು ಸತ್ಯ ಸಂಗತಿ."

ಎಂದು 97 ವರ್ಷ ವಯಸ್ಸಿನ ಪೂಜ್ಯ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು, ತೆಂಗಿನಮಠ ಅವರು ಗದ್ಗದಿತ ಕಂಠದಿಂದ ಭಾವುಕರಾಗಿ ಹೇಳಿದಾಗ ಹಲವಾರು ಜನರ ಕಣ್ಣಿನಲ್ಲಿ ಆನಂದ ಭಾಷ್ಪಗಳು ಹನಿಯುತ್ತಿದ್ದವು. "ಇಂಥಾ ಪ್ರಾಮಾಣಿಕ ಹೃದಯ-ಬುದ್ಧಿ ಎಷ್ಟು ಜನರಿಗೆ ಇರುತ್ತವೆ. ಒಂದು ವೇಳೆ ಹೃದಯ ಪರಿವರ್ತನೆಯಾಗಿದ್ದರೂ ಹೊರಗಡೆ ತೋರಿಸಿಕೊಳ್ಳುವರೆ?" ಎಂದು ಎಲ್ಲರೂ ಉದ್ಗರಿಸುವವರೆ !

ಪೂಜ್ಯ ಸ್ವಾಮೀಜಿ ಹೇಳಿದರು, "ಇನ್ನೊಂದು ವಾರ ಪ್ರವಚನ ಮುಂದುವರಿಸಿರಿ. ಜನರಿಗೆ ಬಹಳ ಉಪಕಾರವಾಗುತ್ತೆ. ಇವರು ಮಾಡುವ ಎಲ್ಲ ಕಾರ್ಯಕ್ಕೆ ನನ್ನ ಬೆಂಬಲವಿದೆ. ನಾನು ನನ್ನ ಕಾಣಿಕೆ ಎಂದು 1001-00ರೂ.ಗಳನ್ನು ಬಸವ ಧರ್ಮಪೀಠಕ್ಕೆ ಕೊಡುತ್ತಿದ್ದೇನೆ." ಎಂದು ಮಾತು ಮುಗಿಸಿದಾಗ ಎಲ್ಲರೂ ಸಂಭ್ರಾಂತ ಸ್ಥಿತಿಯಲ್ಲಿದ್ದರು.

❋ ❋

ಬಾಗಿಲುಕೋಟೆಯಲ್ಲಿ

ರಾಷ್ಟ್ರೀಯ ಬಸವ ದಳದ ಉದ್ಘಾಟನೆ

26-7-1987ರಂದು ಬಾಗಿಲುಕೋಟೆಯಲ್ಲಿ, ವಿಶ್ವಕಲ್ಯಾಣ ಮಿಷನ್ ಅಧ್ಯಕ್ಷರಾದ ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಸದಿಚ್ಛೆಯ ಮೇರೆಗೆ, ಅವರ ದಿವ್ಯ ಸನ್ನಿಧಿಯಲ್ಲಿ ರಾಷ್ಟ್ರೀಯ ಬಸವ ದಳದ ಉದ್ಘಾಟನೆಯನ್ನು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ನೆರವೇರಿಸಿದರು. ರಾಷ್ಟ್ರಪ್ರಜ್ಞೆ ಮತ್ತು ಧರ್ಮಪ್ರಜ್ಞೆಗಳನ್ನು ಜನಮನದಲ್ಲಿ ಬೆಳೆಸುವ ಉದ್ದೇಶ ಹೊತ್ತು ಸೇವಾಕಾರ್ಯವನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಬಸವ ದಳವು ರೂಪುಗೊಂಡಿರುವುದಾಗಿ ತಿಳಿಸಿ, ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷೆ ಪೂಜ್ಯ ಮಾತಾಜಿಯವರು "ಬಸವ ದಳದ" ಕಾರ್ಯಕ್ರಮವೇನೆಂಬುದನ್ನು ಮನದಟ್ಟು ಮಾಡಿಕೊಟ್ಟರು. ಜಾತಿ-ವರ್ಣ-ವರ್ಗ

ರಹಿತ ಕಲ್ಯಾಣ ರಾಜ್ಯವನ್ನು ಕಟ್ಟುವ ಬಸವಣ್ಣನವರ ಆಶೋತ್ತರ ಈಡೇರಿಸಲು ರೂಪುಗೊಂಡಿರುವ ಈ ಸಂಸ್ಥೆ ರಾಜಕೀಯ ಪಕ್ಷಪಂಗಡಗಳ ಪ್ರಭಾವಕ್ಕೆ ಒಳಗಾಗದೆ ಜನರಿಗೆ ಧಾರ್ಮಿಕ, ನೈತಿಕ, ಸಾಂಸ್ಕೃತಿಕ ಸಂಸ್ಕಾರವನ್ನು ಕೊಡಬೇಕೆಂದು ಅಪ್ಪಣೆಕೊಡಿಸಿದರು.

ಪೂಜ್ಯ ಶ್ರೀ ಪ್ರಭುಸ್ವಾಮಿಗಳನ್ನು ಗೌರವಾಧ್ಯಕ್ಷರನ್ನಾಗಿ ಇರಿಸಿಕೊಂಡು ಅವರ ಮಾರ್ಗದರ್ಶನದಲ್ಲಿ ಕಾರ್ಯಮಾಡಬೇಕೆಂದು ಪೂಜ್ಯರು ತಿಳಿಸಿದರಲ್ಲದೆ, ಶ್ರೀ ಬಸವರಾಜ ಲುಕ್ಕ ಅವರನ್ನು ಕಾರ್ಯಾಧ್ಯಕ್ಷರನ್ನಾಗಿ, ಶ್ರೀ ಮಲ್ಲಪ್ಪ ಹುಲ್ಯಾಳ ಅವರನ್ನು ಕಾರ್ಯದರ್ಶಿಯಾಗಿ, ಶ್ರೀ ಎಸ್. ಜಿ. ಬೇವೂರರನ್ನು ಖಜಾಂಚಿಯನ್ನಾಗಿ ಆಯ್ಕೆ ಮಾಡಲಾಯಿತು. ನೂರಾರು ಜನ ಶರಣ-ಶರಣೆಯರು ರಾಷ್ಟ್ರೀಯ ಬಸವ ದಳದ ಸದಸ್ಯರಾಗುವ ಒಲವು ತೋರಿಸಿದರು. ಅಂದು ರಾಷ್ಟ್ರೀಯ ಬಸವದಳಗ ಪದಾಧಿಕಾರಿಗಳು ಸಮರ್ಪಣ ಮನೋಭಾವದಿಂದ ದುಡಿಯುವುದಾಗಿ ಪಣತೊಟ್ಟರು.

ಬಾಗಿಲುಕೋಟೆಯಲ್ಲಿ ಬಸವ ಪಂಚಮಿ ಆಚರಣೆ

ರಾಷ್ಟ್ರೀಯ ಬಸವ ದಳದ ಪ್ರಾರ್ಥನಾ ಸಭೆ ಗುರುವಾರ 30-7-1987ರ ಬಸವ ಪಂಚಮಿಯಂದು ನೆರವೇರುವ ಸದಾವಕಾಶ ದೊರೆಯಿತು. ಶ್ರಾವಣ ಶುದ್ಧ ಪಂಚಮಿಯಂದು ಒದಗಿ ಬರುವ ಬಸವ ಲಿಂಗೈಕ್ಯ ದಿನಾಚರಣೆಯನ್ನು, ಶ್ರೀ ಬಸವೇಶ್ವರ ಮಂಗಲ ಭವನದಲ್ಲಿ ಆಚರಿಸಲಾಯಿತು. ಸಂಜೆ 5 ಗಂಟೆಗೆ ಪೂಜೆ-ಪ್ರಾರ್ಥನೆ ವಚನ ಶಾಸ್ತ್ರ ಪಠಣಗಳು ನಡೆದು ಪ್ರಸಾದ ವಿತರಣೆಯೊಂದಿಗೆ ಕಾರ್ಯಕ್ರಮ ನೆರವೇರಿತು.

ದಿನಾಂಕ 2-8-1987ರಂದು ರವಿವಾರ ಸಂಜೆ ಸಾಮೂಹಿಕ ಪ್ರಾರ್ಥನಾ ಸಭೆ ಜರುಗಿ ಅಂದು ಕೂಡಲ ಸಂಗಮ ಸುಕ್ಷೇತ್ರದ ಉಳುವಿಗಾಗಿ ಸರ್ಕಾರಕ್ಕೆ ಮನವಿ ಅರ್ಪಿಸುವ ನಿರ್ಧಾರ ಕೈಗೊಳ್ಳಲಾಯಿತಲ್ಲದೆ ಸೋಮವಾರ 3-8-1987ರಂದು 10 ಗಂಟೆಗೆ ಶ್ರೀ ಚರಂತಿ ಮಠದಿಂದ ಹೊರಟು, ಮೆರವಣಿಗೆಯಲ್ಲಿ ಸಾಗಿ ಅಸಿಸ್ಟೆಂಟ್ ಕಮೀಷನರರಿಗೆ ಮನವಿ ಅರ್ಪಿಸಲಾಯಿತು.

ಚಿತ್ರದುರ್ಗದಲ್ಲಿ ಬಸವ ಪಂಚಮಿ ಆಚರಣೆ

ರಾಷ್ಟ್ರೀಯ ಬಸವ ದಳದ ಸಾಮೂಹಿಕ ಪ್ರಾರ್ಥನಾ ಸಮಿತಿ, ಚಿತ್ರದುರ್ಗ. ಇವರು ದಿ. 30-7-1987 ಗುರುವಾರದಂದು ಬೆಳಿಗ್ಗೆ 10-30ಕ್ಕೆ ಶ್ರೀ ನೀಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಬಸವಲಿಂಗೈಕ್ಯ ದಿನಾಚರಣೆಯನ್ನು ಆಚರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನ್ಯಾಯವಾದಿಗಳು, ತತ್ತ್ವಾಭಿಮಾನಿಗಳೂ ಆದ ಶರಣ ಜೆ. ಜಿ. ಬಸಪ್ಪನವರು ವಕೀಲರು ವಹಿಸಿದ್ದರು. ಬರ್ಮಾಶೆಲ್ ಏಜೆನ್ಸಿಯ ಪ್ರೊಪ್ರೈಟರರು, ಶ್ರೇಷ್ಠ ದಾನಿಗಳು ಧರ್ಮನಿಷ್ಠರೂ ಆದ ಶರಣ ವಿ. ಜಿ. ಸತ್ಯ

ನಾರಾಯಣ ಶೆಟ್ಟರು ಸ್ವಾಗತ ಬಯಸಿದರು. ಬಸವದಳ ಸಂಚಾಲಕರಾದ ವೀರಭದ್ರಪ್ಪ ನವರು ಬಸವ ಪಂಚಮಿಯ ವಿಶೇಷ ಕುರಿತು ಪರಿಚಯ ಮಾಡಿಕೊಟ್ಟರು. ಶ್ರೀಮತಿ ಲೀಲಾಬೆನ್ನೂರು, ಸರ್ಕಾರಿ ಕಲಾ ಕಾಲೇಜಿನ ಕನ್ನಡ ಉಪಪ್ರಾಧ್ಯಾಪಕರು ಶ್ರೀ ಶೈಲ ಆರಾಧ್ಯರು ಸರ್ಕಾರಿ ವಿಜ್ಞಾನ ಕಾಲೇಜಿನ ಕನ್ನಡ ಉಪಪ್ರಾಧ್ಯಾಪಕರು ವಿಶ್ವಗುರು ಬಸವಣ್ಣನವರ ವ್ಯಕ್ತಿತ್ವ-ಸಂದೇಶ ಕುರಿತು ಮಾತನಾಡಿದರು. ಸಾಮೂಹಿಕ ಪ್ರಾರ್ಥನಾ ಸಭೆಯ ಸಚೇತಕ ಶಕ್ತಿಯೂ, ತತ್ತ್ವ ನಿಷ್ಠರು ಸತ್ಯವಾದಿಯೂ ಆದ ಶರಣ ವೀರಬಸಪ್ಪ ಜಂತ್ಲಿ ಅವರು ಬಸವ ಪಂಚಮಿ ಆಚರಿಸುವ ಸುಯೋಗ ಒದಗಿ ಬಂದ ವಿಶೇಷವನ್ನು ಸಭೆಗೆ ಪರಿಚಯಿಸಿ, ಬಸವಣ್ಣನವರ ವಿಶ್ವ ಸಂದೇಶ ಅದೆಷ್ಟು ಸಾರ್ವಕಾಲಿಕ ಎಂಬುದನ್ನು ವಿವರಿಸಿದರು. ಪ್ರಾರ್ಥನಾ ಸಮಿತಿಯ ಕೋಶಾಧಿಕಾರಿ ಶರಣ ಎಸ್. ಎನ್. ಚಂದ್ರಪ್ಪ ಶರಣು ಸಮರ್ಪಣೆ ಸಲ್ಲಿಸಿದರು.

ಅಂದು ಹೆಂಗೆಳೆಯರ ಹಬ್ಬ. ಅದನ್ನೂ ಬದಿಗೊತ್ತಿ ಅಪಾರ ಸಂಖ್ಯೆಯಲ್ಲಿ ಬೆಳಗಿನ ವೇಳೆಯಲ್ಲಿ ಜನರು ಸೇರಿದುದು ಗುರು ಬಸವಣ್ಣನವರ ಬಗೆಗೆ ತುಂಬಿ ತುಳುಕುವ ಅವರ ಭಕ್ತಿಯನ್ನು ತೋರಿಸಿದುದು ಒಂದು ವಿಶೇಷವಾದರೆ, ಬಹಳಷ್ಟು ಜನ ಹುತ್ತಕ್ಕೆ, ಕಲ್ಲಿನ ನಾಗರಕ್ಕೆ ಹಾಲೆರೆಯುವುದನ್ನು ಬಿಟ್ಟಿದ್ದು ಇನ್ನೊಂದು ಗಮನಾರ್ಹ ವಿಶೇಷ.

ಬಸವ ಪಂಚಮಿ ಅಂಗವಾಗಿ ಮಕ್ಕಳಿಗಾಗಿ ವಚನ ಕಂಠಪಾಠ ಮತ್ತು ಗಾಯನ ಸ್ಪರ್ಧೆ ಇಡಲಾಗಿತ್ತಲ್ಲದೆ ಅಂದು ಬಹುಮಾನಗಳನ್ನು ಅಧ್ಯಕ್ಷರಾದ ಜೆ. ಬಿ. ಬಸಪ್ಪನವರು ವಿತರಿಸಿದರು. ಮಂಗಲದೊಡನೆ ಕಾರ್ಯಕ್ರಮ ಮುಕ್ತಾಯವಾಯಿತು.

ಬೀದರದಲ್ಲಿ ಬಸವ ಪಂಚಮಿ ಆಚರಣೆ

ಬೀದರ ನಗರದ ಬಸವ ಮಂಟಪದಲ್ಲಿ ಪೂಜ್ಯ ಶ್ರೀ ಮ. ನಿ. ಪ್ರ ಶಿವಾನಂದ ಸ್ವಾಮಿಗಳು, ವಿರಕ್ತ ಮಠ, ಹುಲಸೂರು ಇವರ ಸನ್ನಿಧಿಯಲ್ಲಿ ಬಸವ ಪಂಚಮಿ ಕಾರ್ಯಕ್ರಮ ನೆರವೇರಿತು. ಮುಖ್ಯ ಅತಿಥಿಗಳಾಗಿ ಐ. ಎ. ಎಸ್. ಅಧಿಕಾರಿಗಳು, ಜಿಲ್ಲಾ ಪರಿಷತ್ತು ಮುಖ್ಯ ಕಾರ್ಯದರ್ಶಿಗಳಾದ ಹೆಚ್. ಬಸವಯ್ಯನವರು ಆಗಮಿಸಿದ್ದರು. ಉಪನ್ಯಾಸಕರಾಗಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾದ ಎನ್. ಎಸ್. ಗಣಜಲಖೇಡರವರು, ಕಾರ್ಯನಿರ್ವಾಹಕ ಅಭಿಯಂತರರಾದ ವಿ.ಹ. ಅಗರಖೇಡರು, ಪ್ರಾಧ್ಯಾಪಕಿ ಶ್ರೀಮತಿ ಯಶೋದಮ್ಮ ಸಿದ್ಧಬಟ್ಟೆ ಆಗಮಿಸಿದ್ದರು. ಬಸವದಳದ ಅಧ್ಯಕ್ಷ ಶರಣ ಬಸವಕುಮಾರ ಪಾಟೀಲರು ಸಭಾ ಸಂಚಾಲನೆ ಮಾಡಿದರು.

ಇದಕ್ಕೆ ಪೂರ್ವಭಾವಿಯಾಗಿ ವಚನ ಸ್ಪರ್ಧೆ, ನಿಬಂಧ ಸ್ಪರ್ಧೆ, ಭಾವಗೀತೆ-ಭಕ್ತಿ ಗೀತೆ ಸ್ಪರ್ಧೆ ಏರ್ಪಡಿಸಲಾಗಿದ್ದು ವಿಜೇತರಿಗೆ 30-7-1987ರಂದು ಬಹುಮಾನ

ವಿತರಣೆ ಮಾಡಲಾಯಿತು. 28-7-1987 ಮತ್ತು 29-7-87ರಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲಾಯಿತು.

ತುಮಕೂರಿನಲ್ಲಿ ಬಸವ ಪಂಚಮಿ ಆಚರಣೆ

ತುಮಕೂರಿನ ಪುರಭವನದಲ್ಲಿ ನಡೆದ ಈ ಕಾರ್ಯಕ್ರಮದ ನೇತೃತ್ವವನ್ನು ಜಗದ್ಗುರು ಶ್ರೀ ಶ್ರೀ ಚನ್ನಬಸವ ಸ್ವಾಮಿಗಳು ವಹಿಸಿದ್ದರು. ಕು. ಪುಷ್ಪಲತಾ ಮತ್ತು ಕು. ಉಷಾದೇವಿಯವರು ಬಸವ ಪ್ರಾರ್ಥನಾ ಗೀತೆ ಹಾಡಿದರು. ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯದ ಅಧ್ಯಕ್ಷರಾದ ಶರಣ ಜಿ. ಎನ್. ಮಧುಡಯ್ಯನವರು ಸಭೆಯ ಉದ್ದೇಶವೇನೆಂದು ಮಾತನಾಡಿದರು, ಶರಣೆ. ಚಂದ್ರಕಲಾ ಕುಮಾರ ಸ್ವಾಮಿಯವರು ವಿದ್ಯಾಲಯದ ವರದಿ ಓದಿದರು, ಶ್ರೀ ಪಿ. ಎಂ. ಗಿರಿರಾಜು ರವರು ಬರೆದ 'ಸದ್ ಭಕ್ತ ಚಾರಿತ್ರ್ಯ' ಎಂಬ ಪುಸ್ತಕದ ಬಿಡುಗಡೆ ಆಯಿತು. ಮಾಜಿ ಸಚಿವರಾದ ಎಸ್. ರೇವಣ್ಣನವರು ಬಸವಣ್ಣನವರನ್ನು ಕುರಿತು ಉಪನ್ಯಾಸ ಮಾಡಿದರು. ಕು. ರತ್ನ ಮತ್ತು ಕಲಾರು ಜಾನಪದ ಗೀತೆ ಹಾಡಿದರು. ಬಿ. ವಿಶ್ವೇಶ್ವರಯ್ಯನವರು ಬಸವಣ್ಣನವರ ವಾತ್ಸಲ್ಯ ಪೂರ್ಣ ಹೃದಯದ ಪರಿಚಯ ಮಾಡಿಕೊಟ್ಟರು. ಕೂಡಲ ಸಂಗಮ ರಕ್ಷಣೆ ಕುರಿತು ಶರಣ ಕೆ. ಬಿ. ಪ್ರಭುಲಿಂಗಪ್ಪನವರು ವಿಷಯ ಮಂಡನೆ ಮಾಡಿದರು ಕು॥ ರವಿ ಮತ್ತು ಅನಿತಾ ವಚನಗಳನ್ನು ಹಾಡಿದರು. ಜಗದ್ಗುರುಗಳವರಿಂದ ಆಶೀರ್ವಚನವಾದ ನಂತರ ಡಾ॥ ನಂಜುಂಡಸ್ವಾಮಿ ಶರಣು ಸಮರ್ಪಣೆ ಮಾಡಿದರು. ಶರಣೆ ನಾಗರತ್ನಮ್ಮ ಮತ್ತು ಶರಣೆ ಶಿವಲಿಂಗಮ್ಮ ಮಂಗಲ ಹಾಡಿದರು. ವಿದ್ಯಾಲಯದ ಕಾರ್ಯದರ್ಶಿ ಎಂ. ವಿ. ಸಿದ್ಧಲಿಂಗಶೆಟ್ಟರು ಸಭಾ ನಿರ್ವಹಣೆ ಮಾಡಿದರು.

ಹುಬ್ಬಳ್ಳಿ, ಶಿವಮೊಗ್ಗಾ, ಸಂಗನಕಲ್ಲುಗಳಲ್ಲಿ

ಈಗಾಗಲೇ ಪ್ರಾರಂಭಿಸಿ ಯಶಸ್ವಿಯಾಗಿ "ಬಸವ ಪಂಚಮಿ" ಆಚರಿಸುತ್ತಿರುವ ಕೇಂದ್ರಗಳೆಂದರೆ ಹುಬ್ಬಳ್ಳಿಯ ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಶರಣ ಕೆ. ಡಿ. ಪರಮಾದಿ ಮತ್ತು ಶರಣೆ ಶೋಭಾ ಪರಮಾದಿ ಅವರ ನೇತೃತ್ವದಲ್ಲಿ: ಶಿವಮೊಗ್ಗಾದ ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ ಶರಣೆ ಜಯಮ್ಮ ಚಂದ್ರಪ್ಪ ಅವರ ನೇತೃತ್ವದಲ್ಲಿ; ಬಳ್ಳಾರಿಯ ಸಂಗನಕಲ್ ಊರಿನಲ್ಲಿ ಶರಣೆ ಶಾರದಮ್ಮ ಮತ್ತು ಶರಣೆ. ಸುನಂದಾ ಭೂಪಾಲಿಯವರ ನೇತೃತ್ವದಲ್ಲಿ. ಬೀದರ ಜಿಲ್ಲೆಯಲ್ಲಿ ಹಲವಾರು ಕೇಂದ್ರಗಳಲ್ಲಿ ನಡೆದಿದ್ದು ಸ್ಥಳಾಭಾವದಿಂದ ಪ್ರಕಟಿಸಲಾಗದುದಕ್ಕಾಗಿ ವಿಷಾದಿಸುತ್ತೇವೆ.

ಶರಣ ಮೇಳ

೧. ಸ್ವಯಂ ಸೇವಕರಿಗೆ, ಸಂಸ್ಥೆಗಳಿಗೆ ಕರೆ

ಕೂಡಲ ಸಂಗಮ ಕ್ಷೇತ್ರದಲ್ಲಿ ಸಂಯೋಜಿಸಲಿರುವ "ಶರಣ ಮೇಳ" ಉತ್ಸವ ದಲ್ಲಿ ಸೇವಾಕಾರ್ಯ ಮಾಡಲಿಕ್ಕೆ ಸಿದ್ಧರಾಗುವ ಸಂಘ–ಸಂಸ್ಥೆಗಳು ಮತ್ತು ಕಾರ್ಯ ಕರ್ತರಿಗೆ ಸದವಕಾಶವಿದೆ. 1988 ಜನವರಿ 14 ಕ್ಕೆ ನಡೆಯುವ ಈ ಉತ್ಸವದ ವಿವಿಧ ಹೊಣೆಗಾರಿಕೆ ವಹಿಸಿಕೊಳ್ಳಲು ಸೇವಾ ಮನೋಭಾವದ ವ್ಯಕ್ತಿಗಳಿಗೆ ಮತ್ತು ಸಂಸ್ಥೆಗಳಿಗೆ ಅವಕಾಶವಿದೆ. ಪ್ರಸಾದ ನೀಡುವುದು, ಬಾಯಾರಿಕೆ ತಣಿಸಲು ಅರವಟ್ಟಿಗೆ, ಜನರಿಗೆ ಮಾರ್ಗದರ್ಶಕರಾಗಿ ಕೆಲಸ ಮಾಡುವುದು ಇನ್ನೂ ಹಲವಾರು ಬಗೆಯ ಸೇವಾ ಕಾರ್ಯ ಮಾಡಲು ಸದವಕಾಶವಿದೆ.

ಸಭಾ ನಿಯಂತ್ರಣ, ಪ್ರಾರ್ಥನಾ ಕಾರ್ಯಕ್ರಮದ ಮೇಲುಸ್ತುವಾರಿ ಮುಂತಾ ದ್ದಕ್ಕೆ ಪೂರ್ವಭಾವಿ ತರಬೇತಿ ನೀಡಲಾಗುವುದು. ಒಂದು ವಾರ ತಮ್ಮ ಸಮಯ ವನ್ನು ತ್ಯಾಗಮಾಡಿದರೆ ಸಾಕು. ಅಂತಹ ಆಸಕ್ತಿ ಇರುವ ಸಂಸ್ಥೆಗಳವರು ಮೊದಲೇ ತಿಳಿಸಿದರೆ, ಕಾರ್ಯಕ್ರಮದ ಕರಪತ್ರದಲ್ಲಿ ಆ ಸಂಸ್ಥೆಗಳ ಹೆಸರನ್ನು ಮುದ್ರಿಸಲಾಗುವುದು. ವೈಯಕ್ತಿಕವಾಗಿ ಸೇವೆ ಮಾಡುವ ಸ್ತ್ರೀ–ಪುರುಷ ಕಾರ್ಯಕರ್ತರು ಪತ್ರ ಬರೆದು ಪರವಾನಗಿ ಮತ್ತು ಅಧಿಕೃತ ಬ್ಯಾಡ್ಜ್ ಪಡೆದು ಕೊಳ್ಳಬಹುದು.

೨. ಸಂಗಮ ಯಾತ್ರೆ

ಕರ್ನಾಟಕ ಮತ್ತು ಗಡಿನಾಡುಗಳಿಂದ ಭಜನಾಮೇಳಗಳನ್ನು ತೆಗೆದುಕೊಂಡು ಬಸವ ಜ್ಯೋತಿಯನ್ನು ಹೊತ್ತು ಬರುವಂತಹ ಶರಣ ತಂಡಗಳಿಗೆ ಹೃತ್ಪೂರ್ವಕ ಸ್ವಾಗತವಿದೆ. ಕೂಡಲ ಸಂಗಮಕ್ಕೆ ಕಾಲು ನಡಿಗೆಯಲ್ಲಿ ಕ್ರಮಿಸಬಹುದಾದ ದೂರ ವನ್ನು ಗಮನಿಸಿ, ಜನವರಿ 13 ಕ್ಕೆ ಮಧ್ಯಾಹ್ನದೊಳಗೆ ಸಂಗಮ ಕ್ಷೇತ್ರವನ್ನು ತಲ್ಪು ವಂತೆ ಯೋಜಿಸಿಕೊಂಡು ಹೊರಡಬೇಕು. ಇಂತಹ ತಂಡಗಳ ನೇತೃತ್ವವನ್ನು ಯಾರಾದರೂ ಸ್ವಾಮಿಗಳು ವಹಿಸಿದರೆ ತುಂಬಾ ಸಂತೋಷ. ದಾರಿಯಲ್ಲಿ ಒಂದೊಂದು ಊರಿನಲ್ಲಿ ವಸತಿ ಮಾಡುತ್ತ ಅಲ್ಲಿ ಭಜನೆ-ಪ್ರಾರ್ಥನ, ಪ್ರವಚನ ಮಾಡುತ್ತ ಅಲ್ಲಿಂದ ಹೊರಡುವ ಜನರನ್ನೂ ಸಮಾವೇಶ ಮಾಡಿಕೊಳ್ಳುತ್ತ ಹೊರಟರೆ ಚೆನ್ನಾಗಿರುವುದು.

ಜನವರಿ 13 ನೇ ತಾರೀಖು ಸಂಜೆಗೆ ಒಂದು ಕಾರ್ಯಕ್ರಮವು ಇರುವ ಕಾರಣ ಈ ಜನರೆಲ್ಲ ಸಮಾವೇಶವಾಗುವುದು ಅವಶ್ಯವಿರುತ್ತದೆ. ಈ ಬಗೆಯ ಕಾರ್ಯಕ್ರಮದಿಂದ ಮಾರ್ಗದುದ್ದಕ್ಕೂ ಪ್ರಚಾರವಾಗುವುದಲ್ಲದೆ ಭಕ್ತಿಯ ವಾತಾವರಣ ಉಂಟಾಗುವುದು.

ಆದ್ದರಿಂದ ಈ ರೀತಿ ಭಜನಾಮೇಳಗಳನ್ನು ಹೊರಡಿಸಲು ಸಾಧ್ಯವಾಗುವ ಸಂಘ ಸಂಸ್ಥೆಗಳವರು, ಮಠ-ಮಾನ್ಯಗಳವರು ಪತ್ರ ಬರೆದರೆ ಅವರಿಗೆ ಮಾರ್ಗದರ್ಶನ ಮಾಡಲಾಗುವುದಲ್ಲದೆ, ಏನೇನು ವ್ಯವಸ್ಥೆ ಬೇಕೋ ಅದನ್ನು ಪೂರ್ವಭಾವಿಯಾಗಿ ಮಾಡಿಕೊಡಲು ಅನುಕೂಲವಾಗುವುದು.

* *

ಸಮಸ್ಯೆ? - ಸಮಾಧಾನ!

— ಮಹಾನಂದಾ ತಾಯಿ ಹಿರೇಮಠ, ಮುಗಳಿ

● ಗುರು ಬಸವಣ್ಣನವರ ಸಮಕಾಲೀನ ಶರಣರಲ್ಲಿ "ಗಾಳದ ಕನ್ನಪ್ಪ" ಎಂಬುವವನು ಇದ್ದನಂತೆ. ಮೀನು ಹಿಡಿಯುವುದು ಹಿಂಸಾ ಪ್ರವೃತ್ತಿ. ಅಂದಾಗ ಹಿಂಸೆ ಮಾಡಿ, ಅದೆಂತು ಶರಣನಾಗಬಲ್ಲ ?

○ ಆತ ಗಾಳದ ಕನ್ನಪ್ಪ ಅಲ್ಲ; ಆತನ ಹೆಸರು ಗಾಣದ ಕನ್ನಪ್ಪ ಅಂದರೆ ಎಣ್ಣೆ ಗಾಣದ ಕಾಯಕ. ಕೆಲವರು ಶರಣರ ಹೆಸರು ವಿಚಿತ್ರವಾಗಿವೆ ಉದಾಹರಣೆಗೆ ಮಿಂಡ ಮಲ್ಲಿನಾಥ, ಕನ್ನದ ಬ್ರಹ್ಮಯ್ಯ, ಚೋರ ಚಿಕ್ಕಯ್ಯ ಮುಂತಾದುವು. ಇವರು ಶರಣರಾದ ಮೇಲೆ ಆ ವೃತ್ತಿ ಮಾಡಿಲ್ಲ. ಪರಿವರ್ತನೆಗೆ ಮೊದಲು ಅಂಥ ವೃತ್ತಿ ಗಳಲ್ಲಿದ್ದರು, ಪ್ರವೃತ್ತಿಯುಳ್ಳವರಾಗಿದ್ದರು ಮುಂದೆ ಶರಣರಾದರು. ಆದರೆ ಅವರ ಹೆಸರುಗಳ ಹಿಂದೆ ವಿಶೇಷಣಗಳಾಗಿ ಮಿಂಡ, ಚೋರ, ಕನ್ನದವ ಎಂಬುದನ್ನು ಬಸವ ಣ್ಣನವರು ಉದ್ದೇಶ ಪೂರ್ವಕವಾಗಿ ಉಳಿಸಿದ್ದಾರೆ. ಎಂತಹವರೂ ಸ್ವಭಾವ ಪರಿ ವರ್ತನೆ ಹೊಂದಿ ಮಹಾಂತರಾಗಬಲ್ಲರು ಎಂಬುದನ್ನು ಜಗತ್ತಿಗೆ ಸಾರುವ ಸಲುವಾಗಿ ಆ ವಿಶೇಷಣಗಳನ್ನು ಉಳಿಸಿಕೊಳ್ಳಲಾಗಿದೆ.

— ಬಿ. ವಿ. ಶಿವರಾಜ, ಊರುಬೇಡ

● ಲಿಂಗವಂತ ಧರ್ಮವು ವ್ಯಾವಹಾರಿಕ (Practical) ವೇ ? ಎಂಬ ಸಮಸ್ಯೆ ನನ್ನನ್ನು ಕಾಡುತ್ತಿದೆ. ೧) ನಿಜ ಲಿಂಗವಂತನಾಗಬೇಕಾದರೆ ನಿಜವಾದ ಗುರು ಗಳಿಂದ ಲಿಂಗಧಾರಣೆಯಾಗಬೇಕು. ಅಂಥ ಗುರು-ಜಂಗಮವು ಸಿಕ್ಕುವುದೇ ದುರ್ಲಭ. ಅಲ್ಪಸ್ವಲ್ಪ ನಮ್ಮ ಧರ್ಮ ತಿಳಿದ ಬಳಿಕ, ನಮಗೆ ಇನ್ನಷ್ಟು ಗೊಂದಲ ಉಂಟಾಗಿದೆ. ದೊಡ್ಡ ಸ್ವಾಮಿಗಳೇ ಲಿಂಗವಂತ ಧರ್ಮ ಶಿವಸಾಯುಜ್ಯದಾಯಕ ಎನ್ನುತ್ತಾರೆ. ಅಡ್ಡ ಪಲ್ಲಕ್ಕಿಯ ದಾಸರಾಗಿದ್ದಾರೆ ದ್ಯಾಮವ್ವ–ದುರ್ಗವ್ವನ ಪ್ರತಿಷ್ಠಾಪನೆಗೆ ಕರೆದರೂ ಹೋಗುತ್ತಾರೆ, ಇಂಥವರುಗಳಿಂದ ದೀಕ್ಷಾನುಗ್ರಹ ಪಡೆಯುವುದು ಹೇಗೆ ಎಂದು ನಾವು ಲಿಂಗಧಾರಣೆಯನ್ನೇ ಬಿಡುತ್ತಿದ್ದೇವೆ. ದಯವಿಟ್ಟು ಸಮಸ್ಯೆ ಬಗೆಹರಿಸಿರಿ.

○ ನಿಮ್ಮ ಸಮಸ್ಯೆ ಒಂದು ಕಠೋರ ಸತ್ಯವನ್ನೇ ಬಿಂಬಿಸುತ್ತಿದೆ. ಸಾವಧಾನ ವಾಗಿ ಚಿಂತಿಸಿರಿ. "ಲಿಂಗಧಾರಣೆ"–ಮಾನವ ಕುಲಕ್ಕೆ ಬಸವಣ್ಣನವರು ಕೊಡಮಾಡಿದ

ಶ್ರೇಷ್ಠ ಹಕ್ಕು ಜನ್ನಿವಾರ-ಗಾಯಿತ್ರಿ ಮಂತ್ರ-ಉಪನಯನಗಳ ಮುಖಾಂತರ ವೈದಿಕ ಧರ್ಮವು ಕೆಲವರನ್ನು ಶ್ರೇಷ್ಠರನ್ನಾಗಿ ಇನ್ನು ಕೆಲವರನ್ನು ಸಂಸ್ಕಾರ ವಂಚಿತರನ್ನಾಗಿ ಮಾಡಿತಷ್ಟೆ. ಇದಕ್ಕೆ ಪ್ರತಿಯಾಗಿ ಶಿವದಾರ-ಷಡಕ್ಷರಿ ಮಂತ್ರ-ಲಿಂಗದೀಕ್ಷೆ-ಅಂಗದ ಮೇಲೆ ಲಿಂಗಧಾರಣೆ ಬೋಧಿಸಿ ಬೃಹತ್ ಜನಾಂಗಕ್ಕೆ ಸಮಾನತೆ ತಂದುಕೊಟ್ಟರು, ಬಸವಣ್ಣನವರು ಪ್ರಥಮತಃ ಹೊಂದಿದ್ದ ಉದ್ದೇಶ ಅಸಫಲವಾಗುವಂತೆ ಬಸವಣ್ಣನ ಅನುನಾಯಿ (ಅನುಯಾಯಿ) ಗಳು ಮಾಡಿಬಿಟ್ಟರು. ಇದು ದೊಡ್ಡ ದುರಂತ! ಕ್ರಮವಾಗಿ ಸತ್ವವನ್ನು ಉಳಿಸಿಕೊಂಡು ಬಂದಿದ್ದರೆ, ಅಥವಾ ತಾತ್ತ್ವಿಕ ಶೈಥಿಲ್ಯ ಒದಗಿದಾಗ ಪುನಶ್ಚೇತನ ಕೊಡುವಂತಹ ಕೆಲಸಗಳನ್ನು ಸಮಾಜದ ಧರ್ಮಗುರುಗಳು ಮಾಡುತ್ತ ಬಂದಿದ್ದರೆ ಹೀಗಾಗುತ್ತಿರಲಿಲ್ಲ. ಇರಲಿ.

ಈಗ ಪರಿಹಾರ ಇಲ್ಲವೆ? ಖಂಡಿತ ಇದೆ. ಪ್ರತಿವಾರಕ್ಕೊಮ್ಮೆಯಾದರೂ ಸೇರಿ ಪ್ರಾರ್ಥನೆ-ಚಿಂತನೆ ಮಾಡುತ್ತ; ಉತ್ತಮ ಸಂಸ್ಕಾರ ಹೊಂದುತ್ತ ನಿಮ್ಮಂತಹವರು ಶರಣರು, ಗುರುಮೂರ್ತಿಗಳೂ ಆಗಬೇಕು. ನೀವು ಉರಿಯುವ ಜ್ಯೋತಿಯಾಗು ತ್ತಿದ್ದಂತೆಯೇ ಇನ್ನಷ್ಟು ಹಣತೆಗಳನ್ನು ಹಚ್ಚಬಲ್ಲವರು ನೀವಾಗುತ್ತೀರಿ. ಲಿಂಗ ಧಾರಣೆ ಮುಂತಾದ ವಿಧಿವಿಧಾನ (Ritualistic ceremony) ಗಳನ್ನು ತಿಳುವಳಿಕೆ-ಸಂಸ್ಕಾರ ಹೊಂದಿದ ಶರಣರುಗಳು ಮಾಡಲು ಆರಂಭಿಸಬೇಕು. ವ್ಯಕ್ತಿ ಪ್ರೌಢನಾದಾಗ, ಅಧ್ಯಾತ್ಮಿಕ ಆಕಾಂಕ್ಷೆ ಅವನಲ್ಲಿ ಬಲಿತಾಗ ಲಿಂಗದೀಕ್ಷೆಯಂತಹ ಆಧ್ಯಾತ್ಮಿಕ ವಿಧಿ (Spiritualistic ceremony) ಯನ್ನು ಯೋಗ್ಯ ಗುರುವಿನಿಂದ ಪಡೆಯುತ್ತಾನೆ.

ಸಮಸ್ಯೆ ಅಗಾಧವಾಗಿದೆ ಎಂದು ನಿರಾಶೆಯಿಂದ ಕೈಚೆಲ್ಲಿ ಕೂಡ್ರಬಾರದು; ಪರಿಹಾರ ಕಂಡುಕೊಳ್ಳಲು ಪ್ರಯತ್ನ ಮಾಡಬೇಕು.

— ಶ್ರೀ. ಮ. ನಿ. ಪ್ರ. ಶಿವರುದ್ರಸ್ವಾಮಿಗಳು, ಬೇಲೀಮಠ, ಬೆಂಗಳೂರು (ಫೋನಿನಲ್ಲಿ)

● ಬಸವ ಧರ್ಮ ಪೀಠದ ಹಲವಾರು ಉದ್ದೇಶಗಳಲ್ಲಿ ಧರ್ಮಬೋಧಕರ ತರಬೇತಿ ವಿದ್ಯಾಲಯ, ಅರ್ಚಕರ ತರಬೇತಿ ಶಾಲೆ ಮುಂತಾಗಿ ಯೋಜನೆ ಇವೆ. ಗುರು ಬಸವಣ್ಣನವರು ಪುರೋಹಿತಶಾಹಿಯ ವಿರೋಧಿಗಳು ಅಂದಾಗ ಅರ್ಚಕರ ತರಬೇತಿ ಶಾಲೆ ಬಸವ ತತ್ತ್ವಕ್ಕೆ ವಿರುದ್ಧವಲ್ಲವೆ?

○ ಅರ್ಚಕನ ವೃತ್ತಿ ಪೂಜೆ, ಕೆಲವು ವಿಧಿವಿಧಾನ ಮಾಡಿಸುವುದು. ಮನುಷ್ಯ ಜೀವನದಲ್ಲಿ ಹುಟ್ಟು, ಲಿಂಗಧಾರಣೆ, ನಾಮಕರಣ, ವಿವಾಹ, ಸಾವು ಮುಂತಾದವು ಸಾಮಾನ್ಯ ಕ್ರಿಯೆಗಳು. ಇವನ್ನು ವಿಶಿಷ್ಟ ಶೈಲಿಯಲ್ಲಿ ಮಾಡಿಸುವುದು ತೀರ ಅವಶ್ಯಕ. ಇಂಥ ವಿಧಿ ವಿಧಾನ ಮಾಡಿಸುವವರಿಗೆ ಶರಣ ಸಂಸ್ಕೃತಿಯ ಪ್ರಕಾರ ಹೇಗೆ ಮಾಡಬೇಕೆಂಬ ತರಬೇತಿ ಕೊಡದಿದ್ದರೆ ಅವರು ತತ್ತ್ವಕ್ಕೆ ವಿರುದ್ಧವಾಗಿ, ತಪ್ಪು ತಪ್ಪಾಗಿ

ಮಾಡುವರಲ್ಲವೆ? ದೇವನಿಗೆ-ಭಕ್ತನಿಗೆ ಅಡ್ಡಲಾಗಿ ಅರ್ಚಕ ಇರಬಾರದು. ದೇವಭಕ್ತರನ್ನು ಕೂಡಿಸುವ ತೆತ್ತಿಗ [ಗುರುವೆ ತೆತ್ತಿಗನಾದ, ಲಿಂಗವೆ ಮದುವಳಿಗನಾದ, ಆನು ಮದುವಳಿಗೆಯಾದೆ—ಅಕ್ಕಮಹಾದೇವಿ] ನಾಗಿ ಆತ ಇದ್ದರೆ ತಪ್ಪಲ್ಲ. ಬಸವಣ್ಣನವರ ಮತ್ತೊಂದು ಘನೋದ್ದೇಶವೆಂದರೆ ಇಂತಹ ಅರ್ಚಕ ವೃತ್ತಿ, ತೆತ್ತಿಗತನ ಅರ್ಹತೆಯಿಂದ, ಸಂಸ್ಕಾರದಿಂದ, ತರಬೇತಿಯಿಂದ ಬರಬೇಕೇ ವಿನಾ ಕೇವಲ ಹುಟ್ಟಿನಿಂದ, ಜಾತಿಯಿಂದಲ್ಲ ಆದ್ದರಿಂದ ಶ್ರೀ ಚನ್ನಬಸವೇಶ್ವರ ಅರ್ಚಕ ತರಬೇತಿ ಶಾಲೆ ಲಿಂಗಧಾರಣೆ, ವಿವಾಹ, ಶವಸಂಸ್ಕಾರ ಮುಂತಾದುವನ್ನು ಶರಣ ಸಂಸ್ಕೃತಿಯ ತಳಹದಿಯ ಮೇಲೆ ತರಬೇತಿ ಕೊಡುವ ಉದ್ದೇಶ ಹೊಂದಿದೆ,

— ಶಿವಸುಂದರ ಸ್ವಾಮಿ ಹಿರೇಮಠ, ಗೋರ್ಕಲ್

● ಯಾನಾಗುಂದಿ ಎಂಬ ಗುಲ್ಬರ್ಗಾ ಜಿಲ್ಲೆಯ ಒಂದು ಕ್ಷೇತ್ರದಲ್ಲಿ ತುಳಸೀ ಕಟ್ಟೆ ಸ್ಥಾಪಿಸಿ ಎದುರಿಗೆ ಬಸವಣ್ಣನವರ (ನಂದಿಯ) ವಿಗ್ರಹ ಇಟ್ಟಿದ್ದಾರೆ. ವಿಶ್ವಗುರು ಬಸವಣ್ಣನವರ ಮೂರ್ತಿಯನ್ನು ಹೀಗೆ ತುಳಸೀಕಟ್ಟೆ ಎದುರಿಗೆ, ಕೆಳಗೆ ಸ್ಥಾಪಿಸುವುದು ತಪ್ಪಲ್ಲವೆ?

○ ತಪ್ಪು-ಒಪ್ಪಿನ ಪ್ರಶ್ನೆ ಅತ್ತ ಇರಲಿ. ನಂದಿಯ ವಿಗ್ರಹವನ್ನು ವಿಶ್ವಗುರು ಬಸವಣ್ಣನವರ ಮೂರ್ತಿ ಎಂದು ನೀವೇಕೆ ತಪ್ಪು ತಪ್ಪಾಗಿ ಭಾವಿಸಿದ್ದೀರಿ? ಒಂದು ಕಾಲದಲ್ಲಿ ಬಸವಣ್ಣದೇವರ ಗುಡಿ ಎಂದಿರುವಲ್ಲಿ ಗುರು ಬಸವಣ್ಣನವರ ಸಂಕೇತವೆಂದೇ ನಂದಿಯನ್ನು ಇಟ್ಟಿರಬಹುದಾದರೂ, ಈಗ ಸ್ಥಾಪಿತವಾಗಿರುವ ಯಾನಾಗುಂದಿಯಂಥಲ್ಲಿ ಆ ಭಾವದಿಂದ ಇಟ್ಟಿಲ್ಲ. ಬಸವ ತತ್ತ್ವದ ಪ್ರಕಾರ ಗಿಡಮರಗಳ ಪೂಜೆ (ತುಳಸಿ, ಬನ್ನಿ ಮುಂತಾದ್ದು) ಪ್ರಾಣಿ ಪೂಜೆ (ನಾಗರ, ನಂದಿ) ಮುಂತಾದ್ದೆಲ್ಲ ನಿಷಿದ್ಧವಾದ ಕಾರಣ ನಮಗದು ಸಂಬಂಧವಿಲ್ಲದ್ದು, ಬಹುಶಃ ವೈಷ್ಣವ (ತುಳಸಿ)-ಶೈವ (ನಂದಿ) ಗಳ ಸಮರಸ ಮಾಡಲು ಈ ಒಂದು ಮೂಢ ಪ್ರಯೋಗ ನಡೆದಿರಬಹುದು. ಅದನ್ನು ತಪ್ಪು ಎನ್ನುವ ಬದಲು ಈ ಅಲೆಮಾರಿತನದ ದೇವರ ಹುಡುಕಾಟ ನಿಲ್ಲಿಸಿ ವಚನ ವಾಙ್ಮಯ ಓದಿ ಇದ್ದಲ್ಲಿಯೇ ದಿವ್ಯಜ್ಞಾನ-ದಿವ್ಯಾನಂದ ಹೊಂದುವ ಪ್ರಯತ್ನ ಮಾಡಿರಿ ಎಂದು ಹೇಳುವುದೇ ಸರಿ ಎನಿಸುತ್ತಿದೆ.

— ಹೆಚ್. ವಿ. ವಿಶ್ವನಾಥ, ಬೆಳಗಾಂವಿ.

● ಪತ್ರಿಕೆಯ ಆಜೀವ ಸದಸ್ಯತ್ವವೆಂದರೇನು? ಆಜೀವ ಸದಸ್ಯರು ತೀರಿ ಹೋದರೆ ಪತ್ರಿಕೆ ಕಳಿಸುವುದಿಲ್ಲವೆ?

○ ಹಾಗಲ್ಲ, ಪತ್ರಿಕೆಯು ಜೀವ ಇರುವವರೆಗೆ ಕಳಿಸುತ್ತೇವೆ. ಯಾರಾದರೂ ತೀರಿಹೋದರೆ ಅವರ ಮಕ್ಕಳಿಗೆ ಕಳಿಸುತ್ತೇವೆ.

● ಈ ಪ್ರಶ್ನೆಯಿಂದ ನಿಮ್ಮ ಮನಸ್ಸಿಗೆ ನೋವಾಗಬಹುದು. ಕ್ಷಮಿಸಿರಿ. ನಮಗಾಗಿರುವ ನೋವಿನ ಶಮನಕ್ಕಾಗಿ ಕೇಳುತ್ತಿದ್ದೇನೆ. ಕನ್ನಡದ ಸುಪ್ರಸಿದ್ಧ ಒಂದು ವಾರ ಪತ್ರಿಕೆಯಲ್ಲಿ (ಪ್ರಪಂಚ) ನಿಮ್ಮ ಬಗ್ಗೆ ಅವರು ಮಾತೆ ಮಹಾದೇವಿ ಯಲ್ಲ, ಬರೀ ಮಾತಿನ ಮಹಾದೇವಿ ಎಂದು ಬರೆದಿರುವರು. ಅಂತಹವರ ಬಗ್ಗೆ ತಮ್ಮ ಅಭಿಪ್ರಾಯವೇನು ?

○ ನೀವೆಲ್ಲರೂ ಕನ್ನಡದ ಅಭಿಮಾನಿಗಳು ಏಕಾಗುವುದಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತದೆ. ನೋಡಿ ; ದಿಕ್ಕೇಡಿ ಎಂದರೆ ಕೋಪಗೊಳ್ಳುತ್ತೀರಿ. ಅದರ ಅರ್ಥ ದಿಕ್ಕು ಇಲ್ಲದವನು ಅರ್ಥಾತ್ ದೇವರು ಎಂದರ್ಥ. 'ಮಾತಾಜಿ ಒಳ್ಳೆ ವಾಗ್ಮಿ' ಎಂದರೆ ಹರ್ಷ ಪಡುತ್ತೀರಿ. ಅದನ್ನೇ ಅಚ್ಚ ಕನ್ನಡದಲ್ಲಿ 'ಮಾತಿನ' ಎಂದರೆ ನೊಂದುಕೊಳ್ಳುತ್ತೀರಿ. ಅಸೂಯೆ-ಮತ್ಸರಗಳು ಮೆಚ್ಚುಗೆಯ ಇನ್ನೊಂದು ಮುಖ. ಕೈಗೆ ಸಿಕ್ಕ ವೇದಿಕೆಗಳ ಮೇಲೆಲ್ಲ ಪಾಪು ಅವರು ನಮ್ಮನ್ನು ತೆಗಳಲು ಬಳಸುತ್ತಾರೆ ಎಂದರೆ ಏನು ಅರ್ಥ ? ಕಡೆಗಣಿಸಲಾರದ ಶಕ್ತಿಯಾಗಿ ನಾವು ಬೆಳೆಯುತ್ತಿದ್ದೇವೆಂದು ತಾನೆ ಅವರು ಸ್ಮರಿಸಿಕೊಳ್ಳುವುದು! ಪಾಪು, ಪಾಪ, ಪಾಪುವೇ ಆಗಿರುವುದರಿಂದ ಹೇಗೆ ತಮ್ಮ ಅಭಿಮಾನ ತೋರಿಸಿಕೊಳ್ಳಬೇಕು ಅವರಿಗೆ ಗೊತ್ತಾಗುತ್ತಲಿಲ್ಲ. ಬಾಲಕರೂ ಒಂದು ದಿನ ಪ್ರೌಢರಾಗಿ ಸತ್ಯವನ್ನು ಅರ್ಥ ಮಾಡಿಕೊಳ್ಳುವ ಮಟ್ಟಕ್ಕೆ ಬರಬಹುದು. ಕಾಯೋಣವಲ್ಲವೇ ?

ಅಂದ ಹಾಗೆ ಒಂದು ಮಾತು. ಮಾತು ಒಂದು ಮಾರುತವಿದ್ದಂತೆ. ಅದು ಸುಗಂಧವನ್ನೂ ಪಸರಿಸಬಹುದು ; ದುರ್ಗಂಧವನ್ನೂ ಹಸರಿಸಬಹುದು. ಸಾಹಿತಿ, ವಾಗ್ಮಿ, ಪತ್ರಿಕಾಕರ್ತ ಎಲ್ಲರ ಬಂಡವಾಳವೂ ಮಾತೆ. ಆದರೆ ನಮ್ಮ ಮಾತು ಬಸವಣ್ಣನವರ ಪರಿಚಯ ಮಾಡಿಕೊಡುತ್ತವೆ ; ದೇವರು-ಧರ್ಮ ಕುರಿತು ತಿಳುವಳಿಕೆ ನೀಡುತ್ತವೆ, ಜ್ಞಾನವನ್ನು ಬೀರುತ್ತವೆ. ಆದರೆ ಮತ್ತೆ ಕೆಲವರ ಮಾತು ಅನ್ಯರ ಅವ ಹೇಳನ, ನಿಂದೆ, ಮುಂತಾದ ವಿಧ್ವಂಸಕ ಕಾರ್ಯದಲ್ಲೇ ವ್ಯರ್ಥವಾಗುತ್ತವೆ ಎಂಬು ದನ್ನು ನೀವು ಮನಗಾಣಬಹುದು. ಹೀಗಿದೆ ಮಾತಿನ ಮಹಿಮೆ !

— **ವೀರಭದ್ರಪ್ಪ, ಊರುಬೇಡ.**

● ನಾವು ಬಸವ ಪಂಚಮಿ ಆಚರಿಸಬೇಕೆಂದು ಬಯಸಿ, ಒಬ್ಬರು ಸ್ವಾಮಿ ಗಳನ್ನು ಆಮಂತ್ರಿಸಲು ಹೋಗಿದ್ದೆವು. ಇದ್ಯಾವುದು ಹೊಸದು ? ಮಾತಾಜಿ ಯವರು ಪ್ರಾರಂಭಿಸಿದ್ದಾರೋ ? ಎಂದು ಕೊಂಕು ಮಾತನ್ನಾಡಿದರು. ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

○ ಯಾರೇ ಪ್ರಾರಂಭ ಮಾಡಲಿ ಅದು ಗುರು ಬಸವಣ್ಣನವರಿಗೆ ಸಂಬಂಧ ಪಟ್ಟುದು ತಾನೆ ? ಅಂದಾಗ ಆಚರಿಸಬೇಕಾದ್ದು ಅವರ ಕರ್ತವ್ಯವಲ್ಲವೆ ? ಬಸವ ಜಯಂತಿಯನ್ನು ಸಹ ಒಂದು ಕಾವ್ಯದ ಆಧಾರದ ಮೇಲೆ ಶರಣ. ಹರ್ಡೇಕರ್

ಮಂಜಪ್ಪನವರು ಮತ್ತು ಮುರುಘಾ ಮಠದ ಲಿಂ|| ಮೃತ್ಯುಂಜಯ ಸ್ವಾಮಿಗಳು ಆರಂಭಿಸಿದರು. ಇಂದಿಗೂ ಬಸವ ಜಯಂತಿ ಎಳ್ಳಮವಾಸ್ಯೆಯ ದಿನವೆಂದು ಕೆಲವರು, ಕಾರ್ತೀಕ ಪ್ರತಿಪದೆ ಎಂದು ಕೆಲವರು ವಾದವಿವಾದ ನಡೆಸಿದ್ದರೂ, ಅಕ್ಷಯ ತೃತೀಯ ಎಂದು ನಂಬಿ ಎಲ್ಲರೂ ಆಚರಿಸುವುದಿಲ್ಲವೆ ? ಡಾ|| ಬಾಡಾಲ ರಾಮಯ್ಯ ನವರು ಅಧಿಕೃತವಾಗಿ ಬಸವ ಲಿಂಗೈಕ್ಯ ದಿನವನ್ನು ಬಸವ ಪಂಚಮಿಯೆಂದು ಎಂದು ಖಚಿತ ಪಡಿಸಿದ್ದಾರೆಂದರಿತು ನಾವು ಬಳಕೆಗೆ ತಂದಿದ್ದೇವೆ. ಅಂದಾಗ ಆಚರಣೆ ಮಾಡು ವುದನ್ನು ತಮ್ಮ ಕರ್ತವ್ಯವೆಂದು ಭಾವಿಸದೆ ವ್ಯಕ್ತಿಪ್ರತಿಷ್ಠೆಯ ಪ್ರಶ್ನೆಯಾಗಿ ಮಾಡಿ ಕೊಂಡರೆ ಅದು ಗುರುದ್ರೋಹವಾಗದೆ? ತಮ್ಮ ಮಠಗಳ ಮೂಲ ಕರ್ತೃಗಳ "ಪುಣ್ಯ ತಿಥಿ" ಮಾಡುವುದರಲ್ಲಿ ಆಸಕ್ತರಾದ ಮಠಾಧೀಶರು ಧರ್ಮಗುರುವಿನ ಲಿಂಗೈಕ್ಯ ದಿನ ಕುರಿತು ಉದಾಸೀನ ಮಾಡುವುದು ವಿಹಿತವೇ ಎಂಬುದನ್ನು ನೀವೇ ಆಲೋಚಿಸಿರಿ.

— **ಹೆಚ್. ಕೆ. ವಿರುಪಾಕ್ಷಪ್ಪ, ಮಂಡಲ ಪಂಚಾಯಿತಿ ಕಾರ್ಯಾಲಯ, ಹೆಬ್ಬಾಳು**

● ಕಲ್ಯಾಣ ಕಿರಣ ಜುಲೈದಲ್ಲಿ ಷಡಕ್ಷರಿಗಳು ಹೆಣ್ಣಿನ ಬಗ್ಗೆ ಒಟ್ಟಾಗಿ ಕೀಳಾಗಿ ಮಾತನಾಡಿದ್ದಾರೆ. ಇಳಿವಯಸ್ಸಿನವರಾದ ಅವರಿಗೇಕೆ ಮಹಿಳೆಯಲ್ಲಿ ಜಗನ್ಮಾತೆಯರೂಪ ಕಾಣಲಿಲ್ಲ ?

○ ಮುಪ್ಪಿನ ಷಡಕ್ಷರಿಗಳು ಎಂದರೆ ಅವರು ಮುಪ್ಪಿನವರು ಎಂದರ್ಥವಲ್ಲ; ಅವರ ಮನ ಮುಪ್ಪಾಗಿತ್ತು ಎಂದು ಅರ್ಥ. ಆಧ್ಯಾತ್ಮ ಜೀವನದಲ್ಲಿ ಸಾಗುವ ಸಾಧಕನು ವಿವಿಧ ಮಾನಸಿಕ ಸ್ಥಿತಿಯಲ್ಲಿ ಹಾಯ್ದು ಹೋಗುತ್ತಾನೆ. ಅವನು ಸಾಧನೆಯ ಪ್ರಾರಂಭಾವಸ್ಥೆಯಲ್ಲಿ ಹೆಣ್ಣು (ಪುರುಷ) ಹೊನ್ನು-ಮಣ್ಣುಗಳ ಬಗ್ಗೆ ತೀವ್ರ ತಿರಸ್ಕಾರ ತಾಳುತ್ತಾನೆಂದೇ ಅವನ್ನೆಲ್ಲ ನಿರಾಕರಿಸಿ ವೈರಾಗ್ಯಮಾರ್ಗಕ್ಕೆ ಎಳಸುತ್ತಾನೆ. ಇದನ್ನು ಷಟಸ್ಥಲದಲ್ಲಿ ಸಂಸಾರ ಹೇಯ ಸ್ಥಲ (ದ ಸ್ಥಿತಿ) ಎನ್ನಲಾಗುತ್ತದೆ. ಆ ರೀತಿಯ ತಿರಸ್ಕಾರ ತಾತ್ಕಾಲಿಕವಾಗಿದ್ದು, ಮುಂದೆ ದಿವ್ಯಾನುಭವವಾದಂತೆಲ್ಲ ಶರಣನ ಇರು ವಿಕೆ, ಚಿಂತನೆ, ದೃಷ್ಟಿಕೋನ ಎಲ್ಲದರಲ್ಲೂ ಬದಲಾವಣೆ ಬರುತ್ತದೆ. ಶರಣ ಧರ್ಮದ ಸಿದ್ಧಾಂತದ ಪ್ರಕಾರ ಸ್ತ್ರೀ-ಪುರುಷ, ಹೊನ್ನು-ಮಣ್ಣು ಮಾಯೆಯಲ್ಲ; ಆದರೆ ಸಾಧಕ ಜೀವನದಲ್ಲಿರುವ ವ್ಯಕ್ತಿ ಕೊಂಚಕಾಲ ಹಾಗೆ ಭಾವಿಸುತ್ತಾನೆ. ಮುಂದೆ ಇನ್ನೊಂದು ಬಗೆಯ ದೃಷ್ಟಿ ತಾಳುತ್ತಾನೆ ಅದನ್ನು ಷಡಕ್ಷರಿಗಳ ಇನ್ನಿತರ ಹಲವಾರು ಗೀತೆಗಳಲ್ಲಿ ಕಾಣಬಹುದು.

● ಮುಗಟಖಾನ ಹುಬ್ಬಳ್ಳಿ ಬಳಿ ತಾಯಿ ಗಂಗಾಂಬಿಕೆಯ ಸಮಾಧಿ ಇದೆ ಎಂದು ಜುಲೈ ಕಲ್ಯಾಣ ಕಿರಣದಲ್ಲಿದೆ. ಮತ್ತು ಬಸವಣ್ಣನವರಿಗೆ ಒಬ್ಬಳೇ ಹೆಂಡತಿ ಆಕೆಯ ಹೆಸರು ನೀಲಗಂಗಮ್ಮ ಎಂದಿದೆ. ಇದರಲ್ಲಿ ಯಾವುದು ಸರಿ ?

○ ಈ ವರೆಗೂ ಎಲ್ಲಕಡೆಯಲ್ಲಿಯೂ ಪ್ರತಿಪಾದಿತವಾಗಿರುವುದು ಬಸವಣ್ಣನ ವರಿಗೆ ಗಂಗಾಂಬಿಕೆ - ನೀಲಾಂಬಿಕೆ ಎಂಬ ಇಬ್ಬರು ಪತ್ನಿಯರು ಇದ್ದರೆಂಬುದಾಗಿ

ಮುಗಟಖಾನ ಹುಬ್ಬಳ್ಳಿ ಬಳಿ ಇರುವುದು ಗಂಗಾಂಬಿಕೆಯ ಸಮಾಧಿ, ತಂಗಡಗಿಯ ಬಳಿ ಇರುವುದು ನೀಲಾಂಬಿಕೆಯ ಸಮಾಧಿ ಎಂದೇ ನಮ್ಮೆಲ್ಲರ ತಿಳುವಳಿಕೆ. ಇತ್ತೀಚೆಗೆ ಶ್ರೀ. ಹೆಚ್. ದೇವೀರಪ್ಪನವರು ಬಸವಣ್ಣನವರಿಗೆ ಒಬ್ಬಳೇ ಹೆಂಡತಿ ಇದ್ದುದು. ಆಕೆಯ ಹೆಸರು 'ನೀಲಗಂಗಾ' ಎಂದು ಪ್ರತಿಪಾದಿಸಿದ್ದಾರೆ. ಇದು ಹೊಸದಾದ ವಿಷಯ ಇನ್ನೂ ಈ ಬಗ್ಗೆ ಚರ್ಚೆ–ಸಂಶೋಧನೆ ಆಗಬೇಕಾಗಿದೆ. ನೀವೂ ಆಲೋಚಿಸಿರಿ. ಒಬ್ಬಳೇ ಇದ್ದುದು ಎಂದು ಸಿದ್ಧವಾದರೆ ಅದು ಎಲ್ಲರಿಗೂ ಸಂತೋಷ ತರುವಂಥದೇ ಅಲ್ಲವೆ ?

❋

ದಾನಿಗಳಲ್ಲಿ ಮನವಿ

ಕೂಡಲ ಸಂಗಮವು ಷೋಲ್ಲಾಪುರ-ಚಿತ್ರದುರ್ಗ ಹೆದ್ದಾರಿ ನಂ 13 ರಿಂದ ಸುಮಾರು 8 ಕಿಲೋಮೀಟರ್ ದೂರದಲ್ಲಿದೆ. ಒಂದು ಕಿಲೋಮೀಟರಿಗೆ ಒಂದರಂತೆ 4 ಅಡಿ–8 ಅಡಿ ಉದ್ದದ ಫಲಕಗಳನ್ನು ತಯಾರಿಸಿ ಅದರ ಮೇಲೆ ಬಸವಣ್ಣನವರ ಶ್ರೀ ಮೂರ್ತಿಯ ಚಿತ್ರದೊಡನೆ ವಿಶ್ವಮಾನವ ಸಂದೇಶ ಸಾರುವ ವಚನಗಳನ್ನು ದಪ್ಪ ಅಕ್ಷರಗಳಲ್ಲಿ ಬರೆಸಿಸಿ, ವಚನ ಫಲಕವನ್ನು ಕಬ್ಬಿಣದ ಆಂಗಲ್‌ಗಳಿಗೆ ಜೋಡಿಸಿ, ಕಾಂಕ್ರೀಟ್ ಹಾಕಿ ಭೂಮಿಯಲ್ಲಿ ನೆಡಿಸಿ, ಬರುವವರು ಓದಲು ಅನುಕೂಲವಾಗುವಂತೆ ಹಾಕುವ ಬಯಕೆ ಇದೆ. ಯಾರಾದರೂ ದಾನಿಗಳು ಅವರೇ ಬರೆಸಿ, ಆ್ಯಂಗಲ್ ಹಾಕಿಸಿ ತಂದು ಕೊಡುವುದಾದರೆ ಸಂತೋಷ. ಅಂಥವರಿಗೆ ವಚನಗಳನ್ನು ಆಯ್ಕೆ ಮಾಡಿಕೊಡಲಾಗುತ್ತದೆ.

ಅಲ್ಲಿಯೇ ತಯಾರು ಮಾಡಬೇಕೆಂದರೆ ತಗಡು, ಆ್ಯಂಗಲ್, ಬೆಸುಗೆ, ಬರೆಸುವಿಕೆ, ಕಾಂಕ್ರೀಟ್ ಹಾಕುವಿಕೆ ಎಲ್ಲ ಸೇರಿ 2500-00 ರೂಗಳ ವೆಚ್ಚ ಬರುತ್ತದೆ. ತೈಲವರ್ಣ ಚಿತ್ರವಿರುವ ಈ ಫಲಕದಲ್ಲಿ ದಾನಿಗಳ ಹೆಸರು, ವಿವರ ಕಾಣಿಸಲಾಗುತ್ತದೆ.

ಈ ಕಾರ್ಯಕ್ಕೆ ವಿವಿಧ ಸಂಘ–ಸಂಸ್ಥೆಗಳೂ ಮುಂದೆ ಬರಬಹುದು.

ಆಸಕ್ತರು ಪತ್ರ ಬರೆಯಿರಿ

ವಿಶ್ವಕಲ್ಯಾಣ ಮಿಷನ್
ಬಸವ ಮಂಟಪ, 20 ನೇ ಮುಖ್ಯರಸ್ತೆ
ಎರಡನೆ ಬ್ಲಾಕು, ರಾಜಾಜಿನಗರ
ಬೆಂಗಳೂರು–560010

ಬಸವ ಧರ್ಮ ಪೀಠ
ಮಹಾಮನೆ ಸಂಕೀರ್ಣ
ಕೂಡಲ ಸಂಗಮ–587141
ತಾ॥ಹುನಗುಂದ, ಜಿಲ್ಲ॥ಬಿಜಾಪುರ

ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ (ರಿ)
2078, 20ನೆಯ ಮುಖ್ಯರಸ್ತೆ,
ಎರಡನೆಯ ಬ್ಲಾಕು, ರಾಜಾಜಿನಗರ,
ಬೆಂಗಳೂರು–560010.

ಬಸವ ಧರ್ಮ ಪೀಠ (ರಿ)
ಮಹಾಮನೆ ಸಂಕೀರ್ಣ
ಕೂಡಲಸಂಗಮ–587141
ತಾ–ಹುನಗುಂದ, ಜಿಲ್ಲೆ–ಬಿಜಾಪೂರ.

ಸಹೃದಯರೇ,

ಅಕ್ಟೋಬರದ ಶಿಬಿರ ನಡೆದ ತಕ್ಷಣ, ಅಕ್ಟೋಬರ 11ರಂದು ಕಾರ್ಯಕ್ರಮ ಪೂರೈಸುವುದರಿಂದ 12ನೇ ತಾರೀಖಿನಿಂದ ಒಂದು ವಾರ ಕಾಲ ಶಿವಾನುಭವ ಪ್ರವಾಸವೊಂದನ್ನು ಹಮ್ಮಿಕೊಳ್ಳುತ್ತಿದ್ದೇವೆ. ಬೆಂಗಳೂರು–ಕೂಡಲ ಸಂಗಮ–ತಂಗಡಗಿ (ನೀಲಾಂಬಿಕೆಯ ಐಕ್ಯಸ್ಥಾನ)–ಬಸವನ ಬಾಗೇವಾಡಿ–ಬಿಜಾಪುರ–ಪಂಢರಾಪುರ–ಸೊಲ್ಲಾಪುರ–ಬಸವ ಕಲ್ಯಾಣ (ಬೀದರ)–ಹೈದರಾಬಾದ–ಶ್ರೀಶೈಲ-ಕದಳಿವನ–ಮಹಾನಂದಿ–ಮಂತ್ರಾಲಯ–ಹಂಪೆ–ಹೊಸಪೇಟೆ–ಬೆಂಗಳೂರು.

❋ ವಿಶೇಷ ವಿವರಗಳು.

❋ ಹೊಸಪೇಟೆಯಿಂದಲೇ ಇಳಿದು ತಮ್ಮ ತಮ್ಮ ಊರುಗಳಿಗೆ ಹೋಗುವವರು ಹೋಗಬಹುದು.

❋ ಶಿಬಿರದಲ್ಲಿ ಭಾಗವಹಿಸಬೇಕು ಎನ್ನುವವರು ಅಕ್ಟೋಬರ 1ರೊಳಗೆ ಕೂಡಲ ಸಂಗಮವನ್ನು ಸೇರಿ, 12–10–1987ರಿಂದ ಪ್ರವಾಸದಲ್ಲಿಯೂ ಭಾಗಿಗಳಾಗಬಹುದು. ಅಂಥವರು ಶಿಬಿರಶುಲ್ಕ 100 ರೂ ಮತ್ತು ಪ್ರವಾಸಶುಲ್ಕ 500 ರೂ. ಹೀಗೆ 600 ರೂ ಸಲ್ಲಿಸಬೇಕು.

❋ ಶಿಬಿರದಲ್ಲಿ 10 ದಿವಸಗಳ ಕಾಲ ಭಾಗವಹಿಸಲಾಗದೆ, ಅಕ್ಟೋಬರ 11ನೇ ತಾರೀಖಿಗೆ ಬಂದು ಸೇರುವವರು 500 ರೂಪಾಯಿಗಳನ್ನು ಕೊಡಬೇಕು.

❋ ಬೆಂಗಳೂರಿನಿಂದ ಹೆಚ್ಚಿನ ಜನರು ಹೊರಡುವುದಿದ್ದರೆ ಇಲ್ಲಿಂದಲೇ ಒಂದು ಬಸ್ಸನ್ನು ಏರ್ಪಡಿಸುವ ಕಾರಣ ಅಕ್ಟೋಬರ 10ರ ರಾತ್ರಿ ಹೊರಡುವ ಬಸ್ಸಿನಲ್ಲಿ ಹೊರಟು ಸಂಗಮಕ್ಕೆ ಬರಬಹುದು. 11–10–1987 ರಂದು ಸಂಗಮಕ್ಷೇತ್ರ ವೀಕ್ಷಣೆ ಮಾಡಿ ಮರುದಿವಸ ಪ್ರವಾಸ ಹೊರಡುವುದು.

ಆಸಕ್ತರಾದವರು ಆದಷ್ಟು ಬೇಗನೆ ಪ್ರವಾಸವೆಚ್ಚ, ಶಿಬರ ವೆಚ್ಚಕ್ಕೆ ಹಣವನ್ನು ಸಲ್ಲಿಸಬೇಕು. ಮನಿಯಾರ್ಡರ್, ಬ್ಯಾಂಕು ಡ್ರಾಫ್ಟ, ನಗದಾಗಿ ಸಲ್ಲಿಸಬಹುದು. ಚೆಕ್ಕುಗಳಿಗೆ ಅವಕಾಶವಿಲ್ಲ. ಬ್ಯಾಂಕ್ ಡ್ರಾಫ್ಟನ್ನು ಬರೆಸುವಾಗ ವಿಶ್ವಕಲ್ಯಾಣ ಮಿಷನ್, ರಾಜಾಜಿನಗರ, ಬೆಂಗಳೂರು ಎಂದು ಬರೆಸಬೇಕು. ಇನ್ನು ಹೆಚ್ಚಿನ ವಿವರಗಳು ಬೇಕಾಗಿದ್ದರೆ ಪತ್ರವ್ಯವಹಾರ ಮಾಡಿರಿ. ಬೆಂಗಳೂರಿನ ವಿಳಾಸಕ್ಕಾದರೂ ಮಾಡಬಹುದು. ಕೂಡಲ ಸಂಗಮದ ವಿಳಾಸಕ್ಕಾದರೂ ಮಾಡಬಹುದು.

ದೂರವಾಣಿ : 352335

—ಮಾತಾಜಿ, ಬೆಂಗಳೂರು.

ವಿ. ಸೂ. : ಹಣ ತುಂಬಿ ಹೆಸರು ನೋಂದಾಯಿಸಿದವರಿಗೆ ವಿಶೇಷ ವಿವರ, ಸೂಚನೆಗಳಿದ್ದರೆ ಕಳಿಸಿಕೊಡಲಾಗುವುದು.

ಆಗಸ್ಟ್, 1987

ಜೀವನವೂ ಬಾಡಿಗೆ ವಾಹನ

ಒಂದು ಸಲ ಕಾರು ರಿಪೇರಿಗೆ ಹೋಗಿದ್ದಿತು. ಸಂಪೂರ್ಣವಾಗಿ ರಿಪೇರಿ ಮಾಡಿಸಬೇಕೆಂದು ಗೆರೇಜಿಗೆ ಬಿಟ್ಟಿದ್ದಾಗಲೇ, ಒಬ್ಬರು ನಮ್ಮ ಆತ್ಮೀಯ ಭಕ್ತರ ಮನೆಗೆ ಗೃಹ ಪ್ರವೇಶ ಮತ್ತು ಪಾದ ಪೂಜೆಗೆ ಹೋಗಬೇಕಾಯಿತು. ಸರಿ ಗಂಟೆಗಿಷ್ಟು ಬಾಡಿಗೆ ಎಂಬ ನಿಯಮದ ಮೇಲೆ ಕಾರು ತರಿಸಿದೆವು. ಗಂಟೆಯ ಆಧಾರದ ಮೇಲೆ ಬಾಡಿಗೆ ಎಂದು ಸಮಯಕ್ಕೆ ಸರಿಯಾಗಿ ಸಿದ್ಧವಾದೆವು; ಕಾರು ಬರುವುದರಲ್ಲಿ ಸಿದ್ಧವಿದ್ದರೆ ಬಾಡಿಗೆ ವ್ಯರ್ಥವಾಗದು ಎಂದು ಸಮಯಪಾಲನೆ ಮಾಡಿ ತಯಾರಾದೆವು. ಸಮಯ ವ್ಯರ್ಥವಾಗದಂತೆ ಕಾರ್ಯಕ್ರಮ ರೂಪಿಸುವ ಹವಣಿಕೆಯಲ್ಲಿ ತೊಡಗಿದೆವು. ಕಾರು ನಮ್ಮದೇ ಇದ್ದಾಗ "ಪರವಾಗಿಲ್ಲ...ನಮ್ಮದು ತಾನೆ?" ಎನ್ನಿಸುತ್ತದೆ ಅಲ್ಲವೆ?

ಹಾಗೆ ಆಲೋಚನೆ ಮಾಡುವಾಗ ಒಂದು ವಿಚಾರ ಸ್ಫುರಿಸಿತು. "ಈ ಜೀವನ ಸಹ ಪರಮಾತ್ಮನ ಮಾಲಿಕತ್ವದ, ನಾವು ಬಾಡಿಗೆಗಾಗಿ ಪಡೆದ ಸಾಧನ ಎಂಬ ಭಾವ ಬಲಿತಾಗ ಸಮಯವನ್ನು ವ್ಯರ್ಥಮಾಡಬೇಕು ಎನ್ನಿಸದು. ಆಯುಷ್ಯದ ಕ್ಷಣಕ್ಷಣವೂ ಸಾರ್ಥಕವಾಗಬೇಕು ಅದರಂತೆ ಕಾರ್ಯ ಮಾಡಬೇಕು ಎನ್ನಿಸುತ್ತದೆ. ಅದನ್ನೇ ಬಸವಣ್ಣನವರು ಹೀಗೆ ಹೇಳುವುದು, "ಎನ್ನೊಡಲ ಅವಸರಕ್ಕೆ ಕುದಿಯೆ; ಎನ್ನೊಡೆಯನ ಅವಸರಕ್ಕೆ ಕುದಿವೆ."

ರಾಷ್ಟ್ರದ ಸಂಪತ್ತು

ಒಮ್ಮೆ ಪ್ರವಾಸ ಮಧ್ಯದಲ್ಲಿ ಒಬ್ಬರು ಕೆ. ಇ. ಬಿ ಎಂಜಿನಿಯರರ ಮನೆಯಲ್ಲಿ ಇಂದರೆ ಅವರು ನಮ್ಮ ಆತ್ಮೀಯ ಭಕ್ತರು. ಉಳಿಯುವ ಸಂದರ್ಭ ಬಂದಿತು. ಎಲ್ಲರೂ ಪಡಸಾಲೆ (ಹಾಲ್) ಯಲ್ಲಿ ಕುಳಿತು ಮಾತನಾಡುತ್ತಲಿದ್ದೆವು. ಆಗ ಊಟದ ಕೋಣೆಯಲ್ಲಿ ಮತ್ತು ಅಡಿಗೆ ಕೋಣೆಯಲ್ಲಿ ವಿದ್ಯುತ್ ದೀಪಗಳು ಉರಿಯುತ್ತಲಿದ್ದವು. ಅನವಶ್ಯಕವಾಗಿ ದೀಪಗಳು ಉರಿಯದಂತೆ ಸದಾ ನೋಡಿಕೊಳ್ಳುವ ಅಭ್ಯಾಸ ಇರುವ ನಾನು, ಆ ದೀಪಗಳನ್ನು ಆರಿಸಲು ತಿಳಿಸಿದೆ. ಆಗ ಮನೆಯವರು, "ಉರಿದರೆ ಉರಿಯಲಿ ಬಿಡಿ ನಮಗೆ ಬಿಲ್ಲು ಕಟ್ಟುವ ಪ್ರಮೇಯವಿಲ್ಲ." ಎಂದರು. ಸರಿ, ಉಪದೇಶ ಆರಂಭಿಸಿದೆ ಪುಕ್ಕಟೆ ಸಿಕ್ಕರೂ ಆ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಳ್ಳಬಾರದು. ವಿದ್ಯುತ್ತು ಒಂದು ಸಂಪತ್ತು. ಅನವಶ್ಯಕವಾಗಿ ಉರಿಸಿ ವ್ಯರ್ಥ ಮಾಡಬಾರದು. ನಿಮಗೆ ಬಳಕೆಗೆ ಉಚಿತವಾಗಿ ಕೊಟ್ಟರೂ ಅದರ ಉತ್ಪಾದನೆಗಾಗಿ ದೇಶಕ್ಕೆ ಖರ್ಚು ಆಗಿರುವುದಿಲ್ಲವೆ?"

ಉಪದೇಶವನ್ನು ಮಾಡಿದ್ದು ನಿಜವಾದರೂ ಮನಸ್ಸು ಮಾತ್ರ, "ಇಂಥಾ ವಿದ್ಯಾವಂತರಲ್ಲೇ ಹೊಣೆಗಾರಿಕೆ ಇಲ್ಲವಾದರೆ ಇನ್ನು ಅವಿದ್ಯಾವಂತರಾದ ಪ್ರಜೆಗಳು ಹೇಗೆ ರಾಷ್ಟ್ರದ ಸಂಪತ್ತನ್ನು ಬಳಸಬಲ್ಲರು?" ಎಂದು ಚಿಂತಿಸುತ್ತಿತ್ತು.

Kalyana Kirana–monthly magazine Edited and Published by B. Shambhulingaiah at Sarvajna Printing press, Basava Gangotri, Kumbalgod–560074.

ಧರ್ಮ ದುಂದುಭಿ

"ಕಲ್ಯಾಣ ಕಿರಣ" ವಿಶೇಷ ಸಂಚಿಕೆ

ವಿಶ್ವಗುರು ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ತತ್ತ್ವಗಳನ್ನು ಕುರಿತು ಅಭ್ಯಸಿಸಲು, ಚಿಂತನ–ಮಂಥನ ಅನುಷ್ಠಾನ ಮಾಡಲು ವರ್ಷಕ್ಕೊಮ್ಮೆ ಧಾರ್ಮಿಕ ತರಬೇತಿ ಶಿಬಿರವನ್ನು, ಶಿಬಿರಾಂತ್ಯದಲ್ಲಿ ಭಕ್ತಿ ಪಕ್ಷದ ಸಮ್ಮೇಳನವನ್ನು ಆಚರಿಸಲಾಗುವುದಷ್ಟೆ ಈ ಕಾರ್ಯಕ್ರಮವನ್ನು ೧೯೮೭ ಅಕ್ಟೋಬರದಲ್ಲಿ ಏರ್ಪಡಿಸಲಿದ್ದು, ಈ ಕಾರ್ಯಕ್ರಮದ ಅಂಗವಾಗಿ 'ಕಲ್ಯಾಣ ಕಿರಣ' ದ ವಿಶೇಷ ಸಂಚಿಕೆಯನ್ನು ಹೊರತರಲಾಗುತ್ತಿದೆ.

ಈ ವಿಶೇಷ ಸಂಚಿಕೆ "ಧರ್ಮ ದುಂದುಭಿ" ಕಲ್ಯಾಣ ಕಿರಣದ ವಿಶೇಷಾಂಕಕ್ಕೆ ಜಾಹಿರಾತುಗಳನ್ನು ಸಂಗ್ರಹಿಸಲಿದ್ದು, ವಿವರಗಳು ಕೆಳಗಿನಂತಿವೆ.

ವಿಶೇಷ ಸಂಚಿಕೆಯ ರಕ್ಷಾಕವಚ (ಆಫ್‌ಸೆಟ್ ವರ್ಣಗಳಲ್ಲಿ)

ಮೊದಲನೆಯ ಪುಟ ೨೦೦೦=೦೦	(ಶರಣರ ಫೋಟೋಕ್ಕೆ ದಾನಿಗಳು)
ನಾಲ್ಕನೆಯ ಪುಟ	೧೫೦೦–೦೦
೨ ನೆಯ ಮತ್ತು ೩ ನೆಯ ಪುಟಗಳು	೧೦೦೦–೦೦
ವಿಶೇಷ ಪುಟಗಳು	೫೦೦–೦೦
ಒಳಪುಟಗಳು-ಒಂದುಪೂರ್ಣಪುಟ	೩೦೦–೦೦
ಅರ್ಧಪುಟ	೨೦೦–೦೦

ವಿ. ಸೂ : ಅರ್ಧಪುಟಕ್ಕಿಂತಲೂ ಕಡಿಮೆಯಾದ ಜಾಹಿರಾತನ್ನು ಸ್ವೀಕರಿಸುವುದಿಲ್ಲ.

ಪೂರ್ಣಪುಟ : ೨೨ ಸೆಂ. ಮೀ × ೧೪ ಸೆಂ. ಮೀ

ಅರ್ಧಪುಟ : ೧೪ ಸೆಂ. ಮೀ × ೧೧ ಸೆಂ. ಮೀ

ಜಾಹಿರಾತುಗಳ ಪೂರ್ಣವಿವರಗಳು ಪೂರ್ಣ ಮೊತ್ತದೊಡನೆ ೧೫–೯–೧೯೮೭ ರ ಮುಂಚೆ ಕೈಸೇರುವಂತಾಗಬೇಕು. ಬ್ಯಾಂಕ್ ಡ್ರಾಫ್ಟ್ ಮತ್ತು ಚೆಕ್ಕುಗಳನ್ನು Kalyana kirana, Bangalore ಹೆಸರಿನಲ್ಲಿ ತೆಗೆಸಿ ಕೆಳಗಿನ ಯಾವುದೇ ವಿಳಾಸಗಳಿಗೆ ಕಳಿಸಬಹುದು.

ವಿ. ಸೂ : ಸ್ವಯಂ ಇಚ್ಛೆಯ ಕಾಣಿಕೆ ಸಲ್ಲಿಸುವವರೂ ಸಲ್ಲಿಸಬಹುದು.

೧. ಕಾರ್ಯದರ್ಶಿ, ಜಗನ್ಮಾತಾ ಅಕ್ಕಮಹಾದೇವಿ ಆಶ್ರಮ, ಉಳವಿರಸ್ತೆ
ರೈಲ್ವೆ ಗೇಟ್ ಬಳಿ, ಧಾರವಾಡ–೫೮೦೦೦೩.

೨. ಕಾರ್ಯದರ್ಶಿ, ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
ಎರಡನೆ ಬ್ಲಾಕು, ಕಾರ್ಡ್‌ರಸ್ತೆ, ರಾಜಾಜಿನಗರ.
ಬೆಂಗಳೂರು–೫೬೦೦೧೦, ದೂರವಾಣಿ, ೩೫೨೩೩೫

ಕಲ್ಯಾಣ ಕಿರಣ KRNB 312/BGW 92 AUGUST 19

